
ಐಕ್ಯರಂಗ

ಮೇದಿನದ ವಿಶೇಷಾಂಕ 1981



ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 19–20 ಮೇ 17, 1981 ಬೆಲೆ : ರೂ. 1–25

ಮುಖಪುಟ ವಿನ್ಯಾಸ – ವಸಂತ

ಗೊಂದಲಮಯವಾಗಿ ಕಾಣುವ ಪ್ರಚಲಿತ ರಾಜಕೀಯ ಪರಿಸ್ಥಿತಿ

"ಪರ್ಯಾಯ ಒದಗಿಸುವ ಸಾಧ್ಯತೆ"

ಎಂ. ಕೆ. ಭಟ್

ಪರ್ಯಾಯದ ಮಾತು :

ಭಾರತ ದೇಶದ ರಾಜಕೀಯವು ಇಂದು ಗೊಂದಲಮಯವಾಗಿ ತೋರುತ್ತಿದೆ. ಜನಸಾಮಾನ್ಯರಿಗೆ ಅರ್ಥವಾಗದಿರುವ ಇಂದಿನ ಬೆಳವಣಿಗೆಗಳು ಮತ್ತು ಸ್ವಾತಂತ್ರ್ಯಾನಂತರ ಆಡಳಿತ ನಡೆಸಿರುವ ಬಂಡವಾಳಶಾಹಿ-ಭೂಮಾಲಕ ಪಕ್ಷಗಳು ಜನರಿಗಿತ್ತ ಆಶ್ವಾಸನೆಗಳನ್ನು ಈಡೇರಿಸದಿರುವುದರಿಂದ, ರಾಜಕೀಯ ಪಕ್ಷಗಳ ಬಗ್ಗೆ ತಿರಸ್ಕಾರದ ಮನೋಭಾವನೆಯನ್ನು ಬೆಳೆಸುತ್ತಲಿದೆ. ಸಂಘಟನೆ ಮತ್ತು ಹೋರಾಟದ ಮಾರ್ಗವನ್ನು ಅನುಸರಿಸುತ್ತಿರುವ ದುಡಿಯುವ ಜನತೆಯ ಪರವಾಗಿರುವ ಎಡಪಕ್ಷಗಳು ಬಲಿಷ್ಠವಾಗಿರುವಲ್ಲೆಲ್ಲಾ ಈ ಮನೋಭಾವನೆಗೆ ಬದಲು ರಾಜಕೀಯ ಪ್ರಜ್ಞೆ ಇದೆ; ಜನಸಾಮಾನ್ಯರು ರಾಜಕೀಯದೊಂದಿಗೆ ಹಾಸುಹೊಕ್ಕಾಗಿದ್ದಾರೆ. ಮತ್ತೆ ಅಧಿಕಾರಕ್ಕೆ ಬಂದು ಆಡಳಿತ ನಡೆಸುತ್ತಲಿರುವ ಇಂದಿರಾ ಕಾಂಗ್ರೆಸ್ ಬಗ್ಗೆ ಜನರಲ್ಲಿ ಭ್ರಮ ನಿರಸನವಾಗುತ್ತಿದೆ. ಸಮಸ್ಯೆಗಳು ಹೆಚ್ಚಿದಂತೆಲ್ಲಾ ಜನತೆಯ ಚಳುವಳಿಗಳೂ ಬೆಳೆಯುತ್ತಿವೆ. ಇಂದಿರಾ ಕಾಂಗ್ರೆಸ್ಸು ಅನುಸರಿಸುತ್ತಿರುವ ಜನವಿರೋಧಿ ಕ್ರಮಗಳು ಹೆಚ್ಚಿದಂತೆಲ್ಲಾ, ಇಂದಿರಾಗಾಂಧಿ ಮತ್ತು ಇಂದಿರಾ ಕಾಂಗ್ರೆಸ್ಸಿಗೆ ಬದಲಿ ಯಾರು ? ಎಂಬ ಪ್ರಶ್ನೆ ಕೇಳಿಬರುತ್ತಿದೆ.

ಇಂದಿರಾ ಕಾಂಗ್ರೆಸ್ಸಿಗೆ ರಾಷ್ಟ್ರಮಟ್ಟದಲ್ಲಿ ನಿಜವಾದ ಬದಲಿ ಒದಗಿಸುವುದು ತನ್ನಿಂದಲೇ ಸಾಧ್ಯ ಎಂದು ಸಾರುವುದರಲ್ಲಿ ತೀವ್ರವಾದ ಪೈಪೋಟಿ ನಡೆಯುತ್ತಿದೆ. ಇಂದಿರಾ ಕಾಂಗ್ರೆಸ್ಸಿಗೆ ನಿಜವಾದ ಪರ್ಯಾಯ ಒದಗಿಸುವುದು ತಮ್ಮ ಪಕ್ಷದಿಂದಲೇ ಸಾಧ್ಯ ಎನ್ನುವುದು ಭಾರತೀಯ ಜನತಾ ಪಕ್ಷದ ಅಭಿಪ್ರಾಯ. ಸಧ್ಯ ನಾವು ಬಲಿಷ್ಟವಾಗಿಲ್ಲ; ಬೇಗನೆ ರಾಷ್ಟ್ರದಾದ್ಯಂತ ಬಲಿಷ್ಟವಾಗಿ ಬೆಳೆದು ಪರ್ಯಾಯ ಪಕ್ಷವಾಗುತ್ತೇವೆ ಎಂದು ಘೋಷಿಸುತ್ತಲಿರುವ ಬಾ.ಜ.ಪ.ದವರು ಗಾಂಧಿ ಸಮಾಜವಾದವೇ ನಮ್ಮ ಗುರಿ ಎಂದು ಸಾರಿದ್ದಾರೆ. ಜನತಾಪಕ್ಷದ ಹಿರಿಯರಾದ ಮೊರಾರ್ಜಿ ದೇಸಾಯಿಯವರಂತೂ ಮತ್ತೆ ತಮ್ಮ ಸರಕಾರ ಅಧಿಕಾರ ನಡೆಸುತ್ತೆ; ನಮ್ಮದೇ ಇಂದಿರಾ ಕಾಂಗ್ರೆಸ್ಸಿಗೆ ಪರ್ಯಾಯ ಎಂದು ಹೇಳುತ್ತಲಿದ್ದಾರೆ. ಇಂದಿರಾ ಕಾಂಗ್ರೆಸ್ಸಿಗೆ ನಿಜವಾದ ಬದಲಿ ತಮ್ಮ ಪಕ್ಷವೆಂದು ಜನತಾಪಕ್ಷದವರು ಪ್ರಚಾರ ನಡೆಸುತ್ತಿದ್ದಾರೆ. ಎಡಪಕ್ಷಗಳು ದುರ್ಬಲವಾಗಿದ್ದು, ಬದಲಿ ಒದಗಿಸಲು ಸಾಧ್ಯವಿಲ್ಲ; ಇಂದಿನ ಪರಿಸ್ಥಿತಿಯಲ್ಲಿ ಜನತಾಪಕ್ಷ, ಭಾರತೀಯ ಜನತಾಪಕ್ಷ, ಲೋಕದಳ ಮತ್ತು ಕಾಂಗ್ರೆಸ್ (ಯು)ನಂತ ಪಕ್ಷಗಳು ಒಂದುಸೇರಿ ಒಂದು ಬದಲಿ ರಾಜಕೀಯ ಶಕ್ತಿಯಾಗಬೇಕೆಂದು ಪ್ರತಿಪಾದಿಸುವುದೂ ಮತ್ತು ಪ್ರಚಾರವೂ ನಡೆಯುತ್ತಿದೆ.

ಪರ್ಯಾಯ ಒದಗಿಸುವ ಸಾಧ್ಯಾಸಾಧ್ಯತೆಗಳನ್ನು ಪರೀಕ್ಷಿಸುವ ಮೊದಲು, ಇಂದಿನ ಪರಿಸ್ಥಿತಿಯೇನು, ಜನರ ಸಂಕಷ್ಟಗಳಿಗೆ ಕಾರಣವೇನು, ಜನತೆಯ ಸಂಕಷ್ಟಗಳ ಪರಿಹಾರಕ್ಕೆ ಅನುಸರಿಸತಕ್ಕ ದಾರಿ ಯಾವುದು ಎಂಬುದನ್ನು ತಿಳಿಯುವುದು ಅವಶ್ಯ. ಆಗ ಮಾತ್ರ ಜನತೆಯ, ರಾಷ್ಟ್ರದ ಸಮಸ್ಯೆಗಳ ಪರಿಹಾರಗಳಿಗೆ ಸರಿಯಾದ ಮಾರ್ಗವನ್ನು ಅನುಸರಿಸುವ ಪಕ್ಷ ಮತ್ತು ಶಕ್ತಿಗಳಿಂದ ನಿಜವಾದ ಪರ್ಯಾಯವನ್ನು ಒದಗಿಸುವುದು ಸಾಧ್ಯ ಎಂಬ ವಿಚಾರ ಸ್ಪಷ್ಟವಾಗುತ್ತದೆ. ಯಾರಿಂದ ಪರ್ಯಾಯ ಒದಗಿಸಬಹುದು ಎಂದು ಹೇಳಲೂ ಸಾಧ್ಯವಾಗುತ್ತದೆ.

ಸ್ವಾತಂತ್ರ್ಯಾನಂತರದ ಬೆಳವಣಿಗೆ :

1981 ಆಗಸ್ಟ್ 15ಕ್ಕಾಗುವಾಗ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆತು ಮೂವತ್ತನಾಲ್ಕು ವರ್ಷಗಳಾಗುತ್ತವೆ. ಈ ಕಾಲಘಟ್ಟದಲ್ಲಿ ಜನತೆಯ ಸಮಸ್ಯೆಗಳು ಪರಿಹಾರವಾಗುವ ಬದಲು ಸಂಕಷ್ಟಗಳು ಇನ್ನೂ ಹೆಚ್ಚಿವೆ-ಬಡತನ, ದಾರಿದ್ರ್ಯ, ನಿರುದ್ಯೋಗ, ಬೆಲೆಏರಿಕೆ, ಅನಕ್ಷರತೆ, ಭ್ರಷ್ಟಾಚಾರ, ಸಾಮಾಜಿಕ ಅಸಮಾನತೆ ಮತ್ತು ಶೋಷಣೆ ಎಲ್ಲವೂ ಒಂದಕ್ಕೆ ನೂರುಪಟ್ಟು ಹೆಚ್ಚಿವೆ. ಆದರೆ ಸ್ವಾತಂತ್ರ್ಯದೊರೆತ ಮೇಲೆ ಇಂದಿನತನಕ ನಮ್ಮ ದೇಶದಲ್ಲಿನ ಉತ್ಪಾದನೆ ಮತ್ತು ಸಂಪತ್ತು ಬಹಳಷ್ಟು ವೃದ್ಧಿಗೊಂಡಿದೆ. ಇಂದು ಆಡಳಿತ ನಡೆಸುತ್ತಲಿರುವ ಇಂದಿರಾ ಕಾಂಗ್ರೆಸ್ಸಿನ ವಕ್ತಾರರುಗಳೇ ಹೇಳುವಂತೆ ಹೆಚ್ಚಿರುವ ಉತ್ಪಾದನೆಯ ಲಾಭ, ಸಂಪತ್ತು, ಇವೆಲ್ಲಾ ಕೇವಲ ಕೆಲವೇಮಂದಿ ಗುತ್ತೇದಾರಿ ಬಂಡವಾಳಗಾರರ ಕೈಗೆ ಸೇರಿದೆ. ದುಡಿಯುವ ಜನತೆಯ ಪರಿಶ್ರಮದಿಂದ ಆದ ಉತ್ಪಾದನೆಯ ಪ್ರತಿಫಲ ಕೆಲವೇ ಶ್ರೀಮಂತರ ಕೈಗೆ, ಬಂಡವಾಳಗಾರ ಮತ್ತು ಜಮೀನುದಾರರ ಕೈಗೆ ಹೋಗಿದೆ. ಅಂದರೆ ಸಂಪತ್ತು ಹೆಚ್ಚಿದೆ; ಸಂಪತ್ತು ಕೆಲವರ ಕೈಯನ್ನು ಸೇರಿದೆ; ಬಡತನ ಮತ್ತು ಜನತೆಯ ಸಂಕಷ್ಟಗಳು ಗಗನಕ್ಕೇರಿವೆ ! ಇದೇ ವಿಪರ್ಯಾಸ !

ಸ್ವಾತಂತ್ರ್ಯ ದೊರೆತ ಮೇಲೆ ಹಲವು ಪಂಚವಾರ್ಷಿಕ ಯೋಜನೆಗಳು ಜಾರಿಗೆ ಬಂದು, ಇದೀಗ ಆರನೆಯ ಪಂಚವಾರ್ಷಿಕ ಯೋಜನೆಯ ಒಂದು ವರ್ಷ ಮುಗಿದಿದೆ. (ಜನತಾ ಪಕ್ಷದ ಆಡಳಿತದ ಕಾಲದಲ್ಲಿ ಇದನ್ನೂ ಕೈ ಬಿಡಲಾಗಿತ್ತು). ದೇಶದ ಉತ್ಪಾದನೆ ಮತ್ತು ಸಂಪತ್ತುಗಳನ್ನು ಅಧಿಕಗೊಳಿಸುವುದು, ಶ್ರೀಮಂತರ ಮತ್ತು ಗರೀಬರ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡುವುದು ಪಂಚವಾರ್ಷಿಕ ಯೋಜನೆಯ ಉದ್ದೇಶವೆಂದು ಪ್ರತಿಯೊಂದು ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ಸಾರುತ್ತಾ ಬಂದರು ಆಡಳಿತ ನಡೆಸಿದವರು. ಆದರೆ ಪ್ರತಿಯೊಂದು ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಉತ್ಪಾದನೆಯೇನೋ ಅಧಿಕವಾಗಿದೆ; ಆದರೆ ಶ್ರೀಮಂತರು ಮತ್ತು ಗರೀಬರ ಮಧ್ಯೆ ಇರುವ ಅಂತರವೂ ಹೆಚ್ಚಿದೆ. ಮುಂದಿನ ಯೋಜನೆಯಲ್ಲಾದರೂ ಹೀಗಾಗದಂತೆ ಮಾಡಬೇಕು ಎಂದರು. ಆದರೆ ಮತ್ತೆ ಎಲ್ಲಾ ಯೋಜನೆಗಳಲ್ಲಿ ನಡೆದುದು ಮತ್ತು ಈಗಿನ ಆರನೆ ಪಂಚವಾರ್ಷಿಕ ಯೋಜನೆಯಲ್ಲೂ ನಡೆಯುತ್ತಿರುವುದು ಇದೇ ಆಗಿದೆ. ಉತ್ಪಾದನೆ, ಸಂಪತ್ತು ಹೆಚ್ಚುವುದು—ಇದರೊಂದಿಗೆ ಶ್ರೀಮಂತರ ಮತ್ತು ಗರೀಬರ ಅಂತರ ಜಾಸ್ತಿಯಾಗುವುದು; ಲಾಭ ಕೆಲವೇ ಮಂದಿಯ ಕೈಯನ್ನು ಸೇರುವುದು!

ಅನುಸರಿಸಿದ ಮಾರ್ಗ

ಇದು ಹೇಗೆ ಸಾಧ್ಯವಾಗಿದೆ? ಸ್ವಾತಂತ್ರ್ಯ ದೊರೆತ ಮೇಲೆ ಜವಹರಲಾಲ್ ನೆಹರು, ಲಾಲ್ ಬಹಾದ್ದೂರ್ ಶಾಸ್ತ್ರಿ, ಇಂದಿರಾಗಾಂಧಿ, ಮೊರಾರ್ಜಿ ದೇಸಾಯಿ, ಚರಣಸಿಂಗ್, ಮತ್ತೆ ಇದೀಗ ಇಂದಿರಾಗಾಂಧಿ- ಇವರೆಲ್ಲಾ ಪ್ರಧಾನಿಗಳಾಗಿ ಆಡಳಿತ ನಡೆಸಿರುವರು. ಕಾಂಗ್ರೆಸ್ ಪಕ್ಷ, ಜನತಾ ಪಕ್ಷ, ಲೋಕದಳ, ಮತ್ತೆ ಇದೀಗ ಇಂದಿರಾ ಕಾಂಗ್ರೆಸ್ ಪಕ್ಷ ಎಂಬಂತೆ-ಈ ಎಲ್ಲಾ ಪಕ್ಷಗಳು ಸರಕಾರ ನಡೆಸಿವೆ; ದೇಶವನ್ನು ಆಳುತ್ತಾ ಬಂದಿವೆ. ಆದರೆ ಇವರೆಲ್ಲರ ಆಡಳಿತದ ಈ ಕಾಲ ಘಟ್ಟದಲ್ಲಿ ಒಂದು ವಿಧಾನದಲ್ಲಿ ಬದಲಾವಣೆ ಆಗಿಲ್ಲ. ಅದೆಂದರೆ ಉತ್ಪಾದನೆ ಹೆಚ್ಚುವುದು ಮತ್ತು ಇದರ ಲಾಭ ಕೆಲವೇ ಮಂದಿ ಶ್ರೀಮಂತರ ಕೈಯನ್ನು ಸೇರುವುದು; ಇದರೊಂದಿಗೆ ದುಡಿಯುವವರು, ಗರೀಬರು ಇನ್ನೂ ಗರೀಬರಾಗುವುದು. ಇವಕ್ಕೆ ಕಾರಣ ತಿಳಿಯುವುದು ಬಹಳ ಸುಲಭ.

ನಮ್ಮನ್ನು ಆಳಿಕೊಂಡು ಬಂದಿರುವ ಸರಕಾರಗಳು ಬಂಡವಾಳಗಾರರ, ಶ್ರೀಮಂತರ ಪರವಾಗಿ ಅನುಸರಿಸಿಕೊಂಡು ಬಂದಿರುವ ನೀತಿಗಳಿಂದ ಈ ಪರಿಸ್ಥಿತಿ ಉದ್ಭವವಾಗಿದೆ. ದುಡಿಯುವ ಜನಕೋಟಿಯನ್ನು ವಂಚಿಸಿ, ರೈತರನ್ನು ಸುಲಿಗೆ ಮಾಡಿ, ಜನಸಾಮಾನ್ಯರನ್ನು ದೋಚಿಕೊಂಡು ಬಂಡವಾಳಶಾಹಿಗಳನ್ನು ಬೆಳೆಸುವ ಮಾರ್ಗದಲ್ಲಿ ನಮ್ಮ ದೇಶದ ಅರ್ಥ ವ್ಯವಸ್ಥೆಯನ್ನು ಮುನ್ನಡೆಸುತ್ತಾ ಬಂದಿವೆ. ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುತ್ತಾ ಬಂದಿವೆ ನಮ್ಮನ್ನಾಳಿದ ಸರಕಾರಗಳು. ಇಂದು ರಾಷ್ಟ್ರವನ್ನು ಆಳುವ ಸರಕಾರವು ಇದನ್ನು ಮುಂದುವರೆಸುತ್ತಿದೆ. ಅಂದರೆ ವ್ಯಕ್ತಿಗಳು ಮತ್ತು ಸರ್ಕಾರಗಳು ಬದಲಾಗಿದ್ದರೂ, ಮೂಲಭೂತ ಧೋರಣೆಗಳಲ್ಲಿ ಏನೇನೂ ಬದಲಾವಣೆಯಾಗಿಲ್ಲ. ಹಾಗೆಯೇ ಇಂದಿನ ಸಮಸ್ಯೆಗಳಿಗೆ ಮೂಲಭೂತ ಕಾರಣವಾಗಿರುವ ಧೋರಣೆಗಳಲ್ಲಿ ಸಂಪೂರ್ಣ ಬದಲಾವಣೆ ಆಗದೆ, ಪ್ರಧಾನಮಂತ್ರಿಗಳು ಬದಲಾದರೂ, ಸರಕಾರಗಳು ಬದಲಾದರೂ ಸಮಸ್ಯೆಗಳು ಪರಿಹಾರವಾಗಲಾರವು. ಇದರರ್ಥ ದೇಶದ ಜನತೆ ನಡೆಸಬೇಕಾದ ಹೋರಾಟ ಕೇವಲ ಕೆಲವೊಂದು ವ್ಯಕ್ತಿಗಳನ್ನು ಬದಲಾಯಿಸುವುದಕ್ಕಲ್ಲ ಅಥವಾ ಸರಕಾರಗಳ ಬದಲಾವಣೆಗಾಗಿಯಲ್ಲ; ಬದಲು ಬದಲೀ ಧೋರಣೆಗಳಿಗಾಗಿ ಇರಬೇಕು. ಬಂಡವಾಳಶಾಹಿ ಪಥಕ್ಕೆ ಬದಲು ಸಮಾಜವಾದದ ಕಡೆಗೆ ಹೋಗಲು ಸಾಧ್ಯಮಾಡುವಂತಹ, ದುಡಿಯುವ ಮಂದಿಗೆ ಪರವಾಗಿದ್ದು, ಸಂಪತ್ತು ಶ್ರಮಜೀವಿಗಳಿಗೆ ಸಿಗುವಂತೆ ಮಾಡುವ ಧೋರಣೆಗಳನ್ನು ಅನುಸರಿಸುವ ಸರಕಾರ ಬರುವಂತೆ ಮಾಡುವುದಕ್ಕಾಗಿ ಹೋರಾಟ ನಡೆಯಬೇಕು.

ಎಡ ಪ್ರಜಾಪ್ರಭುತ್ವ ಶಕ್ತಿಗಳಿಂದ ಸಾಧ್ಯ :

ದೇಶವನ್ನು ಬದಲೀ ಮಾರ್ಗದಲ್ಲಿ ತೆಗೆದುಕೊಂಡುಹೋಗುವ ಧೋರಣೆಗಳನ್ನು ಅನುಸರಿಸುವುದು ಆಳುವ ವರ್ಗಕ್ಕೆ ಸೇರಿದ, ಭೂಮಾಲಕ ಮತ್ತು ಬಂಡವಾಳಶಾಹಿ ಪಕ್ಷಗಳು ಮತ್ತು ಶಕ್ತಿಗಳಿಂದ ಸಾಧ್ಯವಿಲ್ಲ, ಏಕೆಂದರೆ ಅದು ಅವರ ಸ್ವಂತ ಹಿತಕ್ಕೆ ಮಾರಕ. ಸಂಪತ್ತಿನ ವಿತರಣೆಯಾಗಬೇಕಾದರೆ ಸಂಪತ್ತನ್ನು ಉತ್ಪಾದಿಸುವ ಉತ್ಪಾದನಾ ಸಲಕರಣೆಗಳು (ಅಂದರೆ ಭೂಮಿ, ಫ್ಯಾಕ್ಟರಿ...) ದುಡಿಯುವ ಜನತೆಯ, ಸಮಾಜದ ಸಾಮೂಹಿಕ ಸ್ವತ್ತು ಆಗಿರಬೇಕು. ಈ ದಿಸೆಯಲ್ಲಿ ಮುನ್ನಡೆಯುವುದು ಖಾಸಗಿ ಆಸ್ತಿಪದ್ಧತಿ ಹೋಗಬೇಕೆಂದು ಪ್ರತಿಪಾದಿಸುವ ಶಕ್ತಿಗಳಿಂದ ಮಾತ್ರ ಸಾಧ್ಯ. ಅಂದರೆ ವೈಜ್ಞಾನಿಕ ಸಮಾಜವಾದವನ್ನು ಒಪ್ಪಿಕೊಳ್ಳುವ ಎಡಪಕ್ಷಗಳಿಂದ, ದುಡಿಯುವ ಜನತೆಯ ಪಕ್ಷ ಮತ್ತು ಸಂಘಟನೆಗಳಿಂದ ಸಾಧ್ಯ. ಆದುದರಿಂದಲೇ ನಿಜವಾದ ಪರ್ಯಾಯವನ್ನು ಒದಗಿಸುವುದೂ ಈ ಪಕ್ಷ ಮತ್ತು ಶಕ್ತಿಗಳಿಂದಲೇ ಸಾಧ್ಯ. ಪ್ರಧಾನಮಂತ್ರಿಗಳು ಬದಲಾದರೆ ಅಥವಾ ಮೂಲಭೂತ ಧೋರಣೆ

(30ನೇ ಪುಟ ನೋಡಿ)

ದಲಿತರಿಗೆ ಮೀಸಲಾತಿ ಪರಿಹಾರವೇ?

ಮೀಸಲಾತಿಯನ್ನು ಕುರಿತಂತೆ ಗುಜರಾತಿನಲ್ಲಿ ಆರಂಭವಾಗಿರುವ ವಿರೋಧಿ ಚಳುವಳಿಗೆ, ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕ ಅಭ್ಯಾಸದಲ್ಲಿ ಸೀಟುಗಳ ಮೀಸಲಾತಿಯನ್ನು ವಿರೋಧಿಸಿ ಆರಂಭವಾದ ಚಳುವಳಿ ಕೇವಲ ನೆಪವೆಂಬುದು ಈಗ ಎಲ್ಲರಿಗೂ ಅರ್ಥವಾಗಿರುವ ಸಂಗತಿ. ಈ ಚಳುವಳಿಯನ್ನು ಅಖಿಲ ಭಾರತದ ಮಟ್ಟದಲ್ಲಿ ವಿಸ್ತರಿಸಬೇಕೆಂಬ ಚಳುವಳಿಯ ಹಿನ್ನೆಲೆಯಲ್ಲಿದ್ದವರ ಉದ್ದೇಶ, ಅನೇಕ ಕಡೆಗಳಲ್ಲಿ ವ್ಯಕ್ತವಾದ ಬೆದರಿಕೆಯ ಮಾತುಗಳಿಂದ ಸ್ಪಷ್ಟವಾಯಿತು. ಇಂತಹುದೊಂದು ಚಳುವಳಿಯನ್ನು ಹುಟ್ಟುಹಾಕುವುದಕ್ಕೆ ಯಾರೋ ಕೆಲವರ ಇಷ್ಟಾನಿಷ್ಟಗಳು ಕಾರಣವಾಗದೆ, ಈಗಿರುವ ಸ್ಥಿತಿ ಅದಕ್ಕೆ ಸಾಕಷ್ಟು ಪೋಷಕವಾಗಿಯೇ ಇದೆ ಎಂಬುದೂ ತಿಳಿಯಬೇಕಾದ ಸಂಗತಿ.

ಸ್ವಾತಂತ್ರ್ಯ ಬಂದು 34 ವರ್ಷಗಳು ಕಳೆದಿದ್ದರೂ ದೇಶದ 1/3 ಭಾಗದಷ್ಟಾದರೂ ಇರುವ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರಿಗೆ ರಾಜ್ಯಾಂಗದತ್ತವಾದ ಮೀಸಲಾತಿ ಎಷ್ಟು ಲಭ್ಯವಾಗಬೇಕಾಗಿತ್ತೋ ಅಷ್ಟರಲ್ಲಿ ಅರ್ಧದಷ್ಟೂ ಕೂಡ ಸರ್ಕಾರಿ ಕ್ಷೇತ್ರದ ಬೇರೆಬೇರೆ ವಲಯಗಳಲ್ಲಿ ಇನ್ನೂ ಲಭ್ಯವಾಗಿಲ್ಲ ಎನ್ನುವುದು ಒಂದುಕಡೆಯಾದರೆ, ಈಗಾಗಲೇ ಈ ಸವಲತ್ತುಗಳನ್ನು ಪಡೆದು ಅನುಭವಿಸುತ್ತಿರುವ ಈ ಕೋಮುಗಳಲ್ಲಿನ ಕೆಲವರುಗಳು ಹೇಗೋ ಅವು ತಮ್ಮನ್ನು, ತಮ್ಮ ಬಂಧುಬಾಂಧವರನ್ನು ಬಿಟ್ಟು ಆಚೆ ಹೋಗದಂತೆ ನೋಡಿಕೊಳ್ಳುತ್ತಾರೆಂಬುದೂ ವಾಸ್ತವ ಸಂಗತಿಯೇ! ಇದಲ್ಲದೆ ಇತ್ತೀಚಿನ ವರ್ಷಗಳಲ್ಲಿ ಎಸ್. ಎಸ್. ಎಲ್. ಸಿ. ಮತ್ತು ಅದಕ್ಕಿಂತ ಮೇಲಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಕೆಲಸವಿಲ್ಲದೆ ಇರುವ ಅನೇಕ ತರುಣರು ಈ ಕೋಮುಗಳಲ್ಲಿಯೂ ಹೆಚ್ಚಾಗುತ್ತಿದ್ದಾರೆ. ಅವರು ಹೆಚ್ಚು ಹೆಚ್ಚು ಗ್ರಾಮೀಣ ಪ್ರದೇಶದವರಾಗಿದ್ದು, ಸವರ್ಣೀಯರ ಕಣ್ಣುಕುಕ್ಕುವಂತಹ ಪರಿಸ್ಥಿತಿಗೆ ಕಾರಣರಾಗಿದ್ದಾರೆ.

ಮೀಸಲಾತಿ ವಿರೋಧಿ ಚಳುವಳಿಯ ಮೂಲವನ್ನು ಹುಡುಕುವಾಗ ನಾವು ನಮ್ಮ ಗ್ರಾಮೀಣ ಪ್ರದೇಶಗಳಲ್ಲಿರುವ ಹರಿಜನರು ಮತ್ತು ಸವರ್ಣೀಯರ ನಡುವಣ ಸಂಬಂಧವನ್ನು ಗಮನಿಸುವ ಅಗತ್ಯವಿದೆ.

ನಗರಗಳಲ್ಲಿ ಅವುಗಳ ಅನಿವಾರ್ಯವಾದ ಸಂಕೀರ್ಣ ಬೆಳವಣಿಗೆಯಿಂದ ಜಾತಿಪದ್ಧತಿಯ ಬಹಿರಂಗ ವ್ಯವಹಾರಗಳು ಕಿತ್ತುಹೋಗಿರುವಂತೆ, ದುರ್ಬಲವಾದಂತೆ ಕಾಣಿಸುತ್ತವೆ. ಆದರೆ ಹಳ್ಳಿಗಳಲ್ಲಿ ಸರ್ಕಾರವೇ ನಿರ್ಮಿಸಿದ ಊರಹೊರಗಿನ ಕಾಲೋನಿಗಳಲ್ಲಿ ಮೊದಲಿನಂತೆಯೇ ಹರಿಜನರು ವಾಸ ಮಾಡುತ್ತಾರೆ. ಬಾವಿಗಳಲ್ಲಿನ ನೀರಿನ ಬಳಕೆ, ಹೋಟೆಲುಗಳ ಪ್ರವೇಶ, ದೇವಾಲಯಗಳ ಪ್ರವೇಶ ಮುಂತಾದುವುಗಳನ್ನು ಕುರಿತು ಬೋರ್ಡುಗಳಿದ್ದರೂ ಯಾವ ಹರಿಜನರೂ ಆ ಕೆಲಸಮಾಡುವ ಧೈರ್ಯಮಾಡುವುದು ಆ ಹಳ್ಳಿಗಳಿರುವ ಸ್ಥಿತಿಯಲ್ಲಿ ಸಾಧ್ಯವಿಲ್ಲವಾಗಿರುತ್ತದೆ. ಹಾಗೇನಾದರೂ ಮಾಡಿದರೆ ಅವರಿಗೆ ಸಹಾಯಕ್ಕೆ ರಕ್ಷಣೆಗೆ ಯಾರು ಬರಬೇಕು? ಊರಿನ ಗಣ್ಯವ್ಯಕ್ತಿಗಳು, ಪಂಚಾಯ್ತಿ ಅಧಿಕಾರಿಗಳು, ಪೋಲೀಸರು, ಸರ್ಕಾರೀ ಸಾಹೇಬರುಗಳೆಲ್ಲಾ ಸಾಮಾನ್ಯವಾಗಿ ಸವರ್ಣೀಯರೇ ಆಗಿರುತ್ತಾರಾದ್ದರಿಂದ, ಇಲ್ಲಿ ಸರ್ಕಾರ ಮರೆತು ಹೋಗಿ, ಒಂದು ಗುಂಪು ಮತ್ತೊಂದು ಗುಂಪಿನ ವಿರುದ್ಧ ಮುಯ್ಯಿ ತೀರಿಸುವ ಕೆಲಸಮಾಡಲು ಒಂದಾಗಿ ಬಿಡುತ್ತದೆ. ಇದೇ ಪರಿಸ್ಥಿತಿಯಲ್ಲಿ ಓದಿಕೊಂಡು ವಿದ್ಯಾವಂತರಾಗಿ, ಜಮೀನುದಾರರ ಕೂಲಿ ಆಳುಗಳಾಗಿ ಹೋಗಲು ತಯಾರಿಲ್ಲದೆ, ಓಡಾಡುವ ಹರಿಜನ ಮಕ್ಕಳು ತಮ್ಮ ಜನಾಂಗಕ್ಕೆ ಆಗಿರುವ ಅನ್ಯಾಯಗಳ ಬಗೆಗೆ ಉದ್ವೇಗದಿಂದಲೋ, ದ್ವೇಷದಿಂದಲೋ ಮಾತಾಡುವಂತಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗಿ, ಅವರುಗಳೇ ಪೆಟ್ಟುತಿನ್ನುವ, ಕೊಡುವ, ಕೊನೆಗೆ ಅಸಹಾಯಕರಾಗುವ ಸ್ಥಿತಿ ಹಳ್ಳಿಗಳಲ್ಲಿ ಇದೆ.

ನಗರಗಳಲ್ಲಿ ಈ ಬಗೆಯ ಬಹಿರಂಗ ಘರ್ಷಣೆ ಕಾಣದಿದ್ದರೂ ಹೋಟೆಲುಗಳಲ್ಲಿ-ಬಾರುಗಳಲ್ಲಿ ಅಕ್ಕಪಕ್ಕದಲ್ಲಿ ಕೂತು ತಿಂದು ಕುಡಿದರೂ 'ಮನೆ'ಗಳಲ್ಲಿ ಮಡಿವಂತಿಕೆ ಮುಂದುವರೆದಿದೆ. ಸರ್ಕಾರ ಮತ್ತು ವಿಶ್ವವಿದ್ಯಾಲಯ ಮೊದಲಾದ ಅಧಿಕಾರ ವಲಯಗಳಲ್ಲಿ ಹರಿಜನರನ್ನು ಹತ್ತಿಕ್ಕುವ ಕೆಲಸದಲ್ಲಿ ಉಳಿದೆಲ್ಲ ಜಾತಿಯ ಸವರ್ಣೀಯರೂ ಒಂದಾಗಿಬಿಡುತ್ತಾರೆ. ಸಾಧ್ಯವಾದ ಮಟ್ಟಿಗೆ ಮೀಸಲಿಟ್ಟ ಸ್ಥಾನಗಳನ್ನು ತುಂಬದೆ ಕಾಲತಳ್ಳುವುದೋ, ಯಾವ ಕ್ಷೇತ್ರದಲ್ಲಿ ಹರಿಜನರಿಲ್ಲವೋ ಅಂಥಹ ಕ್ಷೇತ್ರಗಳನ್ನೇ ಕಾದಿರಿಸಿ, ಅಲ್ಲಿಗೆ ಹರಿಜನರಿಲ್ಲವೆಂದು ತೀರ್ಮಾನಿಸಿ ಸವರ್ಣೀಯರನ್ನು ತುಂಬುವ ಜಾಣ್ಮನದ ವ್ಯವಹಾರಗಳೂ ನಡೆಯುವುದು ಒಂದು ಮುಖವಾದರೆ, ಈಗಾಗಲೇ ಅಧಿಕಾರ ಗಳಿಸಿಕೊಂಡು ಸವರ್ಣೀಯರ ಜೊತೆ ಸೇರಿಕೊಂಡ ಹರಿಜನರು ತಮ್ಮವರನ್ನೇ ದೂರ ತಳ್ಳುವ ಇನ್ನೊಂದು ಮುಖವೂ ಇದಕ್ಕಿದೆ. ಈ ಮಧ್ಯೆ ಮೀಸಲಾತಿ ವಿರೋಧಿ ಚಳುವಳಿಯನ್ನು ಬೆಳೆಸುವವರು ಆಶ್ರಯಿಸುವ ತರ್ಕವಾದರೂ ಯಾವುದು? ಒಬ್ಬ ಸವರ್ಣೀಯ ಬಡಕುಟುಂಬದ ಬುದ್ಧಿವಂತ ವಿದ್ಯಾರ್ಥಿ ನೂರಕ್ಕೆ ತೊಂಬತ್ತು ಅಂಕಗಳನ್ನು ಪಡೆದವನು ಕೆಲಸವಿಲ್ಲದೆ ಕೂತು, ನೂರಕ್ಕೆ ಮೂವತ್ತೈದು ಅಂಕಗಳನ್ನು ಗಳಿಸಿದ ಹರಿಜನ ವಿದ್ಯಾರ್ಥಿಯೊಬ್ಬನಿಗೆ ಕೆಲಸ ಸಿಕ್ಕಿದಾಗ, ಸವರ್ಣೀಯ ವಿದ್ಯಾರ್ಥಿಯು ಜಾತಿವಾದಿಯಲ್ಲದವನಾಗಿದ್ದರೂ ಆ ಕ್ಷಣದಲ್ಲಿ ತನಗೆ ಅನ್ಯಾಯವಾಗಿದೆಯೆಂದು ಭಾವಿಸುತ್ತಾನೆ. ಇದಕ್ಕೆ ತಾನೆಷ್ಟರಮಟ್ಟಿಗೆ ಹೊಣೆಗಾರನೆಂದೂ ಪ್ರಶ್ನಿಸಿಕೊಂಡು, ತನ್ನ ಮಟ್ಟಿಗೆ ಇದು ಅನ್ಯಾಯವೆಂದುಕೊಳ್ಳುತ್ತಿರುವಾಗಲೇ, ಪ್ರತಿಗಾಮಿಯೊಬ್ಬ ಅವನ ತಲೆಯಲ್ಲಿ ಮೀಸಲಾತಿ ವಿರೋಧಿ ವಿಚಾರಗಳನ್ನು ಬಿತ್ತುತ್ತಾನೆ. ತಾನು ನ್ಯಾಯಕ್ಕಾಗಿಯೇ ಈ ಚಳುವಳಿಯನ್ನು ಹುಟ್ಟುಹಾಕುತ್ತಿದ್ದೇನೆಂದು, ಆದರೆ ಈ ಬಗೆಯ ತಂತ್ರಕ್ಕೆ ಒಳಗಾಗುವ ವಿದ್ಯಾರ್ಥಿಗಳು ಮತ್ತು ಜನತೆ ನಮ್ಮ ಸಮಾಜದ ಇತಿಹಾಸವನ್ನೂ ಈಗಿರುವ ಸ್ಥಿತಿಯನ್ನೂ ಗ್ರಹಿಸಬೇಕು. ಇದಲ್ಲದೆ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಮೀಸಲಾತಿ ಎನ್ನುವುದು ಕೂಡ, ಅಭ್ಯಾಸ ಮತ್ತು ಕೆಲಸಗಳಲ್ಲಿದೆಯೇ ಹೊರತು ಅರ್ಹ ಅಭ್ಯಾಸವಿಲ್ಲದೆ ಕೆಲಸ ಕೇಳುವುದೇನು ಇಲ್ಲವಲ್ಲ ಎಂಬುದನ್ನು ಗಮನಿಸಬೇಕು. ಸಾವಿರಾರು ವರ್ಷಗಳಿಂದ ಸಮಾಜದ ಎಲ್ಲ ಸವಲತ್ತುಗಳಿಂದಲೂ ದೂರವಿರಿಸಿ, ಅವರನ್ನು ಶೋಷಣೆಗೆ ಒಳಪಡಿಸಿ ದಂಡಿಸಿಕೊಂಡ ಸಮಾಜದ ಫಲವಾಗಿಯೇ ನಾವೆಲ್ಲ ಇಂದು ಅನು

ಸಿ. ವೀರಣ್ಣ

ಕೂಲಗಳನ್ನು ಅನುಭವಿಸುತ್ತಿದ್ದೇವೆಂಬುದನ್ನು ಮನಗಾಣಬೇಕು. ಇದಲ್ಲದೆ ಈಗಿರುವ ಹರಿಜನರಲ್ಲಿ ಶೇ. 10ರಷ್ಟು ಕೂಡ ಸವಲತ್ತುಗಳನ್ನು ಪಡೆಯುವುದು ಸಾಧ್ಯವಾಗಿಲ್ಲ ಎಂಬುದನ್ನೂ— ಹಾಗೆ ಅವರಿಗೋಸ್ಕರ ಮೀಸಲಾದ ಎಷ್ಟೋ ಸವಲತ್ತುಗಳು ಈ ಭ್ರಷ್ಟ ವ್ಯವಸ್ಥೆಯಲ್ಲಿ ದುರುಪಯೋಗಕ್ಕೆ ತುತ್ತಾಗಿವೆ ಎಂಬುದನ್ನು ತಿಳಿಯಬೇಕು.

ಸರ್ಕಾರ ಪ್ರಾಮಾಣಿಕವಾಗಿ ಮೀಸಲಾತಿ ಸ್ಥಾನಗಳನ್ನು ತುಂಬುತ್ತ ಬಂದಿರುವುದೆಂದರೆ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಾತ್ರ ಏಕೆಂದರೆ ಅದಕ್ಕೆ ಈ ಕ್ಷೇತ್ರಗಳ ಶಾಸಕರೇ ಬೆನ್ನು ಬಲ. ಅತಿ ಪ್ರಖ್ಯಾತರಾದ ಹರಿಜನ ನಾಯಕರೂ ಕೂಡ ಮೀಸಲು ಕ್ಷೇತ್ರಗಳಿಂದಲೇ ಆರಿಸಿ ಬಂದಿರುವಂತಹ ಸ್ಥಿತಿ ಈಗಲೂ ಇರುವುದು. ಮೀಸಲಾತಿಯನ್ನು ತೆಗೆದು ಸಾರ್ವತ್ರಿಕ ಸ್ಥಾನಗಳನ್ನಾಗಿ ಮಾಡಿದರೆ ಹತ್ತು ಮಂದಿಯೂ ಆರಿಸಿ ಬರುತ್ತಾರೆಂಬ ಭರವಸೆ ಹೊಂದುವುದು ಕಷ್ಟ. ಹೀಗಿರುವಾಗ ಮೀಸಲಾತಿಯನ್ನು ತೆಗೆದುಹಾಕಿದರೆ ಹರಿಜನರು ಎಲ್ಲಿಗೆ ಹೋಗಬೇಕು ತಮ್ಮ ಸಂಕಟಗಳನ್ನು ಹೇಳಿಕೊಳ್ಳುವುದಕ್ಕೆ. ಹೀಗೆಂದಾಕ್ಷಣ ಹರಿಜನರ ಸಂಕಟಗಳನ್ನೇ ಪ್ರತಿನಿಧಿಸುವ ಪ್ರತಿನಿಧಿಗಳು ಆಯ್ಕೆಯಾಗಿ ಬರುತ್ತಾರೆಂದೇನು ಅರ್ಥವಲ್ಲ. ಏಕೆಂದರೆ ಮೂವತ್ನಾಲ್ಕು ವರ್ಷಗಳ ಕಾಲ ಸರ್ಕಾರವನ್ನು ನಡೆಸುವುದರಲ್ಲಿ ಪಾಲುಗೊಂಡ ಹರಿಜನ ಪ್ರತಿನಿಧಿಗಳು, ತಮ್ಮ ಜನಾಂಗ ಈಗಿರುವ ಸ್ಥಿತಿಯಲ್ಲಿರುವುದಕ್ಕೆ ಕಾರಣಕರ್ತರೂ ಆಗಿದ್ದಾರೆನ್ನುವುದರಲ್ಲಿ ಅನುಮಾನವಿಲ್ಲ.

ಈಗಿನ ಸರ್ಕಾರ ಬಹಿರಂಗದಲ್ಲಿ ಹರಿಜನ ಗಿರಿಜನರ ರಕ್ಷಣೆಯ ಬಗೆಗೆ ಉದ್ದುದ್ದನೆಯ ಘೋಷಣೆಗಳನ್ನು ಹೊರಡಿಸುವಂತೆಯೇ ಅಂತರಂಗದಲ್ಲಿ ಅದರ ಯಂತ್ರ ಯಥಾಸ್ಥಿತಿ ಸಮಾಜದ್ದಾಗಿ ಕೆಲಸ ಮಾಡುತ್ತಿರುತ್ತದೆ. ಸರ್ಕಾರದ ಪೊಳ್ಳು ಭರವಸೆಗಳನ್ನು ನಂಬಿದ ಹರಿಜನರು ತಮ್ಮ ಬಿಡುಗಡೆ ಬಹಳ ಹತ್ತಿರದಲ್ಲಿದೆಯೆಂದು ಭಾವಿಸಿ, ಚುರುಕುಗೊಳ್ಳುತ್ತಲೇ, ಅದೇ ಸರ್ಕಾರದ ನೆರವಿನಿಂದ ಪಟ್ಟಭದ್ರ ಶಕ್ತಿಗಳು ಅವರನ್ನು ನೆಲಕ್ಕೆ ತುಳಿಯುತ್ತವೆ. ಇದರಿಂದ ಆಳುವವರ್ಗಕ್ಕೆ ಒಂದು ಉಪಯೋಗವಿದೆ. ದೇಶದ ತೀವ್ರಕರವಾದಂತಹ ಸಮಸ್ಯೆಗಳನ್ನು ಜನ ಎದುರಿಸಿ, ಅವುಗಳನ್ನು ಅರ್ಥೈಸಿಕೊಳ್ಳುವುದಕ್ಕೆ ಅವಕಾಶಕೊಡದೆ, ಜಾತಿಕಲಹಗಳಲ್ಲಿ ಜನ ಮುಳುಗಿಹೋಗುವಂತೆಮಾಡಿ, ತಾನು ದುರ್ಬಲ ವರ್ಗಗಳ ರಕ್ಷಕನೆಂದು ನಾಟಕವಾಡಿ ನಂಬಿಸಲು ಪ್ರಯತ್ನಿಸುತ್ತದೆ.

ಇಂತಹ ಸ್ಥಿತಿಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ವರ್ಗಗಳು ತಮ್ಮ ರಾಜ್ಯಾಂಗದತ್ತ ಹಕ್ಕುಗಳನ್ನು ಪಡೆದುಕೊಳ್ಳಲು ಸಂಘಟಿತ ಹೋರಾಟಗಳನ್ನು ನಡೆಸುತ್ತ ಈ ಹೋರಾಟವನ್ನು ಸವಲತ್ತುಗಳ ಹೋರಾಟಕ್ಕೆ ಮಾತ್ರ ಸೀಮಿತಗೊಳಿಸದೆ, ಇದೊಂದು ರಾಜಕೀಯ ಹೋರಾಟವನ್ನಾಗಿಸಬೇಕು. ಈ ರಾಜಕೀಯ ಹೋರಾಟವನ್ನು ಸಾಗಿಸುವಾಗ ತಮ್ಮಂತೆಯೇ ಈ ದೇಶದ ಸಾಮಾಜಿಕ ಮತ್ತು ಆರ್ಥಿಕ ಶೋಷಣೆಗೆ ತುತ್ತಾದ ಸವರ್ಣೀಯರನ್ನೂ, ಅವರಲ್ಲಿರುವ ಪ್ರಗತಿಪರರನ್ನೂ ಜೊತೆಗೂಡಿಸಿಕೊಂಡು ಜನಪರ ರಾಜ್ಯವನ್ನು ಕಟ್ಟುವ ಹೋರಾಟಕ್ಕೆ ನಾಯಕತ್ವವಹಿಸಬೇಕು. ಮೀಸಲಾತಿಯೊಂದೇ ಸಮಾನತೆಯನ್ನು ತಂದುಕೊಡಲಾರದೆಂಬ ಸತ್ಯ ಈ ಮೂವತ್ನಾಲ್ಕು ವರ್ಷಗಳಲ್ಲಿ ಸ್ಪಷ್ಟವಾಗಿರುವ ವಿಚಾರ. ಅದನ್ನು ಮಾತ್ರ ಪಡೆಯಬೇಕೆಂದು ಹೋರಾಡುತ್ತಾ ಕೂತರೆ, ಇಲ್ಲಿಯವರೆಗಾದದ್ದೆ ಮತ್ತೆ ಮುಂದುವರೆಯುತ್ತದೆ.

ಒಂದು ದೃಷ್ಟಿಯಿಂದ ನೋಡಿದರೆ ಮೀಸಲಾತಿ ಸಮಸ್ಯೆಯೇ ಅಲ್ಲ. ಜಾತಿ ಇರುವವರೆಗೆ ಮೀಸಲಾತಿ-ಮೀಸಲಾತಿ ಇರುವವರೆಗೆ ಜಾತಿ. ಈ ಚಕ್ರಬಂಧದಿಂದ ಪಾರಾದರೆ ಮೀಸಲಾತಿ ಜಾತಿಗಳೆರಡೂ ಒಟ್ಟಿಗೆ ಹೋಗುವುದು ಸಾಧ್ಯ. ರಾಷ್ಟ್ರವೊಂದರ ಪ್ರಜೆಗೆ ದುಡಿಯುವುದು ಆಜನ್ಮಸಿದ್ಧ ಹಕ್ಕು. ಆ ಹಕ್ಕನ್ನು ಒದಗಿಸುವುದರಲ್ಲಿ ವಿಫಲವಾಗಿರುವ ಬೂರ್ಜ್ವಾ ವ್ಯವಸ್ಥೆಯ ಸೃಷ್ಟಿಗಳಲ್ಲಿ ಈ ಕೋಮುದ್ವೇಷವೂ ಒಂದು. ದುಡಿಯುವವರಿಗೆಲ್ಲಾ ಕೆಲಸವನ್ನೊದಗಿಸಲು ಸಮರ್ಥವಾದ ದೇಶದಲ್ಲಿ ಈ ಮೀಸಲಾತಿಯ ಪ್ರಶ್ನೆ ಇಷ್ಟೊಂದು ತೀವ್ರರೂಪದ್ದಾಗಿರುವುದಿಲ್ಲ. ವರ್ಣ ಸಮಸ್ಯೆ ಆಗ ಕೇವಲ ಸಾಮಾಜಿಕ ಸಮಸ್ಯೆಯಾಗುವುದರಿಂದ ಅದರ ಪರಿಹಾರವೂ ಸಾಮಾಜಿಕವಾಗಿ ಬಗೆಹರಿಸಲು ಸಾಧ್ಯವಾಗುತ್ತದೆ.

○

ಅಂತರ್ರಾಷ್ಟ್ರೀಯ ದುಡಿಯುವ ಜನರ ಸೌಹಾರ್ದತೆಯ ಮೇ ದಿನದ ಮಹತ್ವ

-ವಿ. ಜಿ. ಕೆ. ನಾಯರ್

'ದ್ವಿತೀಯ ಅಂತರ್ರಾಷ್ಟ್ರೀಯ'ದ [Second International] ಕರೆಗೆ ಓಗೊಟ್ಟು 1890ರ ಮೇ 1 ರಂದು 'ಅಟ್ಲಾಂಟಿಕ್‌ನ ಎರಡೂ ಬದಿಗಳಲ್ಲಿ' ಜಗತ್ತಿನ ಕಾರ್ಮಿಕರು ಏಕಕಾಲದಲ್ಲಿ ಮತಪ್ರದರ್ಶನ ನಡೆಸಿದರು. ಇದು ಮುಂದೆ ಬಹಳ ರಾಜಕೀಯ ಮಹತ್ವ ಪಡೆಯಿತು. ಮೊತ್ತ ಮೊದಲ ಬಾರಿಗೆ 'ಜಗತ್ತಿನ ಕಾರ್ಮಿಕರೇ ಒಂದಾಗಿ' ಎಂಬ ಕರೆಯು ಕಾರ್ಮಿಕರ ಅಂತರಾಷ್ಟ್ರೀಯ ಮತ ಪ್ರದರ್ಶನವಾಗಿ ಮೂರ್ತರೂಪ ಪಡೆಯಿತು. 1890ರ ಮೇ 1ರ ನಂತರ ಈಗ ಪ್ರತಿ ವರ್ಷ 'ಮೇ ದಿನ'ವನ್ನು ಅಂತರಾಷ್ಟ್ರೀಯ ದುಡಿಯುವ ಜನರ ಸೌಹಾರ್ದದ ದಿನವಾಗಿ ಆಚರಿಸಲಾಗುತ್ತಿದೆ.

ದ್ವಿತೀಯ ಅಂತರ್ರಾಷ್ಟ್ರೀಯವು ಈಗಿನ ಜನತಾಂತ್ರಿಕ ಸಮಾಜವಾದೀ ಪಕ್ಷಗಳಾಗಿ [Social Democrat Parties] ಅವನತಿ ಹೊಂದಿತು. ಈ ಪಕ್ಷಗಳು ತಮ್ಮ ವರ್ಗ ಶತ್ರುಗಳೊಂದಿಗೆ ರಾಜಿಮಾಡಿಕೊಂಡವು. ಇಂಗ್ಲೆಂಡಿನ ಲೇಬರ್ ಪಕ್ಷ, ಪಶ್ಚಿಮ ಜರ್ಮನಿ, ಸ್ವೀಡನ್ ಇತ್ಯಾದಿ ದೇಶಗಳ ಜನತಾಂತ್ರಿಕ ಸಮಾಜವಾದೀ ಪಕ್ಷಗಳು, ಮಾತ್ರವಲ್ಲ, ಇಸ್ರೇಲ್‌ನ ಆಳುವ ಪಕ್ಷವೂ 'ದ್ವಿತೀಯ ಅಂತರಾಷ್ಟ್ರೀಯ'ಕ್ಕೆ ಸೇರಿದ್ದ ಪಕ್ಷಗಳು. 'ಸಮಾಜವಾದೀ ಅಂತರಾಷ್ಟ್ರೀಯ' ಎಂದೂ ಕರೆಯಲ್ಪಡುವ ಈ ದ್ವಿತೀಯ ಅಂತರ್ರಾಷ್ಟ್ರೀಯವು ಈಗ ಅಂತರ್ರಾಷ್ಟ್ರೀಯ ದುಡಿಯುವ ಜನರ ದಿನದ ಮಟ್ಟಿಗೆ ಅಪ್ರಕೃತವಾಗಿ ಬಿಟ್ಟಿದೆ. ಆ ಪಕ್ಷಗಳು ಈ ದಿನವನ್ನು ಕೇವಲ ಸಾಂಪ್ರದಾಯಿಕ ಕ್ರಿಯೆಯಂತೆ ಯಾಂತ್ರಿಕವಾಗಿ ಆಚರಿಸುತ್ತವೆಯಷ್ಟೆ. ಒಂದೊಮ್ಮೆ ದ್ವಿತೀಯ ಅಂತರಾಷ್ಟ್ರೀಯಕ್ಕೆ ಸೇರಿದ್ದು ನಂತರ ತೃತೀಯ ಅಂತರಾಷ್ಟ್ರೀಯದ ಅಂಗವಾಗಿ ಹುಟ್ಟಿದ ಪಕ್ಷಗಳು ಮಾತ್ರ ಮೇ ದಿನವನ್ನು ಅಂತರ್ರಾಷ್ಟ್ರೀಯ ದುಡಿಯುವ ಜನರ ಸೌಹಾರ್ದತೆಯ ದಿನವಾಗಿ ಆಚರಿಸುತ್ತವೆ. ಕಮ್ಯುನಿಸ್ಟ್ ಅಂತರಾಷ್ಟ್ರೀಯವೆಂದೂ ಕರೆಯಲ್ಪಡುವ ತೃತೀಯ ಅಂತರಾಷ್ಟ್ರೀಯವನ್ನು ಸಂಘಟಿಸಿದ ಕಾಂ. ಲೆನಿನ್ ದ್ವಿತೀಯ ಅಂತರಾಷ್ಟ್ರೀಯದ ಸಾಮಾಜಿಕ ಜನತಂತ್ರವಾದಿಗಳೊಡನೆ ತೀವ್ರ ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಹೋರಾಟ ನಡೆಸಿದ್ದರು. ಸಾಮ್ರಾಜ್ಯಶಾಹಿ ಯುದ್ಧಕ್ಕೆ ಅವರ ಬೆಂಬಲದ ಪ್ರಶ್ನೆಯ ಮೇಲೆಯೇ ಪ್ರಮುಖವಾಗಿ ಕಾಂ. ಲೆನಿನ್ ಅವರನ್ನು ಎದುರಿಸಿದ್ದರು. ಸಾಮಾಜಿಕ ಜನತಂತ್ರವಾದಿಗಳ ಬೂರ್ಜ್ವಾ ರಾಷ್ಟ್ರೀಯತಾವಾದಿ ಪೂರ್ವಾಗ್ರಹದ ವಿರುದ್ಧ ಲೆನಿನ್‌ರ ಹೋರಾಟದಲ್ಲಿ ಅಡಕವಾಗಿರುವ ತತ್ವಗಳು ಈಗ ನಮಗೆ ಬಹಳ ಸಾಮಯಿಕವಾಗಿದೆ.

ಸಾಮಾಜಿಕ ಜನತಂತ್ರವಾದಿಗಳ ರಾಷ್ಟ್ರೀಯ ಸಂಕುಚಿತವಾದ

ಮೊದಲ ಜಾಗತಿಕ ಯುದ್ಧ ಸಾಮ್ರಾಜ್ಯಶಾಹೀ ಯುದ್ಧವಾಗಿತ್ತು. ಜಗತ್ತಿನಾದ್ಯಂತ ಮಾರುಕಟ್ಟೆ ಪಡೆಯುವ ಕಚ್ಚಾಟದಲ್ಲಿ ಯುರೋಪಿನ ಪ್ರತಿಯೊಂದು ದೇಶದ ಬೂರ್ಜ್ವಾ ವರ್ಗವೂ ಭಾಗಿಯಾಗಿತ್ತು. ಜಗತ್ತನ್ನು ಗೆದ್ದುಕೊಳ್ಳಬೇಕೆಂಬ ವಿವಿಧ ದೇಶಗಳ ಬೂರ್ಜ್ವಾಗಳ ಪ್ರಯತ್ನಗಳಿಂದಾಗಿ ಅವರ ನಡುವೆ ಪರಸ್ಪರ ಹಲವು ತಿಕ್ಕಾಟಗಳು ನಡೆಯುತ್ತಿದ್ದವು. ಜಗಳಾಡುತ್ತಿದ್ದ ಈ ಬೂರ್ಜ್ವಾ ದೇಶಗಳು ಪರಸ್ಪರ ವಿರುದ್ಧವಾದ ಎರಡು ಪಾಳೆಯಗಳಲ್ಲಿ ಹಂಚಿಹೋದದ್ದರ ಪರಿಣಾಮವಾಗಿ ಮೊದಲನೇ ಜಾಗತಿಕ ಯುದ್ಧ ನಡೆಯಿತು. ಬೇರೆ ದೇಶಗಳನ್ನು ತಮ್ಮ ಅಡಿಯಾಳಾಗಿಸಲು ಯುದ್ಧ ನಡೆಸುತ್ತಿದ್ದ ಈ ಬೂರ್ಜ್ವಾ ದೇಶಗಳು ಒಂದು ಕಡೆ ತಮ್ಮ ಅಧೀನವಾದ ದೇಶಗಳ ಶ್ರಮಿಕ ಜನರ ಲೂಟಿ ನಡೆಸುತ್ತಿದ್ದರೆ ಅದೇ ಸಮಯದಲ್ಲಿ ಇನ್ನೊಂದೆಡೆ ತಮ್ಮದೇ ದೇಶದ ದುಡಿಯುವ ವರ್ಗವನ್ನು ದಮನ ಮಾಡುತ್ತಿದ್ದರು. ದ್ವಿತೀಯ ಅಂತರ್ರಾಷ್ಟ್ರೀಯಕ್ಕೆ ಸೇರಿದ ಪಕ್ಷಗಳು ಈ ಜಾಗತಿಕ ಯುದ್ಧದ ಸಾಮ್ರಾಜ್ಯಶಾಹೀ ಸ್ವರೂಪವನ್ನು ಬಯಲಿಗೆಳೆಯುವ ಬದಲು 'ಪಿತೃಭೂಮಿಯನ್ನು ರಕ್ಷಿಸುವ' ಹೆಸರಲ್ಲಿ ತಮ್ಮ ದೇಶದ ಬೂರ್ಜ್ವಾ ವರ್ಗದ ಸೇವೆಗೆ ನಿಂತವು.

ರಾಷ್ಟ್ರೀಯ ಸಂಕುಚಿತವಾದವನ್ನು ಅನುಸರಿಸಿದ್ದು 'ಕಾರ್ಮಿಕರ ಅಂತರಾಷ್ಟ್ರೀಯತೆ'ಯ ತತ್ವಕ್ಕೆ ಭಂಗ ತಂದಿತು. 1914ರಲ್ಲಿ ದ್ವಿತೀಯ ಅಂತರಾಷ್ಟ್ರೀಯ ನಾಯಕರುಗಳಿಗೆ ಪರಸ್ಪರ ಕೂಡಿ ಕೆಲಸ ಮಾಡುವುದು ಸಾಧ್ಯವಿಲ್ಲವಾದ್ದರಿಂದ ಅದು ಕುಸಿದು ಹೋದುದರಲ್ಲಿ ಆಶ್ಚರ್ಯವೇನಿಲ್ಲ. ತಮ್ಮನ್ನು ಸಮಾಜವಾದಿ ಪಕ್ಷಗಳೆಂದು ಹೇಳಿಕೊಂಡರೂ ಅವು 'ಸಮಾಜವಾದ'ವನ್ನು ಬಿಟ್ಟುಕೊಟ್ಟವು.

ಸಾಮಾಜಿಕ-ಜನತಂತ್ರವಾದೀ ಪಕ್ಷಗಳಿಗೆ 'ಹಳೆಯ' ಕಾರ್ಮಿಕ ಸಂಘಗಳು ಆಧಾರವಾಗಿದ್ದವು. ಈ 'ಹಳೆಯ' ಕಾರ್ಮಿಕ ಸಂಘಗಳು ಎಂಗೆಲ್ಸರ ಕಾಲದಲ್ಲೂ ಇಂಗ್ಲೆಂಡ್, ಅಮೇರಿಕಾ ಹಾಗೂ ಇತರೆಡೆಗಳಲ್ಲಿ ಪರಿಷ್ಕರಣವಾದೀ ಪ್ರವೃತ್ತಿಯನ್ನು ತೋರ್ಪಡಿಸಲಾರಂಭಿಸಿದ್ದವು. ಕಾರ್ಮಿಕ ಶ್ರೀಮಂತರ ಪಕ್ಷಗಳು ಸತತವಾಗಿ ತಮ್ಮ ಕಾರ್ಯಕ್ರಮಗಳನ್ನು ಪರಿಷ್ಕರಿಸುತ್ತಿದ್ದವು. 1875ರಲ್ಲಿ ಇಂತಹ ಗೋಥಾ ಕಾರ್ಯಕ್ರಮದ ವಿಮರ್ಶೆಯನ್ನು ಕಾರ್ಲ್ ಮಾರ್ಕ್ಸ್ ಬರೆದರು. ಎಂಗೆಲ್ಸ್ 1891ರಲ್ಲಿ ಸಾಮಾಜಿಕ ಜನತಂತ್ರವಾದೀ ಕಾರ್ಯಕ್ರಮದ ಕರಡಿನ ವಿಮರ್ಶೆ ಬರೆದರು. ಲೆನಿನ್ 1912ರಲ್ಲಿ ಬಾಲ್ ಘೋಷಣೆಯ ಆಧಾರದ ಮೇಲೆ ಚರ್ಚೆಯ ಕಣಕ್ಕಿಳಿದರು. ಸಾಮಾಜಿಕ ಜನತಂತ್ರವಾದಿಗಳು ಕ್ರಾಂತಿಯ ಸಿದ್ಧಾಂತವನ್ನು ಹಾಗೂ ವೈಜ್ಞಾನಿಕ ಸಮಾಜವಾದದ ಅಡಿಗಲ್ಲನ್ನೇ ಪರಿಷ್ಕರಿಸುವ ಸತತ ಪ್ರಯತ್ನ ನಡೆಸುತ್ತಿದ್ದರೆಂಬ ವಾಸ್ತವಾಂಶ ಇದರಿಂದ ತಿಳಿದು ಬರುತ್ತದೆ. ಮೋಸದಿಂದ ತಮ್ಮ ಸಾಮಾಜಿಕ ಸಂಕುಚಿತವಾದಕ್ಕೆ ಸೈದ್ಧಾಂತಿಕ ಸಮರ್ಥನೆಯನ್ನು ಮಂಡಿಸುತ್ತಾ ದ್ವಿತೀಯ ಅಂತರ್ರಾಷ್ಟ್ರೀಯವಾದ ಪ್ರಮುಖ ಪ್ರತಿನಿಧಿಗಳು ಹಾಗೂ ನಾಯಕರು ಸಮಾಜವಾದಕ್ಕೆ ದ್ರೋಹ ಬಗೆದರು. ತನ್ನ ಪ್ರಖ್ಯಾತ "ದ್ವಿತೀಯ ಅಂತರಾಷ್ಟ್ರೀಯವಾದ ಕುಸಿತ" (ಸಂಗ್ರಹಿತ ಕೃತಿಗಳು-ಸಂಪುಟ 21, ಪುಟ 207-259) ಎಂಬ ಕಿರುಹೊತ್ತಿಗೆಯಲ್ಲಿ ಲೆನಿನ್ ಈ ಸಿದ್ಧಾಂತಗಳನ್ನು ಬಯಲಿಗೆಳೆದಿದ್ದರು. ಅವರ ಪ್ರಕಾರ "ಅತ್ಯಂತ ನಿಪುಣತೆಯಿಂದ ವೈಜ್ಞಾನಿಕ ಹಾಗೂ ಅಂತರಾಷ್ಟ್ರೀಯ ಸಿದ್ಧಾಂತವಾಗಿ ಕಾಣುವಂತೆ ಮಂಡಿಸಲ್ಪಟ್ಟ ಸಾಮಾಜಿಕ ಸಂಕುಚಿತವಾದದ ಅತ್ಯಂತ ನವಿರಾದ ಸಿದ್ಧಾಂತವೆಂದರೆ ಕಾಟ್ಸ್‌ಕಿ (Kautsky) ಮಂಡಿಸಿದ ಅತಿ ಸಾಮ್ರಾಜ್ಯವಾದದ ಸಿದ್ಧಾಂತ. "ಕಾಟ್ಸ್‌ಕೀಯ ಮಾತುಗಳಲ್ಲೇ ಲೆನಿನ್ ಈ ಸಿದ್ಧಾಂತವನ್ನು ಬಯಲಿಗೆಳೆದಿದ್ದಾರೆ. ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುವಲ್ಲಿ ಸಾಮ್ರಾಜ್ಯಶಾಹಿಗಳ ತೀವ್ರ ಸ್ಪರ್ಧೆಯಿಂದಾಗಿ ಹಲವು ರಕ್ಷಣಾತ್ಮಕ ಧೋರಣೆಗಳನ್ನು ಅನುಸರಿಸಲಾಗುತ್ತದೆ. ಇವರಿಂದ ಬಂಡವಾಳದ ರಫ್ತಿನಲ್ಲಿ 'ತ್ವರಿತಗತಿಯ ಅವನತಿ' ಉಂಟಾಯಿತು. ಇದನ್ನು ಕಂಡ ಕಾಟ್ಸ್‌ಕೀ ಈ ಸಾಮ್ರಾಜ್ಯಶಾಹೀ ಧೋರಣೆಯ ಸ್ಥಾನದಲ್ಲಿ ಒಂದು ಹೊಸ 'ಅತೀ ಸಾಮ್ರಾಜ್ಯಶಾಹೀ' ಧೋರಣೆಯನ್ನನುಸರಿಸಬೇಕೆಂದು ಸಲಹೆ ನೀಡುತ್ತಾರೆ. ಈ ರೀತಿ ಮಾಡುವುದರಿಂದ ರಾಷ್ಟ್ರೀಯ ಹಣಕಾಸಿನ ಬಂಡವಾಳದ ಪರಸ್ಪರ ಪ್ರತಿಸ್ಪರ್ಧೆಯ ಬದಲು ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಸಂಯುಕ್ತ ಶೋಷಣೆ ಆರಂಭವಾಗುತ್ತದೆ.

ಲೆನಿನ್ ಇನ್ನೂ ಹಲವು ಸಾಮಾಜಿಕ ಸಂಕುಚಿತವಾದದ ಸಮಯ ಸಾಧಕ ಸಿದ್ಧಾಂತಗಳನ್ನೂ ವಿರೋಧಿಸಿದ್ದರು. ಅವುಗಳಲ್ಲಿ ಕೆಲವು ಊಳಿಗಮಾನ್ಯ ಪದ್ಧತಿಯ ವಿರುದ್ಧ ಹೋರಾಡುವ ಹೆಸರಿನಲ್ಲಿ ನಿರಂಕುಶ ಪ್ರಭುತ್ವಗಳನ್ನು ಬೆಂಬಲಿಸುವುದು, ಬಂಡವಾಳಶಾಹಿ ಬೆಳೆದರೆ ಮಾತ್ರ ಅದು ಮುಂದೆ ಸಮಾಜವಾದಕ್ಕೆ ದಾರಿಮಾಡಿಕೊಡುತ್ತದೆ ಎಂಬ ತರ್ಕ ಮುಂದಿಟ್ಟು ಬಂಡವಾಳಶಾಹಿಯ ಬೆಳವಣಿಗೆಯನ್ನು ಬೆಂಬಲಿಸುವುದು ಇತ್ಯಾದಿ. ಲೆನಿನ್‌ರು ಸಾಮಾಜಿಕ ಸಂಕುಚಿತವಾದಿಗಳ ನಿಜಸ್ವರೂಪವನ್ನು ಬಯಲುಮಾಡಿದ ರೀತಿ ಈಗ ಹಳೆಯ ಹಾಗೂ ಹೊಸ ವಿಧದ ಸಾಮಾಜಿಕ ಜನತಂತ್ರವಾದಿಗಳ ನಿಜಸ್ವರೂಪವನ್ನು ಹೊರಗೆಡಹುವಲ್ಲಿ ನಮಗೆ ಈಗ ಬಹಳ ಪ್ರಸ್ತುತವೆನಿಸುತ್ತದೆ.

'ಸಮಾಜವಾದಿ' ಮತ್ತು 'ಮಾರ್ಕ್ಸ್‌ವಾದಿ'ಯೆನಿಸಿದ ಕಾಟ್ಸ್‌ಕೀ 'ಅತಿ ಸಾಮ್ರಾಜ್ಯವಾದ'ದ ಸಿದ್ಧಾಂತ ಮಂಡಿಸಿದರು. ತಿಕ್ಕಾಟವಿಲ್ಲದೆ ಸಾಮ್ರಾಜ್ಯಶಾಹಿಯ ಬೆಳವಣಿಗೆಯ ಸಾಧ್ಯತೆ ಎಷ್ಟೊಂದು ವ್ಯಾಪಕವಾಗಿತ್ತೆಂದರೆ 'ಸಮಾಜವಾದೀ' ಕಾಟ್ಸ್‌ಕೀಗೆ ಬಹಿರಂಗವಾಗಿ ಅದನ್ನು ಪ್ರತಿಪಾದಿಸುವ ಧೈರ್ಯಬಂದಿತ್ತು.

ರಾಷ್ಟ್ರೀಯ ಬೂರ್ಜ್ವಾ ವರ್ಗ ಅಥವಾ ಬೂರ್ಜ್ವಾ ರಾಷ್ಟ್ರವಾದ

ನಮ್ಮ ದೇಶದಲ್ಲಿ ರಾಷ್ಟ್ರೀಯ ಬೂರ್ಜ್ವಾವರ್ಗದೊಂದಿಗೆ ಸಖ್ಯ ಬೆಳೆಸುವ ಸಿದ್ಧಾಂತವನ್ನು ಡಾಂಗೆ ಕಂಪನಿ ಪ್ರತಿಪಾದಿಸಿತು. ಭಾರತ-ಚೀನಾ ಯುದ್ಧದ ಸಮಯದಲ್ಲಿ ಹಾಗೂ ಹಲವು ಇತರ ಸಂದರ್ಭಗಳಲ್ಲಿ ಈ ತೀವ್ರ 'ಬೂರ್ಜ್ವಾ ರಾಷ್ಟ್ರೀಯತೆ'ಯ ಪ್ರವೃತ್ತಿಯನ್ನು ತೋರ್ಪಡಿಸಿತ್ತು. ಈ ಹೊಸ ಸಾಮಾಜಿಕ ಜನತಂತ್ರವಾದಿಗಳ ಕೂಟ ಯಾವ ಮಟ್ಟದವರೆಗೆ ಹೋಗಿತ್ತೆಂದರೆ 'ಊಳಿಗಮಾನ್ಯ' ಬಲಪಂಥೀಯ ಪ್ರತಿಕ್ರಿಯಾವಾದಿಗಳ ವಿರುದ್ಧ ಹೋರಾಡುವ ಹೆಸರಿನಲ್ಲಿ ನವಫ್ಯಾಸಿಸ್ಟ್ ಇಂದಿರಾಗಾಂಧಿ ಜತೆಗೂಡಿ ಫ್ಯಾಸಿಸ್ಟ್ ವಿರೋಧೀ ಸಮ್ಮೇಳನವನ್ನು ಅದು ನಡೆಸಿತ್ತು. 'ರಾಷ್ಟ್ರೀಯ ಆರ್ಥಿಕತೆ'ಯನ್ನು ಬೆಳೆಸಬೇಕೆಂದು ವಾದ ಹೂಡುವಾಗ ತುರ್ತುಪರಿಸ್ಥಿತಿಯ ಲಾಭಗಳು ಬೋನಸ್‌ನ ನಷ್ಟಕ್ಕಿಂತ ಹತ್ತುಪಟ್ಟು ಹೆಚ್ಚು ಎಂದು ಕಾರ್ಮಿಕರಿಗೆ ಸಲಹೆ ಕೊಡಲೂ ಈ ಕೂಟ ಹಿಂಜರಿಯಲಿಲ್ಲ. 'ರಾಷ್ಟ್ರೀಯ ಆರ್ಥಿಕತೆ'ಯನ್ನು ಬೆಳೆಸುವುದೆಂದರೆ ಈ ದೇಶದಲ್ಲಿ ಬಂಡವಾಳಶಾಹಿಯನ್ನು ಕಟ್ಟುವುದೆಂದೇ ಆಗುತ್ತದೆ. ತುರ್ತುಪರಿಸ್ಥಿತಿಯಲ್ಲಿ ಅಮೇರಿಕಾ ಹಾಗೂ ಇತರ ಸಾಮ್ರಾಜ್ಯಶಾಹಿಗಳು ಬಂಡವಾಳ ಹೂಡಿಕೆಗೆ ಸೂಕ್ತ ವಾತಾವರಣ ಪಡೆಯುವಲ್ಲಿ ಯಶಸ್ವಿಯಾದರು. ಆದ್ದರಿಂದ ತುರ್ತುಪರಿಸ್ಥಿತಿ ವಾಸ್ತವವಾಗಿ ಸಾಮ್ರಾಜ್ಯಶಾಹಿಗಳು ತಮ್ಮ ಹಿತಾಸಕ್ತಿ ಬೆಳೆಸಿಕೊಳ್ಳಲು ಸಹಾಯಕವಾಯಿತು. ಎಲ್ಲಿ ಕಾಟ್ಸ್‌ಕೀ ಸೋತಿದ್ದರೋ ಅಲ್ಲಿ ಡಾಂಗೆಯವರು ಕ್ಷಣಿಕವಾಗಿಯಾದರೂ ಗೆದ್ದರು.

ಬೂರ್ಜ್ವಾ ರಾಷ್ಟ್ರೀಯವಾದ-ಸಮಾಜವಾದದ ಬದ್ಧವೈರಿ

ಆರಂಭದಿಂದಲೇ ಡಾಂಗೆ ಬೂರ್ಜ್ವಾ ರಾಷ್ಟ್ರೀಯವಾದೀ ಪ್ರವೃತ್ತಿಯನ್ನು ತೋರ್ಪಡಿಸಿದ್ದರು. ಲೆನಿನ್ ಹೇಳಿಕಳಿಸಿದಾಗ ಅವರು ತೃತೀಯ ಅಂತರಾಷ್ಟ್ರೀಯದಲ್ಲಿ ಭಾಗವಹಿಸಲು ನಿರಾಕರಿಸಿದರು. ಕಾನ್‌ಪುರ ಸಂಚಿನ ಕೇಸಿನಲ್ಲಿ ಅವರ ಉತ್ತರ ಇತರರಿಗಿಂತ ಭಿನ್ನವಾಗಿತ್ತು. ಮೀರತ್ ಸಂಚಿನ ಮೊಕದ್ದಮೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಗಳಿಗೆ ಸಹಾಯಮಾಡುತ್ತೇನೆಂದು ಜೈಲಿನಿಂದ ಅವರು ಬರೆದ ಕಾಗದದ ವಿಚಾರ ಪಕ್ಷ ವಿಭಜನೆಯಾದನಂತರ ಬಯಲಿಗೆ ಬಂತು. ಚೀನೀಯರನ್ನು ಖಂಡಿಸಬೇಕೆಂಬ ತನ್ನ ಇಚ್ಛೆಯನ್ನು ಬೆಂಬಲಿಸದೇ ಇದ್ದ ಸಿ.ಪಿ.ಐ.ನ ರಾಷ್ಟ್ರೀಯ ಸಮಿತಿಯ ಎಲ್ಲಾ ಸದಸ್ಯರ ಹೆಸರನ್ನು ಡಾಂಗೆಯವರು ಗುಲ್ಜಾರಿಲಾಲ್‌ನಂದಾರಿಗೆ ಕೊಟ್ಟದ್ದರಿಂದ ಅವರನ್ನೆಲ್ಲಾ ಬಂಧಿಸುವ ಶ್ವೇತಪತ್ರವನ್ನು ತಯಾರಿಸಲಾಯಿತು ಎಂದೂ ಸಂಶಯಪಡಲಾಗಿದೆ. 1967ರಲ್ಲಿ ಜೆಕೋಸ್ಲೋವಾಕಿಯಾದಲ್ಲಿ ಮಧ್ಯಪ್ರವೇಶವನ್ನು ಕುರಿತಂತೆ ಒಂದು ದೃಢ ನಿಲುವು ತಳೆಯಲು ಅವರಿಗಾಗಲಿಲ್ಲ. ಬಾಣಿ ದೇಶಪಾಂಡೆಯವರ 'The Universe of Vedanta' ಎಂಬ ಪುಸ್ತಕಕ್ಕೆ ಡಾಂಗೆ ಬರೆದ ವಿವಾದಾಸ್ಪದ ಮುನ್ನುಡಿ ಮಾರ್ಕ್ಸ್‌ವಾದ ಹಾಗೂ ಕಾರ್ಮಿಕರ ಅಂತರಾಷ್ಟ್ರೀಯತೆಯ ಒಗ್ಗೂಡಿಸುವ ಶಕ್ತಿಗೆ ಬದಲಾಗಿ ರಾಷ್ಟ್ರೀಯ ಸಂಕುಚಿತವಾದ ಒಡಕು ತರುವ ಶಕ್ತಿಯನ್ನು ಹೊಂದಿದೆಯೆಂಬುವನ್ನು ಬಹಿರಂಗವಾಗಿ ಸಾರಿದೆ. ಈ ತೀವ್ರ ರಾಷ್ಟ್ರೀಯ ಸಂಕುಚಿತವಾದದ ಪ್ರವೃತ್ತಿಯಿಂದಾಗಿ ಅವರು ಸತತವಾಗಿ ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷದಲ್ಲಿ ಒಡಕು ತರುವಂತಾಯಿತು; ಈ ರೀತಿ ಭಾರತದಲ್ಲಿ ಸಮಾಜವಾದದ ನಿಜವಾದ ಶತ್ರುವಿನ ಕೈಂಕರ್ಯ ಮಾಡುವಂತಾಯಿತು.

ಭಾರತದಲ್ಲಿ ಇತರ ರಾಜಕೀಯ ಗುಂಪುಗಳು ತೋರ್ಪಡಿಸಿದ ಬೂರ್ಜ್ವಾ ರಾಷ್ಟ್ರೀಯವಾದವೂ ಇಷ್ಟೇ ಸಮಾಜವಾದ ವಿರೋಧಿಯೂ ಶೋಷಕರಿಗೆ ಸಹಾಯಕವಾದದ್ದೂ ಆಗಿದೆ. SSP, PSP, LSP, ಲೋಹಿಯಾವಾದಿ

(31ನೇ ಪುಟನೋಡಿ)

ಇಬ್ಬರು ಗುಂಡರು

–ನಿರಂಜನ

ನೇಮನಾಯ್ಕರನ್ನು ಕೈದುಮಾಡಿದರೆಂಬ ಸುದ್ದಿ ಕಾಡುಕಿಚ್ಚಿನಂತೆ ಹಳ್ಳಿಹಳ್ಳಿಗೂ ಹಬ್ಬಿತು. ಜತೆಯಲ್ಲೆ, ಅಲೀಖಾನರನ್ನು ಗಿರಫ್ತಾರ್ ಮಾಡಿದರೆಂಬ ವಾರ್ತೆ ಭುಗಿಲ್‌ಭುಗಿಲೆನ್ನುತ್ತ ವಾತಾವರಣವನ್ನೆಲ್ಲ ತುಂಬಿಕೊಂಡಿತು. ಅಂಗಳದಲ್ಲಿ ಆಡುತ್ತಿದ್ದ ಪೋರ, ಎಲೆಅಡಿಕೆ ಮೆಲುಕುಹಾಕುತ್ತಿದ್ದ ಅಜ್ಜ, ಹೊಲದಲ್ಲಿ ದುಡಿದು ಬಂದ ಗಂಡಹೆಂಡತಿ, ಸಂಘದ ಯುವಕ ಕಾರ್ಯಕರ್ತರು- ಎಲ್ಲರ ಸೊಲ್ಲು ಒಂದೇ.

ಯಾಕೆ ? ಯಾಕೆ ? ಕೈದುಯಾಕೆ? ಗಿರಫ್ತಾರ್ ಯಾಕೆ ?

ಯಾಕೆ ಎಂದು ಯಾರಿಗೆ ಗೊತ್ತು? ಯಾರನ್ನು ಕೇಳಬೇಕು ?

ಎಪ್ಪತ್ತು ವರ್ಷದ ಮುದುಕ, ಅಲೀಖಾನ್. ಅರವತ್ತರ ವೃದ್ಧ, ನಾಯ್ಕ. ಇಬ್ಬರನ್ನೂ ಅರ್ಧದಾರಿ ನಡೆಸಿ, ಉಳಿದರ್ಧ ದಾರಿ ವ್ಯಾನಿನಲ್ಲಿ ಹಾಕಿ, ಮುಟ್ಟೂರಿಗೆ ಸಾಗಿಸಿದರಂತೆ.

ಪೋಲೀಸ್ ಅಧಿಕಾರಿ ಅಲೀಖಾನರ ಬಡಕಲು ಕೈಗಳನ್ನು ಸಂಕೋಲೆಯಿಂದ ಬಿಗಿದಾಗ ಆ ಮುದುಕ ಹೇಳಿದರಂತೆ:

"ಇದು ಅಲ್ಲಾ ಮೆಚ್ಚದ ಕೆಲಸ. ಏನು ಕದ್ದೆ, ಯಾವ ತುಡುಗು ಮಾಡಿದೆ ಅಂತ ಈ ಶಿಕ್ಷೆ ? ಖೂನಿ ಮಾಡಿದವರಿಗೆ ಹಾಕುವ ಹಾತ್‌ಬೇಡಿ ನನಗೆ ! ಭೇಷ್!"

ನಾಯ್ಕ ಹೇಳಿದರಂತೆ.

"ಹಿಂದೆ ಕಾಂಗ್ರೆಸ್ ಸತ್ಯಾಗ್ರಹ ಆದಾಗ ನನ್ನ ಕೈಗೆ ಬೇಡಿಬಿದ್ದಿತ್ತು. ಈಗ ರೈತಚಳುವಳಿ ಮಾಡಿದ್ದಕ್ಕೆ ಬೇಡಿ. ಇರಲಿ, ಸಾಯುವ ಮೊದಲು ಈ ಗೌರವ ಇನ್ನೊಮ್ಮೆ ಬಂತಲ್ಲ!"

ಇವರಿಬ್ಬರು ಆಡಿದ ಮಾತುಗಳು ಕಿವಿಯಿಂದ ಕಿವಿಗೆ ಹಬ್ಬಿದುವು. ಹಳ್ಳಿಗೆ ಹಳ್ಳಿಯೇ ಆಗಲೇ ಮುಟ್ಟೂರಿಗೆ ಹೋಗಬೇಕೆಂದು ಕೆಲವರು ಒತ್ತಾಯ ಪಡಿಸತೊಡಗಿದರು. ಆದರೆ ಕೊನೆಗೆ, ನಿರಲದಿಂದ ಬಸಪ್ಪ ಬರುವತನಕ ಕಾದಿರಬೇಕೆಂದು ತೀರ್ಮಾನವಾಯಿತು.

ರಾತ್ರಿ ಎಂಟುಗಂಟೆಗೆ ನಿರಲ ರೈತ ಸಂಘದ ಕಾರ್ಯದರ್ಶಿ ಬಸಪ್ಪ ಬಂದ.

"ಹೆದರಬೇಡಿ, ಹೆದರಬೇಡಿ", ಎಂದ ಬಸಪ್ಪ.

ಅವನ ಎತ್ತರದ ದೇಹ ಮತ್ತೂ ಸ್ವಲ್ಪ ಎತ್ತರವಾಗಿ ಕಾಣಿಸುತ್ತಿತ್ತು. ಸ್ವರದ ತೀಕ್ಷ್ಣತೆ ತುಸು ಹೆಚ್ಚಾಗಿತ್ತು.

ಅವನು ಹೇಳಿದ :

"ಆದದ್ದೆಲ್ಲ ಭಲೋ ಆಯಿತು. ನಾಳೆ ನಸುಕಿಲೆ ಮೆರವಣಿಗೆ ತಗೊಂಡು ಹೊರಟುಬಿಡೋಣ. ನಿರಲ, ನಲಗ, ಸೆಣ್ಣೂರು, ಚಿಮಾರ-ಎಲ್ಲ ಹಳ್ಳಿಗಳಿಂದಲೂ ಮೆರವಣಿಗೆ. ನೋಡೋಣಂತ, ಮುಖಂಡರನ್ನ ಎಲ್ಲಿಗೆ ಒಯ್ತಾರೊ ನೋಡೋಣ..."

ಆ ರಾತ್ರಿ ಗಂಭೀರ ವಾತಾವರಣ ಹಳ್ಳಿಯನ್ನು ಪಸರಿಸಿತ್ತು. ಮಿಣಿಮಿಣಿ ಎಳ್ಳೆಣ್ಣೆ ದೀಪಗಳು ಅಲ್ಲಲ್ಲಿ ಉರಿಯುತ್ತಿದ್ದವು. ನಾಯಿಗಳು ಆಗಾಗ್ಗೆ ಬಗುಳುತ್ತಿದ್ದುವು, ಕಚ್ಚಾಡುತ್ತಿದ್ದುವು.

ಬೆಳ್ಳಿಚಿಕ್ಕೆ ಮೂಡುವ ಕಾಲಕ್ಕೆ ಎಲ್ಲರೂ ಎಚ್ಚರಾದರು.

ನಡೆಯಲಾಗದವರು, ಹಣ್ಣು ಮುದುಕರು, ಹಸುಳೆಮಕ್ಕಳು ಇಷ್ಟು ಜನಮಾತ್ರ ಮನೆಗಳಲ್ಲೇ ಉಳಿದರು. ಆ ದಿನ ಹೊಲಕ್ಕೆ ಯಾರೂ ಹೋಗಲಿಲ್ಲ. ಹೆಂಗಸರು ಬುತ್ತಿಕಟ್ಟಿದರು. ಗಂಡಸರು ರುಮಾಲು ಸುತ್ತಿದರು. ಉತ್ಸಾಹದ ಹುಡುಗಹುಡುಗಿಯರು ಬಾವುಟ ಹಿಡಿದರು. ಒಳ್ಳೆಯ ಕಂಠ ಇದ್ದವರು ದೇಶಪ್ರೇಮದ ರೈತ ಜಾಗೃತಿಯ, ಹಾಡುಹಾಡಿದರು.

ಕತ್ತಲೆಯನ್ನು ಹೊಡೆದೋಡಿಸುತ್ತ, ಬೆಳಕನ್ನು ಬಾ ಎಂದು ಕರೆಯುತ್ತ, ರೈತಸಮುದಾಯದ ಠೋಳಿ ಹೊರಟಿತು.

ಮುಟ್ಟೂರಿಗೆ ಅವರ ಪಯಣ. ಅಲ್ಲಿ ಅವರು ಅಧಿಕಾರಿಗಳನ್ನು ಕಂಡು, "ನೀವು ಮಾಡಿದ್ದು ತಪ್ಪು; ನಮ್ಮವರನ್ನು ಬಿಡಿರಿ!" ಎನ್ನುವರು. ನೇಮನಾಯ್ಕ, ಅಲೀಖಾನ ಇಬ್ಬರನ್ನೂ ಬಿಡಿಸಿಕೊಂಡು, ವಿಜೃಂಭಣೆಯಿಂದ ಕರೆತಂದು ಅವರ ಗ್ರಾಮಕ್ಕೆ ಮುಟ್ಟಿಸಿ, ಅಲ್ಲಿಂದ ತಮ್ಮತಮ್ಮ ಮನೆಗಳಿಗೆ ಮರಳುವರು. ಅದು ತಮ್ಮ ಶಕ್ತಿಯ ಪ್ರದರ್ಶನ, ತಮಗೆ ಲಭಿಸುವ ವಿಜಯ.

ಗಂಟಲುಗಳಿಂದ ಘೋಷ ಹೊರಟಿತು :

"ರೈತಸಂಘಕ್ಕೆ ಜಯವಾಗಲಿ !"

"ಇಂಕ್ವಿಲಾಬ್ ಜಿಂದಾಬಾದ್ !"

"ನಮ್ಮ ಮುಖಂಡರನ್ನು ಬಿಟ್ಟು ಬಿಡಿರಿ !"

"ಹೊಲ ಯಾರದು ? ರೈತನದು!"

ಕೊನೆಯ ಘೋಷ ಕೇಳಿಸಿದ ಕೆಲವರಿಗೆ ಸಿಟ್ಟು. ಹೊಲ ರೈತನದಂತೆ ! ಅದು ಹೇಗೆ ? ಹೊಲ ಜಮೀನ್ದಾರನದು. ರೈತ ದುಡಿಯುವ ಆಳು. ಆಳಾದವನು ದಾರಿಬಿಟ್ಟು, ತಾನೇ ಒಡೆಯ ಎಂದರೆ ?

ಆದರೆ ರೈತರು "ಈಗಲೇ ಹೊಲ ವಶಪಡಿಸಿಕೊಳ್ತೇವೆ", ಎಂದಿರಲಿಲ್ಲ. ಕಾಂಗ್ರೆಸ್ ಸರಕಾರ ತಂದ ಹೊಲ ಸಾಗುವಳಿ ಕಾಯಿದೆ-ಟೆನೆನ್ಸಿ ಆಕ್ಟು-ಸಮರ್ಪಕವಾಗಿ ಜಾರಿಗೆ ಬರಲಿ ಎಂದು ಅವರ ಆಗ್ರಹ. ಹೊಸ ಕಾನೂನನ್ನು ಅವರು ಸ್ವಾಗತಿಸಿದ್ದಾರೆ. ಈಗ ಅದರ ಕಣ್ಣುತಪ್ಪಿಸಿ ಜಮೀನ್ದಾರರು ಮೋಸಮಾಡುವುದುಬೇಡ. ಮೋಸಮಾಡಲು ಬಿಡಲಾರೆವು !- ಎನ್ನುವುದು ರೈತರ ಖಂಡತುಂಡ ನಿಲುವು.

ಇದು ಹೊಲದೊಡೆಯ ಶ್ರೀಮಂತ ವರ್ಗಕ್ಕೆ ಹೇಗೆ ಸಹನೆಯಾದೀತು ? ಅಧಿಕಾರಿಗಳು ಉಳ್ಳವರ ಆಪ್ತರು. ರೈತರ ಆ ಮನೋವೃತ್ತಿಯಿಂದ ಶಾಂತಿಭಂಗವಾಗುತ್ತದೆನ್ನುವ ಅಭಿಪ್ರಾಯ ಅವರಲ್ಲಿ ಮೂಡಿದ್ದು ಸಹಜ.

...ಮುಟ್ಟೂರು ಕೋರ್ಟು ಆರಂಭವಾಗುವುದು ಹನ್ನೊಂದು ಗಂಟೆಗೆ. ಆದರೆ ರೈತರು ಆ ಊರನ್ನು ಹತ್ತು ಹೊಡೆಯುವುದರೊಳಗೇ ಸೇರಿದ್ದರು. ಅದು, ನಾಲ್ಕಾರು ಹಳ್ಳಿಗಳಿಂದ ರೈತರು ಹೊರಟು, ಸಾಲುಗಟ್ಟಿ, ಕಾಲುದಾರಿ ತುಳಿದು, ರಾಜಬೀದಿಗೆ ಬಂದಿದ್ದ ಭಾರೀ ಮೆರವಣಿಗೆ.

ಜೀವ ಸಂಚಾರ ಆರಂಭವಾಗಿದ್ದ ನಗರ. ಅಂಗಡಿಗಳನ್ನು ತೆರೆದಿದ್ದರು. ಕಚೇರಿಯವರು ಬಿರುಸುಬಿರುಸಾಗಿ ನಡೆಯುತ್ತಿದ್ದರು. ಹನ್ನೊಂದು ಗಂಟೆಯ ಶಾಲೆಗೆಂದು ಹೊರಟ ಹುಡುಗರು ಅಲ್ಲಿಇಲ್ಲಿ ಬೀದಿತುಂಬ ತುಂಬಿಕೊಂಡಿದ್ದರು. ಉಡುಪಿ ಬ್ರಾಹ್ಮಣರದೊಂದು ಹೋಟೆಲಿನ ಗ್ರಾಮಾಫೋನ್ 'ತುಮ್‌ನೆ ಮುಝ್ ಕೋ ಪ್ರೇಮ ಸಿಖಾಯ' ಎಂದು ಹಾಡುತ್ತಿತ್ತು.

ಹಳ್ಳಿಗಮಾರರ ಮೆರವಣಿಗೆಯೂ ಜಯಘೋಷವೂ ಊರಿನ ಶಾಂತಿಯನ್ನು ಕದಡಿದುವು. ಗುಸುಗುಸು ಮಾತಾಡಿದರು ಜನ. ಮಧ್ಯಮ ವರ್ಗದವರೆಲ್ಲ ಕೂತಲ್ಲೇ ನಿಂತಲ್ಲೇ ಕಣ್ಣುಬಿಟ್ಟು ನೋಡಿದರು. ಕಿವಿಗೊಟ್ಟುಕೇಳಿದರು. ಸಭ್ಯತೆಯ ಯಾವ ಲಕ್ಷಣವೂ ಇಲ್ಲದೆ,ಯಾವ'ಲಜ್ಜೆ'ಯೂ ಇಲ್ಲದೆ, ಯಾವುಯಾವುದೋ ಹಾಡು ಹಾಡುತ್ತ ಕೆಂಪುಬಾವುಟ ಹಿಡಿದುಕೊಂಡು ನೇರವಾಗಿ ಬೀದಿಯುದ್ದಕ್ಕೂ ನಡೆಯುತ್ತಿದ್ದರು ಯುವಕಯುವತಿಯರು, ಇಳಿವಯಸ್ಸಿನ ನರೆಗೂದಲ ಮುದುಕಮುದುಕಿಯರು.

"ರೈತಸಂಘದ ಜನ. ಅವರ ಮುಖಂಡರನ್ನು ಬಂಧಿಸಿದ್ದಾರಂತೆ. ಬಿಡಿಸಿಕೊಂಡು ಹೋಗೋದಕ್ಕೆ ಬಂದಿದ್ದಾರೆ".

ಈ ಮಾತು ಊರಿನ ಉದ್ದಕ್ಕೂ ಅಗಲಕ್ಕೂ ಪ್ರಸಾರವಾಯಿತು.

ಬೀದಿಗಳಲ್ಲಿ ಸುತ್ತಾಡಿದ ಸಾವಿರ ಎರಡುಸಾವಿರ ರೈತ ಸ್ತ್ರೀ ಪುರುಷರು ಕೋರ್ಟಿನ ಆವರಣದೊಳಕ್ಕೆ ಬಂದರು.

ಸದ್ದುಗದ್ದಲ, ಪೋಲೀಸ್ ಅಧಿಕಾರಿಗಳು ಕೋರ್ಟಿನ ಸುತ್ತಲೂ ರಕ್ಷಣೆಗಾಗಿ ರಿಸರ್ವ್‌ದಳವನ್ನಿಟ್ಟರು.

ಡಿ. ಎಸ್. ಪಿ. ಬಂದು ಹೇಳಿದ :

"ಯಾಕೆ ಬಂದೀರಿ ಇಲ್ಲಿಗೆ ? ಹೊರಟುಹೋಗ್ರಿ..."

ಒಬ್ಬರೂ ಮಿಸುಕಲಿಲ್ಲ.

ಸಂಘದವನೊಬ್ಬ ಕೇಳಿದ :

"ಕೋರ್ಟು ಐತೇನ್ರಿ ಈಗ ?"

ಡಿ. ಎಸ್. ಪಿ. ಸಿಟ್ಟು ಬೆಂಕಿಯಾಗಿ ಗರ್ಜಿಸಿದ :

"ಐತಿ; ಯಾಕ ?"

ಶಾಂತ ಮತ್ತು ಗಂಭೀರ ಧ್ವನಿಯಲ್ಲಿ ಉತ್ತರ :

"ನಮ್ಮ ಮಂದಿ ಇಬ್ಬರ ವಿಚಾರಣೆ ಐತಿ. ಅದು ಖುಲಾಸೆ ಆಗೋಮಟ ಇಲ್ಲೇ ಇರಾವ್ರು ನಾವು".

ದೂರ ನಿಂತಿದ್ದ ಊರಿನ ಶಾಲೆಯ ಹುಡುಗರಲ್ಲಿ ಒಬ್ಬಿಬ್ಬರು ಆ ಅಧಿಕಾರಿಯನ್ನುನೋಡಿ,"ಬುಲ್‌ಡಾಗ್!" ಎಂದರು. ಆತ ಬುಸುಗುಟ್ಟುತ್ತ ಒಳಗೆಹೋದ.

ಒಂದು ತಾಸಿನ ಹೊತ್ತಾದರೂ ನ್ಯಾಯಾಧೀಶರಾಯರು ಬರಲಿಲ್ಲ. ಆದರೆ, ಮತ್ತೆ ಐವತ್ತು ಪೋಲೀಸರು ಹೊರಗಿನಿಂದ ಬಂದರು. ರೈತ ಹೆಂಗಳೆಯರೂ ಗಂಡಸರೂ ಹಾಡುತ್ತ ಕುಳಿತರು. ಊರಿನ ಜನ ಉರಿಬಿಸಿಲನ್ನು ಲೆಕ್ಕಿಸದೆ ಆ ಬಯಲು ಪ್ರದೇಶದಲ್ಲಿ ಒಕ್ಕೊತ್ತಾಗಿ ನಿಂತರು, ಮೂಗಿನ ಮೇಲೆ ಬೆರಳಿಟ್ಟು.

ಡಿ.ಎಸ್.ಪಿ. ಹೊರಬಂದು ಆಜ್ಞಾಪಿಸಿದ :

"ಹಾಡುವುದು ಬಂದ್‌ಮಾಡ್ರಿ".

ಯಾರೋ ಸೀನಿದರು, ಯಾರೋ ನಕ್ಕರು; ಯಾರೋ ಕೂ ಎಂದರು. ನಿಂತು ನೋಡುತ್ತಿದ್ದವರೋ ಕುಳಿತು ಹಾಡುತ್ತಿದ್ದವರೋ ಅಂತೂ ಯಾರೋ! ಕಂಪಿಸುತ್ತ ಅಧಿಕಾರಿ, ಪೋಲೀಸರನ್ನು ನೋಡಿ, ಕರ್ಕಶ ಧ್ವನಿಯಲ್ಲಿ ಏನನ್ನೋ ಒದರಿದ. ಆ ಐವತ್ತು ಮಂದಿ ಕೈಬಡಿಗೆ ಮೇಲಕ್ಕೆತ್ತಿದರು. ರೈತಸಮುದಾಯ ಎದ್ದು ನಿಂತಿತು. ಮಧ್ಯಮವರ್ಗದವರ ಹೃದಯಗಳು ಡವಡವನೆಂದುವು.

ಇನ್ನೇನಾಗುವುದು ? ಈಗೇನಾಗುವುದು ?

ಅಧಿಕಾರಿ ಸೀಟಿ ಊದಿದ. ಆ ಸದ್ದನ್ನು ಅಡಗಿಸಿ ಹಾರನ್ ಕೇಳಿಸಿತು, ನ್ಯಾಯಾಧೀಶರ ಕಾರಿನದು. "ಡ್ಯಾಮಿಟ್", ಅಂದ ಅಧಿಕಾರಿ. ಲಾಠೀಚಾರ್ಜು ಆಗಲಿಲ್ಲ. ಕಾರಿನಿಂದಿಳಿದ ನ್ಯಾಯಾಧೀಶರೊಡನೆ ಅಧಿಕಾರಿ ಗೊಣಗಿದ.

ಅವರೆಂದರು :

"ಸುಮ್ಮನೆ ಕೂಡಲು ಹೇಳ್ರಿ. ತೀರ್ಪು ಆದ್ಮೇಲೆ ಬಂದಹಾದಿ ಹಿಡಿಯಲಿ!"

ಅವಮಾನಿತರಾದವರಂತೆ ರೈತರು ಒಬ್ಬರಮುಖವನ್ನೊಬ್ಬರು ನೋಡಿದರು.

ಪೋಲೀಸ್‌ವ್ಯಾನ್ ಗಡಗಡ ಎನ್ನುತ್ತ ಬಂತು. ನೆರೆದಿದ್ದ ಜನಸ್ತೋಮ ನೋಡುತ್ತಿದ್ದಂತೆ ಇಬ್ಬರು ಮುದುಕರು ಅದರಿಂದ ಇಳಿದರು. ಅಲೀಖಾನರ ಎಡಗೈಗೂ ನಾಯ್ಕರ ಬಲಗೈಗೂ ಕೂಡಿಯೇ ಬೇಡಿಹಾಕಿದ್ದರು. ಮುಟ್ಟೂರಿನ ಜನ ಬೊಟ್ಟುಮಾಡಿ ತೋರಿಸಿದರು :

"ಅವರು ! ಅವರು!"

ನೆರೆದಿದ್ದ ರೈತರೆಡೆಯಿಂದ ಜಯಕಾರ ಮೊಳಗಿತು :

"ಅಲೀಖಾನರಿಗೆ ಜಯವಾಗಲಿ ! ನೇಮನಾಯ್ಕರಿಗೆ ಜಯವಾಗಲಿ ! ಕಿಸಾನ್ ಸಭಾ ಕಿ ಜಯ್!"

ಚಿಮೂರಿನರೈತಮುಖಂಡ ಹೇಳಿದ:

"ನಿನ್ನೆ ಒಬ್ಬರ ಹೆಗಲ ಮೇಲೆ ಒಬ್ಬರು ಕೈಯಿಟ್ಟು ನಡೆದಿದ್ದರು. ಇವತ್ತು ಒಬ್ಬರ ಕೈಯಲ್ಲಿ ಇನ್ನೊಬ್ಬರ ಕೈ".

ಯಾರೋ ಅಂದ ನುಡಿಗೆ ಉಳಿದವರೆಲ್ಲ ಸ್ವರಕೂಡಿಸಿದರು :

"ನಮ್ಮ ಮುಖಂಡರಿಗೆ ಅಭಿವಂದನೆ!"

ಆ ಮುದುಕರ ಮುಖಗಳು ಬೆಳಗಿದುವು. ಅವರ ಕಣ್ಣುಗಳು ತೇವಗೊಂಡವು.

ಪೋಲೀಸರ ರಕ್ಷಣೆಯಲ್ಲಿ ಅವರನ್ನು ಒಳಕ್ಕೊಯ್ದರು. ಹೊರಗೆ ಜನರ ಒತ್ತಡ ಹೆಚ್ಚಿತು.

ಒಳಗೆ 'ವಿಚಾರಣೆ' ಆಯಿತಂತೆ. ಹೊರಗಿನ ಯಾರಿಗೂ ಅದು ತಿಳಿಯದು.

"ಕೊಲೆ-ಸುಲಿಗೆ-ಹಿಂಸೆಮಾಡುವಂತೆ ಅಜ್ಞರಾದ ಹಳ್ಳಿಯವರನ್ನು ನೀವು ಪ್ರೇರೇಪಿಸಿದ್ದೀರಿ", ಎಂದು ಆರೋಪಿಸಲಾಯಿತಂತೆ.

"ಸುಳ್ಳು!" ಎಂದು ಮುದುಕರಿಬ್ಬರೂ ಉತ್ತರವಿತ್ತರಂತೆ; "ನಾವು ರೈತಸಂಘದವರು. ಹಿಂಸೆಮಾಡುವ ದರೋಡೆಖೋರರಲ್ಲ. ನಮ್ಮದು ನ್ಯಾಯಬದ್ಧ ಹೋರಾಟ. ನಮ್ಮ ಹಳ್ಳಿಗಳಲ್ಲಿ ಹಿಂಸಾಚರಣೆ ಒಂದೇ ಒಂದು ಕಡೆಯೂ ಆಗಿಲ್ಲವಲ್ಲ", ಎಂದರಂತೆ.

"ನೀವು ಸರಕಾರಕ್ಕೆ ದ್ರೋಹ ಬಗೆಯುತ್ತಿದ್ದೀರಿ", ಎಂದು ರೇಗಿ ನುಡಿದರಂತೆ ಪೋಲೀಸ್ ಪ್ರಾಸಿಕ್ಯೂಟರ್.

"ದ್ರೋಹವೆಂದರೇನು ? ಇರುವ ಸಾಗುವಳಿ ಶಾಸನವನ್ನು ಕೃತಿಗೆ ಇಳಿಸುತ್ತಿರುವವರು ನಾವು. ಕಾಯಿದೆಯನ್ನು ವಿರೋಧಿಸಿ ಮೋಸಮಾಡುತ್ತಿರುವವರು, ಜನತೆಗೆ ದ್ರೋಹಬಗೆಯುತ್ತಿರುವವರು, ಹೊಲದೊಡೆಯರು", ಎಂದು ಅವರಿಬ್ಬರೂ ಉತ್ತರಕೊಟ್ಟರಂತೆ.

"ನಮ್ಮನ್ನು ಬಿಡಿರಿ. ಹೊಲದೊಡೆಯರನ್ನು ಬಂದಿಸಿರಿ. ರೈತರಸಂಘ ಬೆಳೆಯಲಿ. ಜಮೀನ್ದಾರರ ಸಂಘವನ್ನು ವಿಚಾರಣೆಗೆ ಗುರಿಮಾಡಿ", ಎಂದು ಅವರು ಆಹ್ವಾನಿಸಿದರಂತೆ.

ಒಂದುತಾಸು ಕಳೆದಮೇಲೆ ತೀರ್ಪು.

ಪೋಲೀಸ್ ಶಾಸನದ ಗುಂಡಾ ಕಲಮಿನನ್ವಯ ನೇಮನಾಯ್ಕ, ಅಲೀಖಾನ ಇಬ್ಬರನ್ನೂ ಜಿಲ್ಲೆಯಿಂದ ಹೊರಹಾಕಲಾಗಿದೆ!"

...ಮುದುಕರನ್ನು ಮರಳಿ

(29ನೇ ಪುಟನೋಡಿ)

ಶಿಕ್ಷಣದ ಗುರಿಸಾಧನೆಯಲ್ಲಿ ಎಡರಂಗ ಸರಕಾರದ ಸೇವೆ

1977 ರಿಂದ 1981ರ ನಡುವೆ ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಳಿವು:

ವಿದ್ಯಾಸಂಸ್ಥೆಗಳಲ್ಲಿ ಸಾಮಾನ್ಯ ಪರಿಸ್ಥಿತಿಯನ್ನು ಮತ್ತೆ ಸ್ಥಾಪಿಸಿದ್ದು, ಪರೀಕ್ಷೆಯ ಫಲಿತಾಂಶಗಳನ್ನು ಸಮಯಕ್ಕೆ ಸರಿಯಾಗಿ ಪ್ರಕಟಿಸಿದ್ದು ಮತ್ತು ಅಧ್ಯಾಪಕರಿಗೆ ಮತ್ತು ಬೋಧಕೇತರ ಸಿಬ್ಬಂದಿಗೆ ನಿಯತಕಾಲದಲ್ಲಿ ವೇತನಸಂದಾಯ;

ಶಾಲೆಗಳಿಲ್ಲದ 3400 ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳ ಆರಂಭ, 4000 ಹೊಸ ಪ್ರಾಥಮಿಕ ಶಾಲಾ ಕಟ್ಟಡಗಳ ನಿರ್ಮಾಣ, 31,00,000 ಶಾಲಾವಿದ್ಯಾರ್ಥಿಗಳಿಗೆ ಪುಕ್ಕಟೆ ಆಹಾರ ಪೂರೈಕೆ,-ಎಲ್ಲಾ ಭಾಷೆಗಳ ಪುಸ್ತಕಗಳನ್ನು, ಅಭ್ಯಾಸ ಪುಸ್ತಕಗಳನ್ನು ಹಾಗೂ ಸ್ಲೇಟುಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಪುಕ್ಕಟೆಯಾಗಿ ಹಂಚಿದ್ದು-ವಿದ್ಯಾರ್ಥಿನಿಯರಿಗೆ ಉಡುಪುಗಳ ಪುಕ್ಕಟೆ ಪೂರೈಕೆ, ಪ್ರಾಥಮಿಕ ಶಾಲೆಗಳಲ್ಲಿ ಆಟ-ಓಟಗಳ ಪ್ರಾರಂಭ ಹಾಗೂ 13,800 ಪ್ರಾಥಮಿಕ ಅಧ್ಯಾಪಕರ ಹೊಸ ನೇಮಕಾತಿ;

900 ಹೊಸ ಮಾಧ್ಯಮಿಕ ಶಾಲೆಗಳನ್ನು ತೆರೆದದ್ದು, ಎಲ್ಲಾ ಸಂಸ್ಥೆಗಳಿಗೆ ಸಹಾಯದ್ರವ್ಯ, 2500 ಮಾಧ್ಯಮಿಕ ಶಾಲೆಗಳಿಗೆ ಕಟ್ಟಡಗಳ ನಿರ್ಮಾಣ, ಮಾಧ್ಯಮಿಕ ಹಂತದ ಪಠ್ಯಪುಸ್ತಕಗಳ ಪುಕ್ಕಟೆ ಪೂರೈಕೆ, ಆಟ-ಓಟಗಳಿಗೆ ಪ್ರೋತ್ಸಾಹ, ಪ್ರಯೋಗಾಲಯಗಳ ಅಭಿವೃದ್ಧಿ, 10,000 ಹೊಸ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಜೀವನ-ಕೇಂದ್ರಿತ ಪಠ್ಯಕ್ರಮದ ಆರಂಭ,-ಪ್ರಾಥಮಿಕ ಶಿಕ್ಷಣ ಕಾಯ್ದೆ, ಮಾಧ್ಯಮಿಕ ಶಿಕ್ಷಣಕಾಯ್ದೆ, ವಿಶ್ವವಿದ್ಯಾನಿಲಯ ಕಾಯ್ದೆ ಹಾಗೂ ಸಾರ್ವಜನಿಕ ಗ್ರಂಥಾಲಯಗಳ ಕಾಯ್ದೆ ಇತ್ಯಾದಿ ಪ್ರಜಾಪ್ರಭುತ್ವವಾದೀ ಶಾಸನಗಳು,-ರಾಜ್ಯ ಶೈಕ್ಷಣಿಕ ಸಂಶೋಧನಾ ಹಾಗೂ ತರಬೇತು ಮಂಡಳಿಯ ರಚನೆ;

ಈ ಹಿಂದಿನ ಕೇವಲ 701ರ ಸ್ಥಾನದಲ್ಲಿ 1575 ಹೊಸ ಗ್ರಾಮ ಗ್ರಂಥಾಲಯಗಳ ಆರಂಭ, ಗ್ರಂಥಾಲಯಗಳಿಗೆ ಅನುದಾನದಲ್ಲಿ ಹತ್ತುಪಟ್ಟು ಏರಿಕೆ, ಖಾಸಗೀ ಗ್ರಂಥಾಲಯಗಳಿಗೆ ಅನುದಾನ ಹಾಗೂ ಕಲ್ಕತ್ತಾ ಮಹಾನಗರ ಗ್ರಂಥಾಲಯದ ಸ್ಥಾಪನೆ.

ಪಶ್ಚಿಮ ಬಂಗಾಲ ಸರ್ಕಾರ

ಸ್ವಾತಂತ್ರ್ಯ ಹೋರಾಟ - ಕಾರ್ಮಿಕವರ್ಗದ ಪಾತ್ರ

ದೇಶದ ಸ್ವಾತಂತ್ರ್ಯ ಹೋರಾಟವಾಗಲೀ, ಸ್ವಾತಂತ್ರ್ಯಾನಂತರ ದೇಶದ ಜನತೆ ಎದುರಿಸುತ್ತಿರುವ ಬೆಲೆಯೇರಿಕೆ, ನಿರುದ್ಯೋಗ ಸಮಸ್ಯೆ, ಬಡತನ ಮತ್ತಿನ್ನಿತರ ಹಲವಾರು ಜೀವಂತ ಸಮಸ್ಯೆಗಳ ಕುರಿತಾಗಲೀ ಕಾರ್ಮಿಕವರ್ಗ ಯಾವುದೇ ರೀತಿಯ ಚಿಂತನೆ ಮಾಡುವುದಿಲ್ಲ. ತಮ್ಮ ಆರ್ಥಿಕ ಬೇಡಿಕೆಯನ್ನೇ ಪ್ರಧಾನವಾಗಿಟ್ಟುಕೊಂಡು ಮುಷ್ಕರ ಹೂಡುವುದೊಂದೇ ಅವರ ಕೆಲಸವೆಂಬ ಆರೋಪ ಆಳುವ ಪಕ್ಷದಿಂದಲೂ, ಒಂದು ಜನವಿಭಾಗದಿಂದಲೂ ಕೇಳಿಬರುತ್ತಿದೆ. ಸಮಾಜದಲ್ಲಿ ಅತಿ ಹೆಚ್ಚಿಗೆ ಸಂಬಳಪಡೆಯುತ್ತಿರುವ ಈ ವರ್ಗ ಬಹುಸಂಖ್ಯಾತ ಜನತೆಯ ಕುರಿತು ವಿಚಾರನೇ ಮಾಡುತ್ತಿಲ್ಲೆಂಬ ಆರೋಪಗಳೂ ಹಲವಾರು. ರೈತರ ಹೋರಾಟಗಳಿಗೆ, ಬೆಲೆಏರಿಕೆ ವಿರುದ್ಧ ಚಳುವಳಿಗೆ, ನಿರುದ್ಯೋಗ ಪರಿಹಾರಕ್ಕೆ, ಉದ್ಯೋಗಗಳ ವಿಸ್ತರಣೆಗೆ ಅವರಂತೆಯೇ ಅಸಂಘಟಿತ ಕೃಷಿಕಾರ್ಮಿಕರ, ಇತರ ಜನರ ಎಲ್ಲ ರೀತಿಯ ಸಮಸ್ಯೆಗಳ ಪರಿಹಾರಕ್ಕೂ ಸಂಘಟಿತ ಕಾರ್ಮಿಕವರ್ಗ ಅದರಲ್ಲೂ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ನೇತೃತ್ವದಲ್ಲಿರುವ ದುಡಿಯುವ ಜನತೆ ಸಂಪೂರ್ಣ ಬೆಂಬಲ ನೀಡಿದೆ, ನೀಡುತ್ತಿದೆ ಎಂಬ ವಿಷಯ ಇತ್ತೀಚಿನ ಘಟನೆಗಳು ತೋರಿಸಿಕೊಟ್ಟಿವೆ. ಕಾರ್ಮಿಕವರ್ಗದ ಈ ಪಾತ್ರ ಇನ್ನೂ ಬಲಗೊಂಡು ಮೇಲ್ಮಟ್ಟಕ್ಕೇರಬೇಕೆಂಬುದರ ಕುರಿತು ಎರಡಭಿಪ್ರಾಯವಿಲ್ಲ.

ಬ್ರಿಟಿಷರ ಗುಲಾಮಗಿರಿಯಿಂದ ದೇಶವನ್ನು ವಿಮೋಚನೆಗೊಳಿಸುವುದರಲ್ಲಿಯೂ ಭಾರತ ದೇಶದ ಕಾರ್ಮಿಕ ವರ್ಗ ಮಹತ್ವದ ಪಾತ್ರವಹಿಸಿದೆ. ರಾಜಕೀಯ ಚಳುವಳಿಯಲ್ಲಿ, ಅದರ ಗತಿಯನ್ನು ಬದಲಾವಣೆ ಮಾಡುವಲ್ಲಿ ಕಾರ್ಮಿಕವರ್ಗ ಮಹತ್ವದ ಪಾತ್ರ ವಹಿಸಿದೆಂಬುದನ್ನು ತಿಳಿದುಕೊಳ್ಳುವುದು ಅತ್ಯಗತ್ಯ. ಆ ದೃಷ್ಟಿಯಲ್ಲಿ ಕಾರ್ಮಿಕವರ್ಗದ ಸಾಧಾರಣ 50 ವರ್ಷಗಳ ಪೂರ್ಣ ಇತಿಹಾಸವನ್ನು ಈ ಲೇಖನದಲ್ಲಿ ಬರೆಯುವ ಗೊಡವೆಗೆ ಹೋಗದೆ ಒಂದು ಘಟನೆಯನ್ನಷ್ಟೇ ಎತ್ತಿತೋರಿಸುವ ಪ್ರಯತ್ನ ಮಾಡುತ್ತೇನೆ.

ಬ್ರಿಟಿಷರ ಗುಲಾಮಗಿರಿಯ ನೀತಿಯಿಂದಾಗಿ ದೇಶ ಸಮನಾಗಿ ಬೆಳೆಯಲಿಲ್ಲ. ರಾಷ್ಟ್ರೀಯ ವಿಮೋಚನಾ ಹೋರಾಟ ಕೂಡ ಬೇರೆ ರೀತಿಯಲ್ಲಿ ರೂಪುಗೊಂಡಿತು. ಬಂಗಾಲ, ಮಹಾರಾಷ್ಟ್ರ, ಮದ್ರಾಸ್ ಮೊದಲಾದ ಪ್ರದೇಶಗಳು ಇತರ ಕ್ಷೇತ್ರಗಳಿಗಿಂತ ಮುಂದುವರಿದವು. ಅಲ್ಲಿ ಆರ್ಥಿಕ-ರಾಜಕೀಯ ಚಟುವಟಿಕೆಗಳು ಕೇಂದ್ರೀಕೃತವಾಗಿ, ದೇಶದ ಮೇಲೆ ಪರಿಣಾಮ ಬೀರಿದವು.

1905ರಲ್ಲಿ ಬಂಗಾಲ ವಿಭಾಗವಾದಾಗ ಜನರಲ್ಲಿ ಅಸಂತುಷ್ಟಿ ಬೆಳೆದು, ಚಳುವಳಿ ಹೊಸ ಸ್ಫೂರ್ತಿಗೊಂಡಿತು. ಆ ಸಮಯದಲ್ಲೇ ರಾಷ್ಟ್ರೀಯ ಕಾಂಗ್ರೆಸ್ಸಿನ ಮುಖಂಡತ್ವವು ದಾದಾಬಾಯಿ ಸರೋಜಿ, ಸುರೇಂದ್ರನಾಥ ಬ್ಯಾನರ್ಜಿಯಂತ ಸುಧಾರಣಾವಾದಿಗಳನ್ನು ಹಿಂದೆಸರಿಸಿ, ಬಾಲಗಂಗಾಧರ ತಿಲಕ, ಲಾಲಾಲಜಪತರಾಯರ್‌ಯಂಥ ತೀವ್ರವಾದಿಗಳ ಕೈಸೇರಿತು. ತಮ್ಮ ಆರ್ಥಿಕ ಹೋರಾಟ ಜೊತೆಯಲ್ಲೇ ರಾಜಕೀಯ ಹೋರಾಟದಲ್ಲೂ ದುಮುಕಲಿಕ್ಕೆ ಪ್ರೋತ್ಸಾಹ ನೀಡಿತು ಆಗಿನ ರಾಜಕೀಯ ಪರಿಸ್ಥಿತಿ. ಈ ಶತಮಾನದ ಪ್ರಾರಂಭದಿಂದ ಜಗತ್ತಿನ ಪ್ರಥಮ ಯುದ್ಧ ಪ್ರಾರಂಭವಾಗುವವರೆಗೆ ಆರ್ಥಿಕ ಹೋರಾಟಗಳನ್ನಷ್ಟೇ ಅಲ್ಲ, ಕ್ರಾಂತಿಕಾರಿ ರಾಜಕೀಯ ಹೋರಾಟಗಳನ್ನು ಕೂಡ ಮಾಡಿತೋರಿಸಲು ಬೇಕಾದ ಪರಿಸ್ಥಿತಿ ಉಂಟಾಗಿತ್ತು.

1905ರಲ್ಲಿ ಬಂಗಾಲ ವಿಭಜನೆಯಿಂದ ಪ್ರಾರಂಭವಾದ ಸ್ವದೇಶಿ ಚಳುವಳಿ ಬಂಗಾಳಕಷ್ಟೇ ಸೀಮಿತಗೊಳ್ಳದೆ ಇಡೀ ದೇಶವನ್ನೇ ಆವರಿಸಿತು. ಬಂಗಾಲದ ವಿಭಜನೆಗಷ್ಟೇ ಕೇಂದ್ರಿತವಾಗದೆ, ಬ್ರಿಟಿಷರ ಗುಲಾಮಗಿರಿಯ ವಿರುದ್ಧ ಜಾಗ್ರತ ಹೋರಾಟ ಹೂಡಲು ಬೇಕಾದಂಥ ತಿಳುವಳಿಕೆಯನ್ನು ಕಾರ್ಮಿಕವರ್ಗದಲ್ಲೂ ಸಾರ್ವಜನಿಕರಲ್ಲೂ ಉಂಟುಮಾಡಲು ಸಹಾಯಮಾಡಿತು. ಈ ಜನತಾ ಆಂದೋಲನಕ್ಕೆ ಕಾರ್ಮಿಕ ವರ್ಗವನ್ನು ಎಳೆಯುವ ಉದ್ದೇಶದಿಂದ ಬಂಗಾಲದ ರಾಷ್ಟ್ರೀಯವಾದಿಗಳು ಕಾರ್ಮಿಕರ ಆರ್ಥಿಕ–ಸಾಮಾಜಿಕ ಹೋರಾಟಗಳಿಗೆ ಪೂರ್ಣ ಬೆಂಬಲವಿತ್ತರು. ಇದರಿಂದಾಗಿ ಎರಡೂ ಚಳುವಳಿಗಳಿಗೆ ಹೊಸಚೈತನ್ಯ ಬಂದಂತಾಯಿತು.

ಈ ಕಾಲಘಟ್ಟದಲ್ಲಿ ನಡೆದ ಮುಷ್ಕರಗಳಲ್ಲಿ 1905 ಸೆಪ್ಟೆಂಬರ್ 27 ರಂದು ಕಲ್ಕತ್ತದಲ್ಲಿ ಪ್ರಾರಂಭವಾದ ಭಾರತ ಸರಕಾರದ ಛಾಪಖಾನೆಯ ಎರಡು ಸಾವಿರ ಕೆಲಸಗಾರರ ಮುಷ್ಕರ. ರವಿವಾರ ಮತ್ತು ಸರಕಾರಿ ರಜಾದಿವಸಗಳಿಗೆ, ಸಂಬಳಸಿಗಬೇಕು, ಅನ್ಯಾಯದಿಂದ ದಂಡಹೇರುವುದು ನಿಲ್ಲಬೇಕು ಜನರಖಾಯಂ ಸಂಬಳ ಹೆಚ್ಚಾಗಬೇಕು ಡಾಕ್ಟರರ ಸರ್ಟಿಫಿಕೇಟಿದ್ದರೆ ರಜಾ ಸಿಗಬೇಕು ಮುಂತಾದ ಬೇಡಿಕೆಗಳಿಗಾಗಿ ಹೋರಾಟ ನಡೆಯಿತು. ತಾತ್ಪೂರ್ತಿಕ ಒಪ್ಪಂದವಾದಕೂಡಲೇ ಕಾರ್ಮಿಕ ಮುಖಂಡರನ್ನು ನೌಕರಿಯಿಂದ ತೆಗೆದು ಹಾಕಿ ಬಂಧಿಸಲಾಯಿತು. ಮುಷ್ಕರ ಪುನಃ ಪ್ರಾರಂಭವಾಯಿತು. ಸ್ವದೇಶಿ ಚಳುವಳಿ ಮುಖಂಡರು ಕಾರ್ಮಿಕರನ್ನುದ್ದೇಶಿಸಿ ಭಾಷಣಮಾಡಿದರು. ಈ ಹೋರಾಟ ಪ್ರೆಸ್ ಕೆಲಸಗಾರರನ್ನೆಲ್ಲ ಒಂದುಮಾಡಿತು. ಬಂಗಾಲ ಪ್ರೆಸ್ ಕೆಲಸಗಾರರ ಯೂನಿಯನ್ ಸ್ಥಾಪನೆಯಾಯಿತು. ಕಾರ್ಮಿಕರು ಹೋರಾಟದಲ್ಲಿ ಗೆದ್ದರು.

ಇದು ಹಲವಾರು ಹೋರಾಟಗಳಿಗೆ ನಾಂದಿಯಾಯಿತು. ಹೌರಾದಲ್ಲಿಯ ಬರ್ನಗ್ ಕಂ., ಕಲ್ಕತ್ತ ಟ್ರಾಂವೇ ಕಂ., ಕಲ್ಕತ್ತಾ ಕಾರ್ಪೊರೇಶನ್ನಿನ ಕೆಲಸಗಾರರ ಮುಷ್ಕರ ನಡೆಯಿತು. ಈಸ್ಟ್ ಇಂಡಿಯಾ ರೈಲ್ವೆಯ ಗಾರ್ಡಜನರು ಸಂಪುಹೂಡಿದರು. 1906ರಲ್ಲಿ ಕಲ್ಕತ್ತದ ಹತ್ತಿರವಿರುವ ಬಜ್‌ಬಜ್‌ನಲ್ಲಿ ಕ್ಲೈವ ಜೂಟ ಮಿಲ್ಲಿನ ಒಂದುಸಾವಿರಕೆಲಸಗಾರರ ಹೋರಾಟ ಜೂಟ ಕೆಲಸಗಾರರ ಸಂಘಟನೆಗೆ ನಾಂದಿಯಾಯಿತು. ಆಂಗ್ಲ ಆಡಳಿತಗಾರರ ಅಮಾನವೀಯ ವರ್ತನೆ, ಕೆಲಸದ ಪದ್ಧತಿಯಲ್ಲಿ ಸುಧಾರಣೆಯ ಸಲುವಾಗಿ ಈ ಹೋರಾಟ ನಡೆಯಿತು.

“ನಮ್ಮ ದೇಶದಲ್ಲಿ ನೆಲೆಸಿರುವ ಯೂರೋಪಿನ ಬಂಡವಾಳಶಾಹಿ ವಿರುದ್ಧ ಎದ್ದಿರುವ ಚೈತನ್ಯವಿದೆಂದೂ, ಕೆಲಸಗಾರರ ಭೌತಿಕ ಪರಿಸ್ಥಿತಿಯನ್ನೂ ಹಾಗೂ ಅವರ ಶಾರೀರಕ, ನೈತಿಕ ಸುಧಾರಿಸಲು ಈ ಚೈತನ್ಯವನ್ನು ಉಪಯೋಗಿಸಬೇಕೆಂದೂ” ಕಾರ್ಮಿಕ ಮುಖಂಡರಲ್ಲೊಬ್ಬರಾದ ಎ. ಸಿ. ಬ್ಯಾನರ್ಜಿಯವರು ಕೆಲಸಗಾರರ ಸಭೆಯಲ್ಲಿ ಭಾಷಣದಲ್ಲಿ ಹೇಳಿದ್ದರು. ಬ್ರಿಟಿಷರ ಸುಲಿಗೆಯ ವಿಚಾರಹೀನ ಕೈಗೊಂಬೆಗಳಂತಿದ್ದವರನ್ನು, ನಮಗೂ ಮರ್ಯಾದೆ ಉಂಟು ಅದನ್ನು ಕಳೆದುಕೊಳ್ಳಬಾರದು ಮತ್ತು ಹಕ್ಕುಗಳನ್ನು ಒಗ್ಗಟ್ಟಾಗಿ ರಕ್ಷಿಸಿಕೊಳ್ಳಬಹುದು ಎಂಬ ತಿಳುವಳಿಕೆ ಭಾರತೀಯರಲ್ಲಿ ಉಂಟಾಗುತ್ತಿದೆಂಬ ಅಭಿಪ್ರಾಯವನ್ನು ಆಗಿನ ಪ್ರಮುಖ ಪುರೋಗಾಮಿ ರಾಷ್ಟ್ರೀಯ ವಾದಿಗಳಾದ ಬಿಪಿನ್ ಚಂದ್ರಪಾಲರು ವ್ಯಕ್ತ ಮಾಡಿದ್ದಾರೆ.

ಸಾಮ್ರಾಜ್ಯಶಾಹಿ ವಿರೋಧಿ ರಾಜಕೀಯ ಜಾಗೃತಿಯನ್ನುಂಟುಮಾಡಿದಂಥ ಅತಿ ಮಹತ್ವದ ಮುಷ್ಕರ ನಡೆದಿರುವುದು 1906 ಜುಲೈ-ಸೆಪ್ಟೆಂಬರ್ ತಿಂಗಳಲ್ಲಿ. ಈಸ್ಟ್ ಇಂಡಿಯಾ ರೈಲ್ವೆಯ ಕೆಲಸಗಾರರ ಹೋರಾಟ. ಸಂಬಳದಲ್ಲಿ ಹೆಚ್ಚಳ, ಕೆಲಸದ ಪದ್ಧತಿಯಲ್ಲಿ ಬದಲಾವಣೆ, ಜಾತಿ ಸಂಬಂಧವಾದ ವ್ಯತ್ಯಾಸಗಳ ವಿರುದ್ಧ ಈ ಹೋರಾಟ ನಡೆದಿತ್ತು. “ನೇಟಿವ್” (ಸ್ಥಾನಿಕ) ಎಂಬ ಶಬ್ದ ತೆಗೆದು ತಮ್ಮನ್ನು “ಭಾರತೀಯ”ನೆಂದು ಕರೆಯಬೇಕೆಂಬ ಬೇಡಿಕೆ ಮಹತ್ವದ್ದಾಗಿತ್ತು. ರೈಲ್ವೆ ಸ್ಟೇಶನ್‌ಗಳನ್ನು ಪೋಲೀಸರು ವಶಪಡಿಸಿಕೊಂಡಿದ್ದರೂ ಕೂಡ ಮುಷ್ಕರದಲ್ಲಿದ್ದ ಕಾರ್ಮಿಕರು ಅದಕ್ಕೆ ಹೆದರಲಿಲ್ಲ. ಮುಖಂಡರು ಪ್ರತಿಯೊಂದು ಸ್ಟೇಶನಿಗೆ ಹೋಗಿ ಭಾಷಣಮಾಡಿದರು. ಆದರೆ ಬ್ರಿಟಿಷ್ ಆಡಳಿತಗಾರರು ಈ ಹೋರಾಟವನ್ನು ಮುರಿದರು. 20-25 ವರ್ಷ ಸರ್ವಿಸಿನಲ್ಲಿದ್ದವರನ್ನೆಲ್ಲ ತೆಗೆದುಹಾಕಿದರು.

ಈ ಮುಷ್ಕರ ರಾಷ್ಟ್ರೀಯ ಚಳುವಳಿಗೆ ನೇರ ಸಂಬಂಧವಿದ್ದುದರಿಂದ ಅದು ನಿರುಪಯೋಗವಾಗಿ ಮುಕ್ತಾಯಗೊಳ್ಳಲಿಲ್ಲ. ಭಾರತ ದೇಶದಲ್ಲಿ ಮೊದಲನೇ ಸಂಘಟನೆ-ಈಸ್ಟ್ ಇಂಡಿಯನ್ ರೈಲ್ವೆ ಎಂಪ್ಲಾಯೀಸ್ ಯೂನಿಯನ್ನಿನ ಸ್ಥಾಪನೆ ಮಾಡುವುದಕ್ಕೆ ಸಹಾಯವಾಯಿತು. ಸಿ. ಆರ್. ದಾಸ್, ಬಿ.ಎನ್. ಚಂದ್ರಪಾಲ್, ಮೊದಲಾದ ರಾಷ್ಟ್ರೀಯ ಮುಖಂಡರು ಈ ಚಳುವಳಿ ಎಲ್ಲೆಡೆ ಹರಡುವಂತೆ ಮಾಡಿದರು. ಇದರ ಪ್ರತಿಫಲವಾಗಿ ಕಾರ್ಮಿಕರ ಹೋರಾಟ ಮದ್ರಾಸ್, ಅಹಮದಾಬಾದ್, ಮುಂಬಯಿಗಳನ್ನೂ ಆವರಿಸಿತು. ರಾಷ್ಟ್ರೀಯ ಹೋರಾಟಕ್ಕೆ ಹೊಸ ಕಳೆಯನ್ನು ತಂದುಕೊಟ್ಟಿತು.

ಮುಂಬಯಿಯಲ್ಲಿ ಕಾರ್ಮಿಕರ ಪ್ರಥಮ ರಾಜಕೀಯ ಹೋರಾಟ

1908ರಲ್ಲಿ ಮುಂಬಯಿಯ ಕಾರ್ಮಿಕ ವರ್ಗ ನೇರವಾದ ರಾಜಕೀಯ ಹೋರಾಟ ನಡೆಸಿತು. ಭಾರತ ಕಾರ್ಮಿಕರ ಈ ಪ್ರಥಮ ರಾಜಕೀಯ ಹೋರಾಟ ಅತಿ ಮಹತ್ವದ ಚಾರಿತ್ರಾರ್ಹ ಘಟನೆಯಾಗಿದೆ. ಯಾಕೆಂದರೆ ಈ ಹೊಸ ಸಾಮಾಜಿಕ ಶಕ್ತಿಯ ಕ್ರಾಂತಿಕಾರೀ ಬಲ ಎಷ್ಟು ಮಹತ್ವದ್ದಾಗಿದೆಂದು ಇದು ತೋರಿಸಿಕೊಟ್ಟಿತು. 1905 ರಿಂದ 1907ರವರೆಗೆ ದೇಶಾದ್ಯಂತ ನಡೆಯುತ್ತಾ ಬಂದ ಕಾರ್ಮಿಕ ಹಾಗೂ ಜನರ ಕ್ರಾಂತಿಕಾರಿ ಚಳುವಳಿ 1907ರಲ್ಲಿ ಸೂರತನಲ್ಲಿ ಸಮಾವೇಶಗೊಂಡ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಸಂಯಮ ವಾದಿಗಳು ತೀವ್ರವಾದಿಗಳೆಂಬ ಎರಡು ಗುಂಪುಗಳಾಗುವಂತೆ ಮಾಡಿತು. ಸಂಯಮವಾದಿಗಳು ಬ್ರಿಟಿಷರ ಜೊತೆಯಲ್ಲಿ ಸಹಕಾರದಿಂದಿರಬೇಕೆಂದೂ ಅಸಹಕಾರ ಚಳುವಳಿ ಮತ್ತು ಹಿಂಸಾತ್ಮಕ ಮಾರ್ಗ ಬಿಟ್ಟುಬಿಡಬೇಕೆಂದೂ ವಾದಿಸಿದರೆ, ತೀವ್ರವಾದಿಗಳ ಮುಖಂಡರಾದ ಬಾಲಗಂಗಾಧರ ತಿಲಕರ ಗುಂಪು ಬ್ರಿಟಿಷರ ವಿರುದ್ಧ ಸಾಮೂಹಿಕ ಹೋರಾಟ ಮಾಡಬೇಕೆಂದು ಪ್ರತಿಪಾದಿಸುತ್ತಿತ್ತು. ಸಾಮೂಹಿಕ ರಾಜಕೀಯ ಹೋರಾಟದಲ್ಲಿ ಸೇರುವಂತೆ ತಿಲಕರವರು ತಮ್ಮ ಬೆಂಬಲಿಗರೊಂದಿಗೆ ಕಾರ್ಮಿಕರನ್ನು ಒತ್ತಾಯ ಮಾಡಿದರು. ಕಾರ್ಮಿಕ ವರ್ಗದ ಕ್ರಾಂತಿಕಾರಿ ಶಕ್ತಿಯನ್ನು ಅರಿತು ಇವರು ಈ ರೀತಿ ಮಾಡಲಿಲ್ಲ. ಬದಲಾಗಿ ಅಸಂಘಟಿತ ಈ ಜನಸಮೂಹವನ್ನು ಬಂಡವಾಳಶಾಹಿಗಳ ಹಿಡಿತದಲ್ಲಿ, ಅವರ ಮುಖಂಡತ್ವದಲ್ಲಿ ನಡೆಸಲ್ಪಡುತ್ತಿರುವ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗೆ ಹೆಚ್ಚಿನ ಬಲಬರುವಂತೆ ಮಾಡಲು ಅದರಿಂದಾಗಿ ತಮ್ಮ ವರ್ಗಹಿತ ಸಾಧಿಸಿಕೊಳ್ಳಲು ಈ ಮಾರ್ಗ ಅನುಸರಿಸಿದರು.

ಕಾರ್ಮಿಕವರ್ಗ ಸ್ವತಂತ್ರ ರಾಜಕೀಯ ಶಕ್ತಿಯನ್ನಾಗಲಿ, ಜನತೆಯ ಸಂಘಟಿತ ಕ್ರಾಂತಿಕಾರಿ ಚಟುವಟಿಕೆಗಳ ಮಹತ್ವವನ್ನಾಗಲೀ ತಿಲಕರವರು ತಿಳಿದುಕೊಳ್ಳಲಿಲ್ಲ. ಆದರೆ ಮಹಾರಾಷ್ಟ್ರದಲ್ಲಿ ಜನತೆ ಹಾಗೂ ಕಾರ್ಮಿಕರ ಮೇಲೆ ತಿಲಕ ಅವರ ಪ್ರಭಾವ ಮಾತ್ರ ಆಳವಾಗಿ ಬೇರೂರಿತ್ತು.

ಬೆಳೆಯುತ್ತಿರುವ ಕ್ರಾಂತಿಕಾರಿ ಹೋರಾಟವನ್ನು ತಡೆಯುವ ದೃಷ್ಟಿಯಿಂದ, 1908, ಜೂನ್ 24ರಂದು ಬ್ರಿಟಿಷ್ ಸರಕಾರ ತಿಲಕರವರನ್ನು ಬಂಧಿಸಿ ರಾಜದ್ರೋಹದ ಖಟ್ಲೆ ನಡೆಸಿತು ಇದರ ವಿರುದ್ಧ ರಾಷ್ಟ್ರಾದ್ಯಂತ, ಮುಷ್ಕರ, ಹರತಾಳ, ಮತಪ್ರದರ್ಶನಗಳು ನಡೆದವು. ಆದರೆ 1908 ಜುಲೈ ತಿಂಗಳಲ್ಲಿ ಮುಂಬಯಿಯ ಕಾರ್ಮಿಕ ವರ್ಗದ ರಾಜಕೀಯ ಮುಷ್ಕರ-ಹರತಾಳ ಚರಿತ್ರಾರ್ಹವಾದದ್ದು.

ಕೋರ್ಟಿನ ಮುಂದೆ ನೆರೆದ ಸಾವಿರಾರು ಕಾರ್ಮಿಕರಿಗೂ ಸಶಸ್ತ್ರ ಪೋಲೀಸರಿಗೂ ಜೂನ್ 29ರಂದು ಘರ್ಷಣೆ ನಡೆಯಿತು. ಜುಲೈ 13ರಿಂದ ಈ ಘರ್ಷಣೆ ತೀವ್ರಗೊಂಡಿತು. ಮುಂಬಯಿಯ ಬೀದಿಗಳೆಲ್ಲ ಸಶಸ್ತ್ರ ಪೋಲೀಸರ ಮತ್ತು ಕಾರ್ಮಿಕರ ಘರ್ಷಣೆಯ ಕಣವಾಯಿತು. ಈ ಘಟನೆಯ ಕುರಿತು ಎ. ಐ. ಚಿಕರೋಪ ಅವರು ಹೀಗೆ ಬರೆಯುತ್ತಾರೆ. “ಕೋರ್ಟಿನಲ್ಲಿ ಚೌಕಾಶಿ ಪ್ರಾರಂಭವಾದ ದಿನದಿಂದಲೇ ತಿಲಕರ ರಕ್ಷಣೆಗಾಗಿ ಚಳುವಳಿ ಪ್ರಾರಂಭವಾಯಿತು. ಮುಂಬಯಿ ಗಿರಣಿ ಕೆಲಸಗಾರರ ಮುಷ್ಕರ ಹಾಗೂ ಮೆರವಣಿಗೆಯಲ್ಲಿ ಅವರ ಸಹಭಾಗಿತ್ವ ಅತಿ ಮಹತ್ವದ್ದು.” ಲೆನಿನ್ನರ ಶಬ್ದಗಳಲ್ಲಿ ಹೇಳುವುದಾದರೆ ತಮ್ಮ ಲೇಖಕರ ಮತ್ತು ರಾಜಕೀಯ ಮುಖಂಡರ ಸಲುವಾಗಿ ಜನತೆ ಎದ್ದು ನಿಲ್ಲಲು ಪ್ರಾರಂಭಿಸಿದೆ... ಮುಂಬಯಿ ಶ್ರಮಜೀವಿಗಳ ಈ ತರದ ಮತಪ್ರದರ್ಶನವು ಅವರಿಗೆ ರಾಜಕೀಯ ಶಿಕ್ಷಣ ಕೊಡಲು ಒಂದು ಒಳ್ಳೆ ಪಾಠಶಾಲೆಯಾಯಿತು. ಅಷ್ಟೇ ಅಲ್ಲದೆ, ಅದು ನಗರದ ಬಡವರನ್ನೂ, ಮಧ್ಯವರ್ಗದವರನ್ನೂ ಈ ರಾಜಕೀಯ ಹೋರಾಟಕ್ಕಿಳಿಯಲು ಅನುಕೂಲವಾಯಿತು.

ಜುಲೈ 17ರಿಂದ ಈ ಹೋರಾಟ ಹೊಸ ಕ್ಷೇತ್ರಗಳನ್ನಾವರಿಸಿತು. 20,000 ಕಾರ್ಮಿಕರು ಕೈಗಾರಿಕಾ ಕೇಂದ್ರಗಳಲ್ಲಿ ತಿರುಗಾಡಿ ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಟ್ಟರು. 6500 ಹೆಚ್ಚು ಕಾರ್ಮಿಕರು ರಸ್ತೆ ಮೇಲೆ ಬಂದಾಗ ಪೋಲೀಸರು ಗೋಲೀಬಾರು ಮಾಡಿದರು. ಇದರ ಪರಿಣಾಮವಾಗಿ ಹಡಗದ ಕಾರ್ಮಿಕರು, ವ್ಯಾಪಾರಸ್ಥರೂ ಈ ಹೋರಾಟದಲ್ಲಿ ಸೇರಿಕೊಳ್ಳುವಂತಾಯಿತು.

ಜುಲೈ 22ರಂದು ತಿಲಕ ಅವರಿಗೆ ಶಿಕ್ಷೆವಿಧಿಸಲಾಯಿತು. ಜುಲೈ 23

(25ನೇ ಪುಟ ನೋಡಿ)

ಸಮಾಜ ಬದಲಾವಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

ಪ್ರಪಂಚದ ಇತಿಹಾಸದಲ್ಲಿ ವಿದ್ಯಾರ್ಥಿ ಚಳುವಳಿಗಳು ಒಂದು ಪ್ರಮುಖ ಸ್ಥಾನ ಪಡೆದಿವೆ. ಆಧುನಿಕ ಜಗತ್ತಿನ ಸಾಮಾಜಿಕ ಪ್ರಗತಿಯಲ್ಲಿ ವಿಧ್ಯಾರ್ಥಿ ಸಮುದಾಯದ ಪಾತ್ರ ಮಹತ್ತರವಾಗಿದೆ. ರಾಷ್ಟ್ರೀಯ ವಿಮೋಚನಾ ಹೋರಾಟಗಳ ಮತ್ತು ಸಮಾಜವಾದಿ ಕ್ರಾಂತಿಗಳಲ್ಲಿ ವಿದ್ಯಾರ್ಥಿ ಸಮುದಾಯ ತನ್ನ ಅಪೂರ್ವ ಕೊಡುಗೆ ನೀಡಿದೆ. ಇತ್ತೀಚೆಗಷ್ಟೇ ಇರಾನ್ ಜನತೆಯು ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ನಡೆಸಿದ ಜಯಪ್ರದ ಹೋರಾಟದಲ್ಲಿ ಇರಾನಿನ ವಿದ್ಯಾರ್ಥಿಗಳು ಮುಂಚೂಣಿಯಲ್ಲಿದ್ದರು. ದ. ಆಫ್ರಿಕಾ, ಪ್ಯಾಲೆಸ್ತೈನ್ ಮುಂತಾದೆಡೆ ನಡೆಯುತ್ತಿರುವ ರಾಷ್ಟ್ರೀಯ ವಿಮೋಚನಾ ಹೋರಾಟಗಳಲ್ಲಿ ಎಲ್‌ಸಾಲ್ವಡಾರೋದಾ ಜನತಾ ಚಳುವಳಿಯಲ್ಲಿ ಮತ್ತು ಮಿಲಿಟರಿ ಸರ್ವಾಧಿಕಾರದ ವಿರುದ್ಧ ಪಾಕಿಸ್ಥಾನದ ಜನತೆಯು ನಡೆಸುತ್ತಿರುವ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಅಲ್ಲಿನ ವಿದ್ಯಾರ್ಥಿ ಸಮುದಾಯ ಪ್ರಶಂಸಾರ್ಹ ಪಾತ್ರ ವಹಿಸುತ್ತಿವೆ.

ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಭಾರತ ದೇಶದ ಜನತೆಯು ನಡೆಸಿದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ತೊರೆದು ಧುಮುಕಿದರು. ಕಾಂಗ್ರೆಸ್ ಸರ್ಕಾರವು ಅಧಿಕಾರದ ಗದ್ದುಗೆಯೇರಿದ ನಂತರ ವಿದ್ಯಾರ್ಥಿ ಚಳುವಳಿಯ ಕುರಿತು ತನ್ನ ಧೋರಣೆಯನ್ನು ಬದಲಾಯಿಸಿತು. ವಿದ್ಯಾರ್ಥಿ ಯುವಜನತೆಯ ಸಮಸ್ಯೆಗಳನ್ನೆಲ್ಲಾ ತಾನು ಬಗೆಹರಿಸುವುದಾಗಿ ಭರವಸೆ ನೀಡಿದ ಕಾಂಗ್ರೆಸ್ ಸರ್ಕಾರವು ವಿದ್ಯಾರ್ಥಿಗಳ ಚಳುವಳಿಯನ್ನು ನಿಷ್ಕ್ರಿಯಗೊಳಿಸಲು ಪ್ರಯತ್ನಿಸಿತು. ವಿದ್ಯಾರ್ಥಿಗಳು ಚಳುವಳಿಯ ಹಾದಿಯನ್ನು ಬಿಡಬೇಕೆಂದು ರಾಜಕೀಯದಿಂದ ದೂರವಿರಬೇಕೆಂದು ಕರೆ ನೀಡಿತು. ಕಾಂಗ್ರೆಸ್ ಸರ್ಕಾರವು ಸೃಷ್ಟಿಸಿದ ಭ್ರಮೆಯಿಂದಾಗಿ ವಿದ್ಯಾರ್ಥಿ ಚಳುವಳಿಯು ಸ್ವಲ್ಪ ಕಾಲ ನಿಷ್ಕ್ರಿಯವಾಯಿತು. ಆದರೆ ಕಾಂಗ್ರೆಸ್ ಸರ್ಕಾರದ ಘೋಷಣೆಗಳ ಪೊಳ್ಳುತನ ಬಯಲಾಗಲು ಕೆಲವೇ ವರ್ಷಗಳು ಸಾಕಾದವು. ಬಂಡವಾಳಶಾಹಿ ಆರ್ಥಿಕ ನೀತಿಯಿಂದಾಗಿ ದೇಶದಲ್ಲಿ ಬೆಲೆಏರಿಕೆ, ಹಣದುಬ್ಬರ, ಅನಕ್ಷರತೆ, ನಿರುದ್ಯೋಗ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಂಡವು. ಇದರಿಂದ ಬೇಸತ್ತ ಜನತೆಯ ಪ್ರತಿಭಟನೆ ತೀವ್ರವಾದಂತೆ ವಿದ್ಯಾರ್ಥಿ ಸಮುದಾಯವೂ ಪುನಃ ಹೋರಾಟದ ಹಾದಿಯನ್ನು ಹಿಡಿಯುವುದು ಅನಿವಾರ್ಯವಾಯಿತು. ಬೆಳೆದುಬರುತ್ತಿರುವ ವಿದ್ಯಾರ್ಥಿ ಚಳುವಳಿಯನ್ನು ಮುರಿಯಲು ಆಳುವ ವರ್ಗವು ಸಕಲ ಪ್ರಯತ್ನ ನಡೆಸುತ್ತಿದೆ. ತನ್ನ ಬಾಲಬಡುಕ ವಿದ್ಯಾರ್ಥಿ ಸಂಘಟನೆಗಳನ್ನು ಪ್ರಾರಂಭಿಸಿ ಸಂಕುಚಿತ ಭಾವನೆಗಳನ್ನು ಕೆರಳಿಸಿ ವಿದ್ಯಾರ್ಥಿ ಚಳುವಳಿಯನ್ನು ತಪ್ಪುದಾರಿಗೆಳೆಯಲು ಪ್ರಯತ್ನಮಾಡುತ್ತಿದೆ. ಈ ಕುತಂತ್ರದ ಬಗ್ಗೆ ಎಚ್ಚರಿಕೆ ವಹಿಸದಿದ್ದಲ್ಲಿ ವಿದಾರ್ಥಿ ಶಕ್ತಿ ಆಳುವವರ್ಗದ, ಪ್ರತಿಗಾಮಿ ಶಕ್ತಿಗಳ ಬಲಿಪಶುವಾಗುವುದರಲ್ಲಿ ಸಂದೇಹವಿಲ್ಲ. ಇತಿಹಾಸದಲ್ಲಿ ಇಂತಹ ಅನೇಕ ಉದಾಹರಣೆಗಳಿವೆ. ಅಸ್ಸಾಂ ವಿದ್ಯಾರ್ಥಿ ಚಳುವಳಿ ಮತ್ತು ಗುಜರಾತಿನ ಮೀಸಲಾತಿ ವಿರೋಧಿ ಚಳುವಳಿಗಳು ನಮ್ಮ ಕಣ್ಣ ಮುಂದಿನ ದುರಂತ ಸಾಕ್ಷಿಗಳಾಗಿ ನಿಂತಿವೆ.

ವಿದ್ಯಾರ್ಥಿಗಳು ಸ್ವಾಭಾವಿಕವಾಗಿ ತಮ್ಮ ತಕ್ಷಣದ ಸಮಸ್ಯೆಗಳಿಗಾಗಿ ಮೊದಲು ಸಂಘಟಿತರಾಗುತ್ತಾರೆ. ಮತ್ತು ತುರ್ತು ಬೇಡಿಕೆಗಳಿಗಾಗಿ ಹೋರಾಟಗಳನ್ನು ನಡೆಸುತ್ತಾರೆ. ಆದರೆ ವಿದ್ಯಾರ್ಥಿ ಸಮುದಾಯದ ಮೂಲಭೂತ ಸಮಸ್ಯೆಗಳಾದ 'ಶಿಕ್ಷಣ' ಮತ್ತು 'ಉದ್ಯೋಗ'ದ ಸಮಸ್ಯೆಗಳಿಗೆ ವಿದ್ಯಾರ್ಥಿಗಳೇ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ಬದಲಾಗಿ ಈ ಸಮಸ್ಯೆಗಳಿಗೆ ಸಮಾಜ ವ್ಯವಸ್ಥೆಯಲ್ಲಿ ಕಾರಣ ಕಂಡುಕೊಳ್ಳಬೇಕಾಗಿದೆ. ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವುದಾಗಿ ಕಾಂಗ್ರೆಸ್ ಸರ್ಕಾರವು ನೀಡಿದ ಘೋಷಣೆಯು 33 ವರ್ಷಗಳ ನಿರಂತರ ಅಧಿಕಾರದ ನಂತರವೂ ಘೋಷಣೆಯಾಗಿಯೇ ಉಳಿದಿದೆ. ಭಾರತ ಸರ್ಕಾರವು ತನ್ನ ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ಹತ್ತು ವರ್ಷಗಳೊಳಗೆ ದೇಶದಲ್ಲಿನ ಎಲ್ಲಾ ಮಕ್ಕಳಿಗೆ 14 ವರ್ಷ ವಯಸ್ಸಿನವರೆಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದಾಗಿ ಘೋಷಿಸಿತ್ತು. ಆದರೆ ಇದನ್ನು ಸಾಧಿಸಲು ಈ ಸರ್ಕಾರಕ್ಕೆ ಕನಿಷ್ಟ ಇನ್ನೂ 60 ವರ್ಷಗಳಾದರೂ ಬೇಕೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪ್ರಪಂಚದ ಒಟ್ಟು ಅನಕ್ಷರಸ್ಥರ ಸಂಖ್ಯೆಯಲ್ಲಿ ಅರ್ಧದಷ್ಟು ಮಂದಿ ಭಾರತದಲ್ಲಿಯೇ ಇದ್ದಾರೆ. ಭಾರತದ ಜನಸಂಖ್ಯೆಯಲ್ಲಿ ಶೇ. 70ಕ್ಕೂ ಮೀರಿ ಅನಕ್ಷರಸ್ಥರಿದ್ದಾರೆ. 5-14 ವರ್ಷಗಳ ವಯೋಮಿತಿಯ ಸುಮಾರು 4 ಕೋಟಿ 70 ಲಕ್ಷ ಮಕ್ಕಳು ಇಂದು ಶಿಕ್ಷಣದ ಅವಕಾಶದಿಂದ ವಂಚಿತರಾಗಿದ್ದಾರೆ. ಶಾಲೆಗೆ ಸೇರಿದ ಶೇ. 60ರಷ್ಟು ಮಕ್ಕಳು ಪ್ರಾಥಮಿಕ ಹಂತದಲ್ಲೇ ಶಿಕ್ಷಣವನ್ನು ತೊರೆಯುತ್ತಿದ್ದಾರೆ. ಜನಸಾಮಾನ್ಯರು ಅದರಲ್ಲಿಯೂ ಹಿಂದುಳಿದ ಜನಾಂಗ ಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿ ವಹಿಸದಿರುವುದೇ ಈ ಪರಿಸ್ಥಿಗೆ ಕಾರಣವೆಂದು ಸುಳ್ಳು ಪ್ರಚಾರ ಮಾಡಲಾಗುತ್ತಿದೆ. ಮೇಲು ನೋಟಕ್ಕೆ ಇದು ಕೆಲವರಿಗೆ ಸರಿಯೆಂದು ಕಾಣಬಹುದು. ಆದರೆ ಸಮಸ್ಯೆಯ ಆಳ ಹೊಕ್ಕು ಆಲೋಚಿಸಿದವರಿಗೆ ನಿಜಾಂಶ ತಿಳಿಯುತ್ತದೆ.

ಶಾಲೆಗೆ ಸೇರದಿರುವ ಮತ್ತು ಕೆಲವೇ ವರ್ಷಗಳಲ್ಲಿ ಶಾಲೆಯನ್ನು ತೊರೆಯುವ ಮಕ್ಕಳ ಹಿನ್ನಲೆಯನ್ನು ಗಮನಿಸಿ. ಅವರು ಬಡಕುಟುಂಬಗಳಿಂದ ಬಂದವರಾಗಿರುತ್ತಾರೆ. ಅದರಲ್ಲೂ ಹರಿಜನ-ಗಿರಿಜನ ಕುಟುಂಬಗಳವರೇ ಹೆಚ್ಚಿನವರು. ಭಾರತದಲ್ಲಿ ಬಡತನದ ರೇಖೆಗಿಂತ (ಹಳ್ಳಿಯಲ್ಲಿ ತಿಂಗಳಿಗೆ 20 ರೂ.ಗಳು ಮತ್ತು ಪೇಟೆಪಟ್ಟಣಗಳಲ್ಲಿ ತಿಂಗಳಿಗೆ 30 ರೂ.ಗಳಿಗಿಂತಲೂ ಕಡಿಮೆ ಆದಾಯವುಳ್ಳವರು) ಕೆಳಗಿರುವವರ ಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ. 50ಕ್ಕೂ ಮೀರಿದೆ. ಜೀವನ ನಿರ್ವಹಣೆಯೇ ದುಸ್ತರವಾಗಿರುವ ಈ ಕುಟುಂಬಗಳವರು ತಮ್ಮ ಮಕ್ಕಳನ್ನು ಹೇಗೆ ತಾನೆ ಶಾಲೆಗೆ ಕಳುಹಿಸಿಯಾರು? ಆ ಮಕ್ಕಳಿಗೆ ಅಗತ್ಯ ಸೌಕರ್ಯಗಳನ್ನು ಮತ್ತು ವಾತಾವರಣವನ್ನು ಹೇಗೆ ಒದಗಿಸಿಯಾರು? ಮಾತ್ರವಲ್ಲ, ಈ ಮಕ್ಕಳನ್ನು ತಮ್ಮ ತುತ್ತಿನ ಚೀಲ ತುಂಬುವ ಕೆಲಸದಲ್ಲಿ ತೊಡಗಿಸುವುದು ಅನಿವಾರ್ಯ. ಇದರಿಂದಾಗಿಯೇ ಅಲ್ಲವೇ ಶಾಲೆ, ಆಟದ ಮೈದಾನದಲ್ಲಿ ನಲಿಯಬೇಕಾದ ಸುಮಾರು 3 ಕೋಟಿ ಹಸುಳೆಗಳು ಬಾಲಕಾರ್ಮಿಕರಾಗಿ ದುಡಿಯುತ್ತಿರುವುದು, 14 ವರ್ಷ ವಯಸ್ಸಿನೊಳಗಿರುವ ಬಾಲಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಕಾಗದದ ಮೇಲಿನ ಕಾನೂನಿನ ಕಣ್ಣಿನಲ್ಲಿ ಅಪರಾಧ. ಪ್ರಪಂಚದಲ್ಲೇ ಬಾಲಕಾರ್ಮಿಕರ ಸಂಖ್ಯೆಯಲ್ಲಿ ಭಾರತಕ್ಕೆ ಅಗ್ರಸ್ಥಾನ. ಹೋಟೆಲ್, ಬೀಡಿ, ಬೆಂಕಿಪಟ್ಟಿಗೆ, ಪ್ಲಾಸ್ಟಿಕ್, ಬಿಸ್ಕತ್ತು, ಊದುಬತ್ತಿ ಮುಂತಾದ ಕೈಗಾರಿಕೆಗಳಲ್ಲಿ ಮತ್ತು ಹೊಲಗದ್ದೆಗಳಲ್ಲಿ ಅತಿ ಕಡಿಮೆ ಕೂಲಿಗಾಗಿ ದುಡಿಯುವ ನಿರ್ಭಾಗ್ಯ ಕಂದಮ್ಮಗಳನ್ನು ನಾವು ನೋಡಬಹುದು. ಹೆಣ್ಣು ಮಕ್ಕಳು ಬೇರೆಯವರ ಮನೆಕೆಲಸದ ಜೀತದಾಳುಗಳಾಗಿರುತ್ತಾರೆ. ಅತಿ ಕಡಿಮೆ ಖರ್ಚುಮಾಡಿ ಅತಿ ಹೆಚ್ಚು ಲಾಭಪಡೆಯಬಯಸುವ ಈ ಲಾಭಕೋರ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಕ್ಕಳನ್ನು ಮತ್ತು ಮಹಿಳೆಯರನ್ನು ಕಡಿಮೆ ಕೂಲಿಗಾಗಿ ದುಡಿಸಿಕೊಳ್ಳುವುದು ಸರ್ವೇಸಾಮಾನ್ಯ ಸಂಗತಿಯಾಗಿದೆ.

1949ರಲ್ಲಿ ತಾನೇ ಸ್ವಾತಂತ್ರ್ಯ ಗಳಿಸಿದ, ಭಾರತದ ಒಂದೂವರೆಪಟ್ಟು ಜನಸಂಖ್ಯೆಯುಳ್ಳ, ಶೇ. 10 ರಷ್ಟು ಅಕ್ಷರಸ್ತರನ್ನು ಮಾತ್ರ ಹೊಂದಿದ್ದ ಚೈನಾ ದೇಶವು ಇಂದು ಪ್ರತಿಯೊಬ್ಬ ಚೈನೀ ಪ್ರಜೆಗೂ ಶಿಕ್ಷಣ, ಅಕ್ಷರಾಭ್ಯಾಸ ನೀಡುವಲ್ಲಿ ಬಹುಪಾಲು ಯಶಸ್ವಿಯಾಗಿದೆ. ಸ್ವಾತಂತ್ರ್ಯಾನಂತರ ಚೈನಾ ದೇಶವು ಸಮಾಜವಾದಿ ಪಥದಲ್ಲಿಯೂ, ಭಾರತವು ಬಂಡವಾಳಶಾಹಿ ಪಥದಲ್ಲಿಯೂ ಸಾಗಿರುವುದೇ ಈ ವ್ಯತ್ಯಾಸಕ್ಕೆ ಕಾರಣವಾಗಿದೆ. ಆದ್ದರಿಂದ ಭಾರತದಲ್ಲಿನ ಶಿಕ್ಷಣ ಸಮಸ್ಯೆಯ ಮೂಲ ಮತ್ತು ಪರಿಹಾರ ಇಡೀ ಸಮಾಜ ವ್ಯವಸೆಯ ಬದಲಾವಣೆಯಲ್ಲಿದೆ ಎಂಬುದು ಇದರಿಂದ ಸ್ಪಷ್ಟ.

ಸದ್ಯದಲ್ಲಿ ಶಿಕ್ಷಣದಲ್ಲಿ ಪ್ರೋತ್ಸಾಹವೂ ಕಡಿಮೆಯಾಗುತ್ತಿದೆ. ಕೇಂದ್ರ ಸರ್ಕಾರವು ತನ್ನ ಯೋಜನೆಯಲ್ಲಿ ಶಿಕ್ಷಣಕ್ಕಾಗಿಮೀಸಲಿಡುವುದು ಅತ್ಯಲ್ಪ. ಪೋಲೀಸ್ ಮತ್ತು ರಕ್ಷಣಾ ಇಲಾಖೆಗಾಗಿ ವರ್ಷವೊಂದಕ್ಕೆ 3715 ಕೋಟಿ ರೂ.ಗಳಿಗಿಂತಲೂ ಹೆಚ್ಚು ಹಣವನ್ನು ವೆಚ್ಚಮಾಡುವ ಸರ್ಕಾರ ಶಿಕ್ಷಣಕ್ಕಾಗಿ ಯೋಜನೆಯಲ್ಲಿ ಕನಿಷ್ಟ ಶೇ. 10 ರಷ್ಟನ್ನಾದರೂ ಮೀಸಲಿಡಲು ನಿರಾಕರಿಸಿದೆ. ಹೀಗಾದರೆ ಶಿಕ್ಷಣದ ಅವಕಾಶಗಳನ್ನು ಹೆಚ್ಚಿಸುವುದು ಹೇಗೆ? ಭಾರತದ 2 ಲಕ್ಷ ಹಳ್ಳಿಗಳಲ್ಲಿ ಒಂದು ಶಾಲೆಯೂ ಇಲ್ಲ. ಕಡ್ಡಾಯ ಶಿಕ್ಷಣದ ಘೋಷಣೆಯು ಜಾರಿಯ ಕ್ರಮ ಹೀಗಿದೆ. ಈ ಸಂದರ್ಭದಲ್ಲಿ ಪ. ಬಂಗಾಳ ರಾಜ್ಯದ ಎಡರಂಗ ಸರ್ಕಾರದ ಕ್ರಮಗಳನ್ನು ಗಮನಿಸದಿರಲಾಗುವುದಿಲ್ಲ. ಪ. ಬಂಗಾಳ ಸರ್ಕಾರವು ತನ್ನ ವಾರ್ಷಿಕ ವೆಚ್ಚದಲ್ಲಿ ಶೇ. 34 ರಷ್ಟನ್ನು ಶಿಕ್ಷಣಕ್ಕಾಗಿ ಮೀಸಲಿಟ್ಟಿದೆ. ಹನ್ನೆರಡನೆಯ ತರಗತಿಯವರೆಗೂ ಉಚಿತ ಶಿಕ್ಷಣ ನೀಡುತ್ತಿದೆ. ವಿದ್ಯಾರ್ಥಿನಿಯರಿಗೆ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ 'ಹಾಜರಾತಿ ಸ್ಕಾಲರ್‌ಷಿಪ್' ನೀಡುತ್ತಿದೆ. ಪ್ರಾಥಮಿಕ ಹಂತದಲ್ಲಿ ಉಚಿತವಾಗಿ ಪುಸ್ತಕಗಳನ್ನು ಹಂಚುತ್ತಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರಿಗೆ ಮತ್ತು ಹರಿಜನ-ಗಿರಿಜನ ವಿದ್ಯಾರ್ಥಿಗಳಿಗೆ ಉಡುಪುಗಳನ್ನು ನೀಡುತ್ತಿದೆ. ತನ್ನ ಅಧಿಕಾರದ ಅವಧಿ ಮುಗಿಯುವುದರೊಳಗೆ ಅಂದರೆ ಇನ್ನೊಂದು ವರ್ಷದಲ್ಲಿ ಪ. ಬಂಗಾಳದ ಪ್ರತಿಯೊಂದು ಹಳ್ಳಿಯಲ್ಲೂ ಕನಿಷ್ಟ ಒಂದು ಶಾಲೆಯನ್ನಾದರೂ ತೆರೆಯುವುದಾಗಿ ಘೋಷಿಸಿದೆ. ಇದೇ ಸರ್ಕಾರ ಮುಂದುವರಿದಲ್ಲಿ 1984-85ರವೇಳೆಗೆ 6-11 ವರ್ಷ ವಯೋಮಿತಿಯಲ್ಲಿ ಬರುವ ನೂರಕ್ಕೆ ನೂರರಷ್ಟು ಮಕ್ಕಳನ್ನು ಶಾಲೆಗೆ ಸೇರಿಸುವ ಏರ್ಪಾಡು ಮಾಡುವುದಾಗಿ ಸಹ ಘೋಷಿಸಿದೆ. ಈ ಸಾಧನೆಗಳನ್ನು ಎಡರಂಗ ಸರ್ಕಾರದ ಕಡು ವಿರೋಧಿಯಾದರೂ ಖಂಡಿತ ಪ್ರಶಂಸಿಸಲೇಬೇಕು.

ಇನ್ನು ಶಿಕ್ಷಣದ ಗುಣಮಟ್ಟವನ್ನು ಪ್ರಶ್ನಿಸುವಂತೆಯೇ ಇಲ್ಲ. ಪದವೀಧರ ಗುಮಾಸ್ತರನ್ನು ತಯಾರು ಮಾಡುವುದಿರಲಿ, ರುಜು ಮಾಡಬಲ್ಲ ಅಕ್ಷರಸ್ಥರನ್ನು ತಯಾರು ಮಾಡಲು ಭಾರತ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ವೈಜ್ಞಾನಿಕವಾದ, ಪ್ರಾಯೋಗಿಕವಾದ ಶಿಕ್ಷಣದ ಸುದ್ದಿಯೇಕೆ? ಈ ಲಾಭಕೋರ ವ್ಯವಸ್ಥೆಯಲ್ಲಿ ಇದನ್ನು ಅಪೇಕ್ಷಿಸುವುದೇ ಕೇವಲ ಭ್ರಮೆ. ಸಮಾಜದ ಸರ್ವತೋಮುಖ ಬೆಳವಣಿಗೆಯನ್ನೇ ಗುರಿಯನ್ನಾಗಿ ಉಳ್ಳ ಸಮಾಜವಾದಿ ಸರ್ಕಾರ ಮಾತ್ರ ಈ ಜವಾಬ್ದಾರಿಯನ್ನು ನಿರ್ವಹಿಸಬಲ್ಲದೆಂಬುದನ್ನು ಇಂದಿನ ಸಮಾಜವಾದಿ ಜಗತ್ತಿನ ಕಡೆ ದೃಷ್ಟಿ ಹರಿಸಿದರೆ ತಿಳಿಯಬಹುದು.

ವಿದ್ಯಾರ್ಥಿ-ಯುವಜನರ ಇನ್ನೊಂದು ಮುಖ್ಯ ಸಮಸ್ಯೆಯೆಂದರೆ ಉದ್ಯೋಗದ ಸಮಸ್ಯೆ. ಇದು ಬದುಕಿನ ಪ್ರಶ್ನೆ. ವಿದ್ಯಾಭ್ಯಾಸದ ಉದ್ದೇಶವೂ ಇಂದು ಕೇವಲ ಉದ್ಯೋಗದ ಅವಕಾಶಕ್ಕಾಗಿ ಸೀಮಿತವಾಗಿದೆ. ಆದರೆ ಇಂದಿನ ವಿದ್ಯಾಭ್ಯಾಸವು ಗುಮಾಸ್ತರನ್ನು ತಯಾರು ಮಾಡುವಲ್ಲಿ ಮಾತ್ರ ಯಶಸ್ವಿಯಾಗಿದೆ. ಕಂಪ್ಯೂಟರ್ ಯುಗದಲ್ಲಿ ಗುಮಾಸ್ತರ ಬೇಡಿಕೆಯೂ ಕುಸಿಯುತ್ತಿದೆ. ಇದಕ್ಕಾಗಿಯೇ ಪ್ರಾಥಮಿಕ ಹಂತದಿಂದಲೇ ವೃತ್ತಿಪರ-ತಾಂತ್ರಿಕ ಶಿಕ್ಷಣ ನೀಡುವುದು ಅತ್ಯಗತ್ಯ. ವೃತ್ತಿಪರ ಶಿಕ್ಷಣ ನೀಡಿದರೆ ಸಾಲದು. ಉದ್ಯೋಗದ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಇಲ್ಲವಾದರೆ ತಾಂತ್ರಿಕ ಶಿಕ್ಷಣ ಪಡೆದವರೂ ಅನ್ಯಮಾರ್ಗವಿಲ್ಲದೆ ನಿರುದ್ಯೋಗಿ ಸೈನ್ಯಕ್ಕೆ ಸೇರಬೇಕಾಗುತ್ತದೆ. ಭಾರತದಲ್ಲಿ ಇಂದು ಸಾವಿರಾರು ವೈದ್ಯಕೀಯ ಮತ್ತು ಇಂಜನೀಯರಿಂಗ್ ಪದವೀಧರರು ನಿರುದ್ಯೋಗಿಗಳಾಗಿದ್ದಾರೆಂಬುದನ್ನು ಇಲ್ಲಿ ಗಮನಿಸಬಹುದು.

'ಶಿಕ್ಷಣ'ವು ಒಂದು ಮಾರಾಟದ ಸರಕಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಹೊಟ್ಟೆ-ಬಟ್ಟೆ ಕಟ್ಟಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಭವಿಷ್ಯದ ಭರವಸೆಯೇ ಇಲ್ಲವಾಗಿದೆ. ನಿರುದ್ಯೋಗ ಸಮಸ್ಯೆ ನಮ್ಮ ದೇಶದ ಯುವಜನಾಂಗವನ್ನು ನಿರಾಶೆಯ ಕೂಪಕ್ಕೆ ತಳ್ಳಿದೆ. ಈ ಸಮಸ್ಯೆಯು ಭ್ರಷ್ಟಾಚಾರ, ನೈತಿಕ ಅಧಃಪತನ ಮತ್ತು ಪ್ರತಿಗಾಮಿ ಚಟುವಟಿಕೆಗಳಿಗೂ ಪ್ರೋತ್ಸಾಹ ನೀಡಬಹುದಾಗಿದೆ. ಜೀವನದಲ್ಲಿಯೇ ಜಿಗುಪ್ಸೆ ಹೊಂದಿದ ನಿರುದ್ಯೋಗಿ ಯುವಜನರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳೂ ಇತ್ತೀಚೆಗೆ ಬೆಳಕಿಗೆ ಬರುತ್ತಿದೆ. ಜೀವ ಉಳಿಸಿಕೊಳ್ಳಲಾದರೂ 'ನಿರುದ್ಯೋಗ ಪರಿಹಾರ' ನೀಡಬೇಕೆಂಬ ಬೇಡಿಕೆಯನ್ನು ಭಾರತ ಸರ್ಕಾರ ತಿರಸ್ಕರಿಸಿದೆ. ವಿದ್ಯಾವಂತ ನಿರುದ್ಯೋಗಿಗಳ ಬವಣೆಯೇ ಹೀಗಾದರೆ ಇನ್ನು ಅವಿದ್ಯಾವಂತರಾಗಿದ್ದು

(24ನೇ ಪುಟ ನೋಡಿ)

ಕೊಡಗಿನ ಕಾಫಿ ತೋಟದ ಕೂಲಿಗಾರರ ಸ್ಥಿತಿ

ಕೊಡಗಿನಲ್ಲಿ ಕಾಫಿಯನ್ನು ಬೆಳೆಯಲು ಪ್ರಾರಂಭಿಸಿದ್ದು 1834ರ ಮೇಲೆ. ರಾಜರುಗಳು ಆಳುತ್ತಿದ್ದ ಕೊಡಗು 1834ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಗೆ ಬಂತು. 1854ರಲ್ಲಿ ಮಡಕೇರಿಯಲ್ಲಿ ಮೊದಲಿಗೆ ಯುರೋಪಿಯನ್ ಕಾಫಿ ತೋಟವನ್ನು ಮಾಡಲಾಯಿತು. 1870ರ ಸಮಯದಲ್ಲಿ ಕೊಡಗಿನ ವಿವಿಧ ಭಾಗಗಳಲ್ಲಿ ಬ್ರಿಟೀಷರು ಕಾಡುಗಳನ್ನು ಕಡಿದು ಕಾಫಿ ತೋಟಗಳನ್ನು ಮಾಡಿದರು.

ಬ್ರಿಟೀಷರು ಬರುವ ಮೊದಲು ಕೊಡಗಿನ ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆ ಪಾಳೆಯಗಾರಿ ಭೂಮಿ ಒಡೆತನದ ವ್ಯವಸ್ಥೆಯಾಗಿತ್ತು. ಭೂಮಿಯ ಒಡೆತನ ಹೊಂದಿರುವ ನಾಡುಗಳ ಪಕ್ಕರು ಮತ್ತು ಈ ನಾಡುಗಳನ್ನೆಲ್ಲ ಅಧೀನದಲ್ಲಿಟ್ಟುಕೊಂಡ ಪಾಳೆಯಗಾರಿ ರಾಜರುಗಳು ಆಳುವ ವರ್ಗವಾಗಿದ್ದರೆ ಭೂರಹಿತ ಅಲ್ಪಸ್ವಲ್ಪ ಭೂಮಿ ಹೊಂದಿದ ದೈಹಿಕ ದುಡಿಮೆಯಿಂದ ಬದುಕುವ ಜಾತಿಗಳು ಶೋಷಿತ ದುಡಿಮೆಗಾರ ವರ್ಗಗಳಾಗಿದ್ದವು. ಪಾಳೆಯಗಾರಿ ಭೂ ಒಡೆತನದ ಕೊಡಗಿನಲ್ಲಿ ಗುಲಾಮ ದುಡಿತ ಸಾಕಷ್ಟು ವ್ಯಾಪಕವಾಗಿತ್ತು.

ಬ್ರಿಟಿಷರು ಕೈಗೊಂಡ ಮೊದಲಿನ ಆಡಳಿತ ಕ್ರಮಗಳಲ್ಲಿ ಗುಲಾಮಗಿರಿಯನ್ನು ನಿಷೇಧಿಸಿದ್ದು ಪ್ರಮುಖ ಕ್ರಮ. ಸ್ವತಃ ಭೂ ಮಾಲಕರಾದ ಗುಲಾಮರ ಒಡೆಯರಾದ ಕೊಡಗಿನ ದಿವಾನರ ಸರ್ಕಾರಿ ಅಧಿಕಾರಿಗಳ ಪ್ರಬಲ ವಿರೋಧವಿದ್ದಾಗ ಕೂಡ ಬ್ರಿಟೀಷರು ಕಡ್ಡಾಯವಾಗಿ ಗುಲಾಮಗಿರಿಯನ್ನು ನಿಷೇಧಿಸಿದ ಕ್ರಮದ ಹಿಂದೆ ಆರ್ಥಿಕ ಒತ್ತಾಸೆಗಳಿವೆ ಎನ್ನುವುದನ್ನು ಗಮನಿಸಬೇಕು.

ಕೊಡಗಿನ ಭಾರೀ ಕಾಡುಗಳನ್ನು ಕಡಿದು ತೋಟಗಳನ್ನು ಮಾಡಲು ಅಪಾರ ಸಂಖ್ಯೆಯಲ್ಲಿ ಕೂಲಿಕಾರರು ಬೇಕಾಗಿತ್ತು. ಕಾಫಿ ತೋಟಗಳನ್ನು ವಿಸ್ತರಿಸುವ ಬ್ರಿಟಿಷರ ಆರ್ಥಿಕ ಚಟುವಟಿಕೆಗೆ ಇಲ್ಲಿನ ಗುಲಾಮಗಿರಿ ವ್ಯವಸ್ಥೆ ದೊಡ್ಡ ತಡೆಯಾಗಿತ್ತು. ಭೂ ಒಡೆಯನಿಗೆ ಸೇರಿಕೊಂಡಿರುವ ಗುಲಾಮ ಕೂಲಿಕಾರರ ಶ್ರಮಶಕ್ತಿಯನ್ನು ಕೊಂಡುಕೊಳ್ಳುವುದು ಕಾಫಿ ತೋಟಗಳ ವಿಸ್ತರಣೆಗೆ ಅಗತ್ಯವಾಗಿತ್ತು. ಭೂ ಒಡೆಯರಿಂದ ಗುಲಾಮನ "ಬಿಡುಗಡೆಯು" ಬ್ರಿಟೀಷರ ಈ ಕ್ರಮಕ್ಕೆ ಆರ್ಥಿಕ ಉದ್ದೇಶವೂ ಒಂದು ಮುಖ್ಯ ಕಾರಣ.

ಬ್ರಿಟಿಷರು ಕಾಯಿದೆಯನ್ವಯ ಗುಲಾಮಗಿರಿಯನ್ನು ರದ್ದುಪಡಿಸಿದರೂ ಕೂಡ ಕೂಲಿಕಾರರ ದುಡಿತ ಮತ್ತು ಬದುಕಿನ ಮಟ್ಟದಲ್ಲಿ ಹೆಚ್ಚಿನ ಬದಲಾವಣೆ ಆಗಲಿಲ್ಲ ಇವತ್ತು ನೂರಾರು ಮೈಲಿಗಳಷ್ಟು ಹರಡಿ ಕಂಗೊಳಿಸುತ್ತಿರುವ ಕಾಫಿ ತೋಟಗಳ ಹಿಂದೆ ಸಾವಿರಾರು ಕೂಲಿಕಾರರ ಬೆವರು ರಕ್ತ ತೊಯ್ದ ದುಡಿಮೆಯ ಕತೆ ಇದೆ. "ಆದರೆ ತೋಟಗಾರಿಕೆಯ ಪೂರ್ವ ಇತಿಹಾಸವನ್ನು ನೋಡಿದರೆ ಕೈಕೆಸರು ಅಷ್ಟೇ ಅಲ್ಲ ರಕ್ತವೂ ಆಯಿತು. ಶತಮಾನಗಳ ಹಿಂದೆ ಆಳುಗಳ ರಕ್ತವನ್ನೇ ಹೀರಿ ತೋಟಗಳನ್ನು ಮಾಡಿದುದು ನಂಬಲಾರದ ಕಥೆ; ಆದರೆ ಸತ್ಯವಾದ ಸಂಗತಿ".

(ಎಚ್. ಎಲ್. ನಾಗೇಗೌಡ. ಬೆಟ್ಟದಿಂದ ಬಟ್ಟಲಿಗೆ ಪುಟ 165)

ಕಾಫಿ ತೋಟಗಳನ್ನು ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಕಾರರನ್ನು ಹತ್ತಿರದ ಜಿಲ್ಲೆಗಳಿಂದ ತರಲಾಯಿತು. ನೆರೆಯ ಜಿಲ್ಲೆಗಳ ಕೆಳ ಜಾತಿಯ ಬಡವರು ಸಣ್ಣ ರೈತರು ಮತ್ತು ಮತ್ತು ಭೂ ರಹಿತರು ಬಂದು ಕೊಡಗಿನ ಕಾಫಿತೋಟಗಳಲ್ಲಿ ದುಡಿಯಲಾರಂಭಿಸಿದರು. ಇದು ಕೂಡ ಮನುಷ್ಯ ಶೋಷಣೆಯ ಕ್ರೂರ ಕಥೆ.

ನಮ್ಮ ದೇಶದ ಹಳ್ಳಿಗಳಿಂದ ಭೂ ರಹಿತರು ಸಣ್ಣ ರೈತರು ದರಿದ್ರರಾಗಿ ನಗರ ಸೇರುವಂತೆ ಹತ್ತಿರದ ಜಿಲ್ಲೆಗಳಿಂದ ದೊಡ್ಡ ಸಂಖ್ಯೆಯಲ್ಲಿ ಕೆಳ ಜಾತಿಯ ಕೃಷಿಕೂಲಿಕಾರರ ಸಣ್ಣ ರೈತರ ಕುಟುಂಬಗಳು ಕೊಡಗಿನ ಕಾಫಿತೋಟಗಳಿಗೆ ವಲಸೆ ಬಂದಿವೆ.

ಹೀಗೆ ಬೇರೆ ಜಿಲ್ಲೆಗಳಿಂದ ಬಂದ ಕೆಳಜಾತಿಯ ಕಾಫಿತೋಟದ ಕೂಲಿಕಾರರಂತೆಯೇ ಕೊಡಗಿನ ಎರವ, ಕುರುಬ, ಮಲೆ ಕುಡಿಯ, ಕುಂಬಟ್ಟಿ ಮತ್ತು ಇನ್ನಿತರ ಕೆಳಜಾತಿಗಳಿಗೆ ಸೇರಿದ ಸಹಸ್ರಾರು ಕುಟುಂಬಗಳು ಇಲ್ಲಿ ತಲೆಮಾರುಗಳಿಂದ ಕಾಯಿಂದೆಯ ಲೆಕ್ಕಕ್ಕೆ ತಾತ್ಕಾಲಿಕ ಕೂಲಿಗಳೆಂದು ಪರಿಗಣಿಸಲ್ಪಟ್ಟು, ಸ್ವಂತದ್ದು ಎನ್ನಲು ಒಂದಿಂಚು ನೆಲವಿಲ್ಲದೆ ಭೂರಹಿತರಾಗಿ ಬದುಕುತ್ತಿವೆ. ಭೂರಹಿತರಾದ ಕಾರಣ ಶಾಶ್ವತ ಕೂಲಿಕಾರರಾದ ಈ ಕೆಳ ಜಾತಿಗಳು ನಾಗರಿಕ ಬದುಕಿನ ಎಲ್ಲ ಸೌಲಭ್ಯಗಳಿಂದ ವಂಚಿತವಾಗಿವೆ. ಈ ಕೆಳಜಾತಿಗಳ ದಾರಿದ್ರ್ಯ, ನಿರಕ್ಷರತೆ ಮತ್ತು ಸಾಮಾಜಿಕ ಹಿಂದುಳಿಯುವಿಕೆಯ ಪ್ರಶ್ನೆ ಈ ಜಿಲ್ಲೆಯ ಭೂಮಿ ಒಡೆತನದ ಪ್ರಶ್ನೆಯೊಂದಿಗೆ ಗಾಢವಾಗಿ ಬೆಸೆದುಕೊಂಡಿದೆ.

ಕೊಡಗಿನ ಕಾಫಿ ತೋಟಗಳಲ್ಲಿ ದುಡಿಯಲು ನೆರೆಯ ಜಿಲ್ಲೆಗಳಿಂದ ಮಾತ್ರವಲ್ಲ ನೆರೆಯ ರಾಜ್ಯಗಳಿಂದಲೂ ದುಡಿಯಲು ಬಂದರು. ಹೀಗೆ ಕ್ರಮೇಣ ಕಾಫಿತೋಟಗಳ ವಿಸ್ತಾರ ಮತ್ತು ಕಾರ್ಮಿಕರ ಸಂಖ್ಯೆ ಹೆಚ್ಚಾಯಿತು.

ಕಂಗಾಣಿ ಪದ್ಧತಿ

ಕೊಡಗಿನ ಕಾಫಿ ತೋಟಗಳಲ್ಲಿ ಕೂಲಿಗಳನ್ನು ದುಡಿಸಿಕೊಳ್ಳುವ ಕಂಗಾಣಿ ಪದ್ಧತಿ ಅಥವಾ ಮೇಸ್ತ್ರಿ ಪದ್ಧತಿ ಎನ್ನುವ ವ್ಯವಸ್ಥೆಯಿದ್ದಿತು. ಕಂಗಾಣಿ

ಕೊಡಗಿನಲ್ಲಿ ಕಾಫಿತೋಟಗಳ ವಿಸ್ತಾರ

ವರ್ಷ	ಕಾಫಿತೋಟಗಳ ವಿಸ್ತಾರ (ಎಕರೆಗಳಲ್ಲಿ)
1873	76,479
1878	83,048
1883	77,176
1898	78,169
1903	69,530
1911	43,313
1921	40,909
1932	40,345
1954	51,521
1960–61	74,882
1961–62	74,880
1962–63	86,775

(ಆಧಾರ: ಕೊಡಗು ಗೆಜೆಟಿಯರ್)

ಗಳು ಅಥವಾ ಮೇಸ್ತ್ರಿಗಳು ಕಾಫಿ ತೋಟಗಳ ಒಡೆಯರುಗಳಿಗೆ ಕೂಲಿಯಾಳುಗಳನ್ನು ಒದಗಿಸುತ್ತಿದ್ದ ದಲ್ಲಾಳಿಗಳು ಸ್ವತಃ ತೋಟಗಳಲ್ಲಿ ದುಡಿಯುವ ಕಂಗಾಣಿಗಳು ಕಾಫಿತೋಟಗಳಿಗೆ ಕೂಲಿಗಳನ್ನು ಪೂರೈಸುತ್ತಿ

ಪ್ರಮೋದ್

ದ್ದರು. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಯಲುಸೀಮೆಯ ಜಿಲ್ಲೆಗಳಿಂದ ಆಶೆ ಆಮಿಷಗಳನ್ನು ತೋರಿಸಿ ಕೂಲಿಗಳನ್ನು ಕುಟುಂಬ ಸಮೇತ ತರಲಾಗುತ್ತಿತ್ತು. ಕೂಲಿಗಳನ್ನು ಸರಬರಾಜು ಮಾಡುವ ಮೇಸ್ತ್ರಿಗೆ ಕಮಿಷನ್, ತೋಟದ ಯಜಮಾನನಿಗೆ ಅಗ್ಗದ ಕೂಲಿ ಸಿಗುತಿತ್ತು.

"ಇಡೀ ಸಂಸಾರದವರೆಲ್ಲ ಕೂಲಿ ಮಾಡಿದರೆ ಸಾಮಾನ್ಯವಾಗಿ ಆಳಿನ ಕೈಯಲ್ಲಿ ಒಂದಿಷ್ಟು ಹಣ ಉಳಿಯುತ್ತಿತ್ತು. ಹಾಗಿಲ್ಲದೆ ಒಂದು ಸಂಸಾರದಲ್ಲಿ ಒಬ್ಬಿಬ್ಬರು ಮಾತ್ರ ಕೆಲಸಮಾಡಿ ಕೆಲಸಮಾಡದ ಮಕ್ಕಳುಮರಿಗಳನ್ನು ಸಾಕಬೇಕಾಗಿ ಬಂದಾಗ ಆಳು ಸಂಪಾದಿಸಿದ್ದು ಸಾಲದೆ ಮುಂಗಡವಾಗಿ ಪಡೆದ ಹಣ ಇನ್ನೂ ಬಾಕಿಯಾಗಿಯೇ ಉಳಿಯುತ್ತಿತ್ತು. ಆಗ ಮೇಸ್ತ್ರಿ ಆ ಬಾಕಿಯನ್ನು ಮತ್ತೊಮ್ಮೆ ಮುಂಗಡ ಹಣಕೊಟ್ಟು ಮುಂದಿನ ವರ್ಷಕ್ಕೂ ಆಳು ತೋಟದಲ್ಲಿ ದುಡಿಯುವಂತೆ ಮಾಡುತ್ತಿದ್ದ. ಒಟ್ಟಿನಲ್ಲಿ ಸಂಪಾದಿಸಿದ್ದು ಸಾಲದೆ ವರ್ಷೇ ವರ್ಷೇ ಸಾಲ ಮಾಡಿಕೊಂಡು ಜೀವನದುದ್ದಕ್ಕೂ ಸಾಲದಲ್ಲಿ ಮುಳುಗಿ ತೇಲುತ್ತಾ ಸತ್ತ ನಂತರವೂ ಮಕ್ಕಳ ಮೇಲೆ ಅಷ್ಟು ಇಷ್ಟು ಸಾಲದ ಹೊರೆ ಹೇರಲಾಗುತ್ತಿತ್ತು. ಇದೂ ಒಂದು ರೀತಿಯ ಗುಲಾಮಗಿರಿಯೇ ಇದರಲ್ಲಿ ಬುದ್ಧಿವಂತಿಕೆಯ ಕೈವಾಡವೂ ಇರುವುದನ್ನು ನೋಡಬಹುದು. ಮೇಲೆ ನೋಡುವುದಕ್ಕೆ ಆಳಿನ ಉದ್ಧಾರ ಮತ್ತು ಅವನನ್ನು ಸಾಲದಿಂದ ಬಿಡುಗಡೆ ಮಾಡುತ್ತೇನೆಂಬ ಮಾತು. ಆದರೆ ಅವನ ಕುತ್ತಿಗೆಗೆ ಸಾಲದ ಕುಣಿಕೆ".

(ಎಚ್. ಎಲ್. ನಾಗೇಗೌಡ, ಬೆಟ್ಟದಿಂದ ಬಟ್ಟಲಿಗೆ ಪು 176)

ಮಲೇರಿಯ, ಕಡುಬಡತನ, ಸಾಲ ಇವುಗಳ ವಿಷಚಕ್ರದಿಂದ ತಪ್ಪಿಸಿಕೊಳ್ಳಲು ಕೂಲಿಕಾರರು ರಾತ್ರೋರಾತ್ರಿ ಕಾಫಿತೋಟಗಳಿಂದ ಓಡಿಹೋಗುವುದು ತೋಟದ ಒಡೆಯರು ಅವರನ್ನು ಭೇಟಿಯಾಡಿ ಮತ್ತೆ ತರುವುದು ಆಗ ಸಾಮಾನ್ಯವಾಗಿತ್ತು.

ಇನ್ನು ಕಾಫಿತೋಟಗಳಲ್ಲಿ ದುಡಿಯುತ್ತಿದ್ದ ಕೂಲಿಯಾಳಿಗೆ ಸಿಗುತ್ತಿದ್ದ ಕೂಲಿಕೂಡ ಬಹಳ ಕಡಿಮೆಯಾಗಿತ್ತು. ಜೀತದಾಳಿನಂತೆ ದುಡಿಯುತ್ತಿದ ಕೂಲಿಯಾಳಿಗೆ ತನ್ನ ಕೂಲಿಯ ಬಗ್ಗೆ ಚೌಕಾಶಿ ಮಾಡುವುದಿರಲಿ ಯೋಚಿಸುವುದು ಕೂಡ ಸಾಧ್ಯವಾಗದ ಪರಿಸ್ಥಿತಿ ಇತ್ತು.

1928ರಲ್ಲಿ ಗಂಡಸರಿಗೆ ಆರುಆಣೆ ಹೆಂಗಸರಿಗೆ ನಾಲ್ಕು ಆಣೆ ಕೂಲಿ ನಿಗದಿ ಮಾಡಲಾಯಿತು. ಇದರಿಂದಾಗಿ ನಮ್ಮ ಉತ್ತಮ ಕೂಲಿಕಾರರಾದ ಮೈಸೂರು ಗೌಡರನ್ನು ನಾವು ಕಳೆದುಕೊಂಡೆವು ಮತ್ತು ಮಹಾಯುದ್ಧದ ಬಳಿಕವೇ ಕೂಲಿಕಾರರ ಸಂಖ್ಯೆ ಜಾಸ್ತಿಯಾದದ್ದು ಎನ್ನುತ್ತಾರೆ ಆ ಕಾಲದ ಪ್ಲಾಂಟರರಾದ ಸಿ. ಜಿ. ಎಲ್ ಹಂಪ್ರೀಸ್.

ಕೈಗೊಳ್ಳಲು ಆರಂಭಿಸಿತು. ಕೂಲಿಕಾರರ ವಲಸೆಯನ್ನು ತಪ್ಪಿಸಲು ಕೊಡಗು ಪ್ಲಾಂಟರುಗಳ ಸಂಘದ ನಿರ್ದೇಶನದಲ್ಲಿ ಕೂಲಿಯನ್ನು ಒಂದೇ ಪ್ರಕಾರವಾಗಿ ನಿರ್ಧರಿಸಲಾಯಿತು.

1920ರ ದಶಕದಲ್ಲಿ ಕಾಫಿ ತೋಟದ ಮತ್ತು ಕೂಲಿಯಾಳಿನ ನಡುವೆ ಒಪ್ಪಂದವನ್ನು ಸ್ಟಾಂಪು ಪೇಪರಿನಲ್ಲಿ ದಾಖಲು ಮಾಡಲಾಗುತ್ತಿತ್ತು. ಮೊದಲು ರೈಟರು ಕೂಲಿಯಾಳಿನ ಹೆಬ್ಬೆಟ್ಟಿನೊತ್ತನ್ನು ಖಾಲಿ ಸ್ಟಾಂಪು ಪೇಪರಿನಲ್ಲಿ ಪಡೆಯುತ್ತಿದ್ದ. ಆಮೇಲೆ ತೋಟದ ಯಜಮಾನ ಸಹಿ ಹಾಕುತ್ತಿದ್ದ. ಈ ಕರಾರಿನ ಪ್ರತಿ ಕೂಲಿಯಾಳಿನ ಹತ್ತಿರ ಇರುವ ಸಾಧ್ಯತೆಯೇ ಇರಲಿಲ್ಲ. ಬಡ ಕೂಲಿಕಾರನ ಮೇಲೆ ನಡೆಯುತ್ತಿದ್ದ ಈ ಏಕಪಕ್ಷೀಯ ದಬ್ಬಾಳಿಕೆಯನ್ನು ಒಪ್ಪಂದ ಎಂದು ಕರೆಯುವುದೇ ತಪ್ಪು. ಈ 'ಒಪ್ಪಂದ'ವನ್ನು ಉಲ್ಲಂಘಿಸಿ ತೋಟಗಳಿಂದ ತಪ್ಪಿಸಿಕೊಳ್ಳುತ್ತಿದ್ದ ಕೂಲಿಕಾರರ ವಿರುದ್ಧ ಕೋರ್ಟಿನಲ್ಲಿ ಅರ್ಜಿಸಲ್ಲಿಸಿ ಹಳ್ಳಿಗಳಿಗೆ ಹಿಂತಿರುಗಿದ್ದವರನ್ನು ವಾರೆಂಟಿನ ಮೂಲಕ ಹಿಡಿದುಕೊಂಡುಬಂದು ತೋಟದ ಒಡೆಯರು ತಮ್ಮ ತೋಟಗಳಲ್ಲಿ ದುಡಿಸಿಕೊಳ್ಳುತ್ತಿದ್ದರು.

ಕೋರ್ಟು, ಪೋಲೀಸ್ ಮತ್ತು ತೋಟದ ಯಜಮಾನ ಎಲ್ಲ ಒಂದೇ ಆಗಿದ್ದ ಆವತ್ತಿನ ಸಂದರ್ಭದಲ್ಲಿ ಕೂಲಿಯಾಳಿಗೆ ನ್ಯಾಯ ಹೋಗಲಿ ಮನುಷ್ಯನಿಗೆ ಸಿಗಬೇಕಾದ ಕನಿಷ್ಠ ಮರ್ಯಾದೆ ಕೂಡ ಸಿಕ್ಕುತ್ತಿರಲಿಲ್ಲ.

ಕಾಫಿ ತೋಟದ ಕೂಲಿಕಾರರ ಕೂಲಿ

	ಗಂಡಸರಿಗೆ ದಿನಕ್ಕೆ	ಹೆಂಗಸರಿಗೆ ದಿನಕ್ಕೆ
1934ರಲ್ಲಿ	5 ಆಣೆ	4 ಆಣೆ
1944ರಲ್ಲಿ	6 ಆಣೆ	5 ಆಣೆ
1950ರಲ್ಲಿ	ರೂ. 0.11.6	ರೂ. 0.8.0

1934ರಿಂದ 1944ರ ಒಂದು ದಶಕದಲ್ಲಿ ಕೂಲಿಯಲ್ಲಾದ ಹೆಚ್ಚಳ ಕೇವಲ ಒಂದು ಆಣೆ ಎನ್ನುವುದು ಗಮನಾರ್ಹ.

ಕಾಫಿ ತೋಟಗಳಿಂದ ಕೂಲಿಗಳು ತಪ್ಪಿಸಿಕೊಂಡು ಓಡಿಹೋಗುವುದನ್ನು ತಪ್ಪಿಸಲು, ಅವರ ಕೂಲಿಯನ್ನು ನಿಯಂತ್ರಿಸಲು ಮೇಸ್ತ್ರಿಗಳ ಮೇಲೆ ಹಿಡಿತವಿಟ್ಟುಕೊಳ್ಳಲು ಮತ್ತು ಇನ್ನಿತರ ಕಾರಣಗಳಿಗಾಗಿ ಅಂದಾಜು 1870ರಲ್ಲಿ ಕೊಡಗಿನಲ್ಲಿ ಪ್ಲಾಂಟರು ಗಳ ಸಂಘ ಪ್ರಾರಂಭವಾಯಿತು. 1913ರಲ್ಲಿ ಕೊಡಗಿನಲ್ಲಿ ಲೇಬರ್ ಇಲಾಖೆ ಶುರುವಾಯಿತು. ಅಡ್ವಾನ್ಸು ಹಣ ಪಡೆದು ಕೂಲಿಕಾರರು ಒಂದು ತೋಟದಿಂದ ತಪ್ಪಿಸಿಕೊಂಡು ಇನ್ನೊಂದು ತೋಟದಲ್ಲಿ ಸೇರಿಕೊಳ್ಳುವವರ ವಿರುದ್ಧ ಇಲಾಖೆ ಕ್ರಮ

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಬ್ರಿಟಿಷರು ಕಾಫಿ ತೋಟಗಳನ್ನು ಮಾರಾಟ ಮಾಡಿ ಹೋದರು. ಆದರೆ ಆಮೇಲೆ ಕೂಡ ಕಾಫಿತೋಟದ ಕೂಲಿಕಾರರ ಬದುಕಿನ ಪರಿಸ್ಥಿತಿಯಲ್ಲಿ ಹೆಚ್ಚೇನೂ ಬದಲಾವಣೆಯಾಗಲಿಲ್ಲ. 1947ರ ವೇತನ ನೀಡಿಕೆ ಕಾಯಿದೆ ಜಾರಿಗೊಳಿಸಿದ ಮೇಲೆ ಕಾರ್ಮಿಕರ ವೇತನವನ್ನು ನಿಗದಿಗೊಳಿಸಿದ ಮೇಲೆ ಮೇಸ್ತ್ರಿ ಪದ್ಧತಿ ನಿರ್ಮೂಲವಾಗಿದೆ ಎಂದು ಹೇಳಲಾಗುತ್ತಿದೆ ಆದರೆ ಕೊಡಗು ಜಿಲ್ಲೆಯಲ್ಲಿ ಕಾನೂನಿನ ಸೀಮಿತ ಸೌಲಭ್ಯಗಳನ್ನು ಕೂಡ ಕೊಡದೆ ಕಂಟ್ರಾಕ್ಟುದಾರರ ಅಥವಾ ಮೇಸ್ತ್ರಿಗಳ ಮೂಲಕ ಹಂಗಾಮಿಯಾಗಿ ನೇಮಿಸಿಕೊಳ್ಳುವ ವಿಧಾನ ಬಹಳ ವ್ಯಾಪಕವಾಗಿದೆ. ಹೀಗೆ ಬಹಳ

(22ನೇ ಪುಟ ನೋಡಿ)

ಸಮಾಜವಾದವನ್ನು ಜನತೆಯಿಂದ ಪ್ರತ್ಯೇಕಿಸಲು ಅರಬ್ ಆಳುವ ವರ್ಗಗಳು ಹೂಡಿರುವ ತಂತ್ರ

ಇಸ್ಲಾಮಿಕ್ ಸಮಾಜವಾದ

-ಮು. ಇಕ್‌ಬಾಲ್ ಹುಸೇನ್

ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಎಣ್ಣೆಯ ಪಾತ್ರ ಬಹುಮುಖ್ಯವಾದದ್ದು. ಆದ್ದರಿಂದಲೇ ಅರಬ್ ಜಗತ್ತಿಗೆ ಪ್ರಾಮುಖ್ಯತೆ ಇರುವುದು. ನೈಸರ್ಗಿಕವಾಗಿ ಎಣ್ಣೆಭಾವಿಗಳಿಂದ ಸಂಪತ್‌ಭರಿತವಾದ ಅರಬ್ ಜಗತ್ತಿನ ಸಮಸ್ಯೆಗಳು ಹಲವು ಬಗೆಯದು. ಮುಖ್ಯವಾಗಿ ಅರಬ್ ರಾಷ್ಟ್ರೀಯತೆಯ ಪ್ರಶ್ನೆಯನ್ನೇ ಅವು ಪರಸ್ಪರ ಬಗೆಹರಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದರೂ ಅರಬ್ ರಾಷ್ಟ್ರಗಳನ್ನು ಬಲವಾಗಿ ಬಂಧಿಸಿರುವ ಒಂದೇ ಒಂದು ಸಾಮಾನ್ಯ ಅಂಶವೆಂದರೆ ಇಸ್ಲಾಂ ಧರ್ಮ.

ದೇವರುಗಳನ್ನು ಜೀವಂತಗೊಳಿಸಿದ ಮನುಷ್ಯ ತನ್ನನ್ನು ತಾನು ಶ್ರೀಮಂತಗೊಳಿಸಲಾರದೆಹೋದ. ಪಶ್ಚಿಮ ಏಶಿಯಾದಿಂದ ಆಫ್ರಿಕವರೆಗೆ ಹರಡಿರುವ ಇಸ್ಲಾಮಿಕ್ ಜಗತ್ತು ಸುಲ್ತಾನರು, ಖಲೀಫರು, ಸೈನಿಕ ಸರ್ವಾಧಿಕಾರಿಗಳು, ಅಮೀರರು (ಶ್ರೀಮಂತರು)ಗಳಿಂದ ತುಂಬಿಹೋಗಿದೆ. ಪಾಳೆಯಗಾರಿ ಸಂಸ್ಕೃತಿಯನ್ನು ದಾಟಿಹೋಗಲು ಇನ್ನೂ ಈ ದೇಶಗಳಿಗೆ ಸಾಧ್ಯವಾಗಿಲ್ಲ. ಇಪ್ಪತ್ತನೆಯ ಶತಮಾನದಲ್ಲಿಯೂ, ಹದಿನೆಂಟನೆಯ ಶತಮಾನವನ್ನು ಜೀವಂತವಾಗಿ ಉಳಿಸಿಕೊಂಡಿರುವ ಇವರಿಗೆ ಆಧುನಿಕ ವಿಚಾರಧಾರೆಗಳಿಂದ ದೂರ ಉಳಿಯುವ, ಉಳಿಸಿಕೊಳ್ಳುವ ದುರುದ್ದೇಶ. ಎಣ್ಣೆಭಾವಿಗಳ ಗುತ್ತೇದಾರರಾದ ಶೇಖರು, ಅಮೀರರು ದೇಶೀಯವಾಗಿ ಆರ್ಥಿಕ ವ್ಯವಸ್ಥೆಯ ಮುಖ್ಯ ಸೂತ್ರಧಾರರು. ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯನ್ನು ತರಲು ಬಯಸುವ ಸಮಾಜವಾದ-ಸಾಮ್ಯವಾದವನ್ನು ಸಹಜವಾಗಿ ವಿರೋಧಿಸುವ ಈ ಗುತ್ತೇದಾರರು ತಮ್ಮನ್ನು ತಾವು ಉಳಿಸಿಕೊಳ್ಳಲು ಇಸ್ಲಾಂ ಸಮಾಜವಾದ ಅಥವಾ ಇಸ್ಲಾಮೀಕರಣದ ವಾದವನ್ನು ಮುಂದಿಡುತ್ತಾರೆ. ಸಹಜವಾಗಿ, ಎಣ್ಣೆ ವ್ಯಾಪಾರಿಗಳ ಕೃಪೆಯಿಂದ ತಮ್ಮ ಅಸ್ತಿತ್ವ ಉಳಿಸಿಕೊಂಡಿರುವ ಸುಲ್ತಾನರು, ಖಲೀಫರು ಜನಸಾಮಾನ್ಯರ ಮನಸ್ಸಿನಲ್ಲಿ ಆಳವಾಗಿ ಬೇರೂರಿರುವ ಧಾರ್ಮಿಕ ಭಾವನೆಗಳನ್ನು ರಾಜಕೀಯವಾಗಿ ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇಸ್ಲಾಂ ಧರ್ಮಹುಟ್ಟಿ, ಬೆಳೆದು ತನ್ನ ಪೂರ್ಣ ವೈಭವದಿಂದ ಮೆರೆದ ಈ ದೇಶಗಳಲ್ಲಿ ಇಸ್ರೇಲ್ ದೇಶದ ಹುಟ್ಟಿನೊಂದಿಗೆ ಪ್ರಾರಂಭವಾಯಿತು ಗುಂಪುಗಾರಿಕೆ, ಮಿಲಿಟರಿ ಕೂಟ ಹಾಗೂ ಅಧಿಕಾರ ಬದಲಾವಣೆಯ ದೃಷ್ಟಿಕೋನದಲ್ಲಿ ಬದಲಾವಣೆ. ಇಸ್ರೇಲಿನ ಆಕ್ರಮಣ, ಪ್ರಜಾಸತ್ತಾತ್ಮಕ ವ್ಯವಸ್ಥೆಗಾಗಿ ಯುವಜನಾಂಗ ಪ್ರಾರಂಭಿಸಿದ ಪ್ರಚಾರ-ಆಂದೋಲನಗಳು ಹಾಗೂ ಅಂತರ್‌ರಾಷ್ಟ್ರೀಯವಾಗಿ ಅಮೇರಿಕ-ರಷ್ಯಾ ಬಣಗಳ ರಚನೆಯಿಂದಾಗಿ ಬದಲಾವಣೆಯನ್ನು ಬಯಸುವ ಶಕ್ತಿಗಳಿಗೆ ಮತ್ತಷ್ಟು ಪ್ರೋತ್ಸಾಹ ಸಿಕ್ಕಿತು. ಪ್ಯಾಲೆಸ್ಟೈನ್ ಗೆರಿಲ್ಲಾಗಳಿಗೆ ಚೀನಾ-ರಷ್ಯಾಗಳಲ್ಲಿ ತರಬೇತಿಯ ಅವಕಾಶ, ಇಸ್ರೇಲ್ ವಿರುದ್ಧ ಹೋರಾಟಕ್ಕೆ ಈಜಿಪ್ಟ್, ಸಿರಿಯಾ ದೇಶಗಳಿಗೆ ಬೆಂಬಲ ತಾತ್ಕಾಲಿಕವಾಗಿ ಸಮಾಜವಾದಿ ಶಕ್ತಿಗಳಿಗೆ ಅನುಕೂಲಕರವಾದ ವಾತಾವರಣವನ್ನುಂಟುಮಾಡಿತು.

ಆದರೆ, ಕ್ರಮೇಣ ಈಜಿಪ್ಟ್-ರಷ್ಯಾ ಸಂಬಂಧಗಳು ಬಿಗಡಾಯಿಸಿದವು. ಇರಾನ್‌ನಲ್ಲಿ ಸಾಮ್ರಾಜ್ಯವಾದಿಗಳ ಹಸ್ತಕ ಷಾನ ವಿರುದ್ಧ ಹೋರಾಟ ಉಗ್ರರೂಪವನ್ನು ತಾಳಿದಾಗ ಖೋಮೇನಿಗೆ ರಷ್ಯಾ ಬೆಂಬಲ ನೀಡಿದ್ದನ್ನು ಅಲ್ಲಿಯ ಸಮಾಜವಾದಿ ಶಕ್ತಿಗಳೇ ವಿರೋಧಿಸಿದವು. ಅರಬ್ ಜಗತ್ತಿನ ವಿವಿಧದೇಶಗಳ ಸಾಮ್ಯವಾದಿ ಶಕ್ತಿಗಳು ತಮ್ಮದೇ ಆದ ಹಾದಿಯನ್ನು ಹಿಡಿಯಲು ನಿರ್ಧರಿಸಿದವು.

ಪಾಕಿಸ್ತಾನ, ಇರಾನ್‌ಗಳು ಇಸ್ಲಾಮಿಕ್ ರಾಷ್ಟ್ರಗಳೆಂದು ಘೋಷಿಸಿಕೊಂಡು, ಇಸ್ಲಾಮೀಕರಣದ ಕೂಗನ್ನು ಎಬ್ಬಿಸಿದವು. ಲಿಬಿಯಾ, ಸಿರಿಯಾಗಳು ತಮ್ಮದೇ ಆದ ಇಸ್ಲಾಂ ರಾಷ್ಟ್ರದ ಹೊಸ ಕಲ್ಪನೆಗಳನ್ನು ಬಹಿರಂಗಪಡಿಸಿದವು. ಇಸ್ಲಾಮೀಕರಣ, ಇಸ್ಲಾಂ ರಾಷ್ಟ್ರದ ಘೋಷಣೆಯೊಂದಿಗೆ ಎಡಶಕ್ತಿಗಳನ್ನು ಜನಗಳಿಂದ ದೂರ ಮಾಡುವ ಈ ಸರಕಾರಗಳ ಪ್ರಯತ್ನಗಳಿಗೆ ಪುಷ್ಟಿಸಿಕ್ಕಿತು.

ಮುಖ್ಯವಾದ ಅಂಶವೆಂದರೆ, ಇಸ್ಲಾಂ ಗಣರಾಜ್ಯದ ಕಲ್ಪನೆಯ ಬಗ್ಗೆ ಅರಬ್ ರಾಷ್ಟ್ರಗಳಲ್ಲಿ ಎದ್ದಿರುವ ಪರಸ್ಪರ ವಾದ-ವಿವಾದಗಳು ಇಸ್ಲಾಮಿಕ್ ಗಣರಾಜ್ಯವೆಂದರೆ ಸಾಮಾನ್ಯವಾಗಿ "ಇಡೀ ಪ್ರದೇಶದ ಸಾರ್ವಭೌಮತ್ವ ದೇವರಿಗೆ ಮಾತ್ರ ಸೇರಿದ್ದು, ದೇವರ ಪವಿತ್ರ ಕಾನೂನೇ(ಶರೀಯಾ) ಅಂತಿಮವಾದದ್ದು". ಆದರೆ ಆದನ್ನು ವಾಸ್ತವಿಕವಾಗಿ, ಭೌತಿಕವಾಗಿ ಕಾರ್ಯರೂಪಕ್ಕಿಳಿಸುವಾಗ ಸಂವಿಧಾನಾತ್ಮಕ ಅಥವಾ ರಾಜಕೀಯ ಚೌಕಟ್ಟಿಗೆ ಹೇಗೆ ತರಬೇಕು ಎಂಬುದೇ ಸಮಸ್ಯೆ. ಏಕೆಂದರೆ, ಇದಕ್ಕೆ ಯಾವುದೇ ಮಾದರಿ ರಾಜ್ಯ ಪ್ರಪಂಚದಲ್ಲಿ ಇಲ್ಲ. ಈ ಗೊಂದಲ, ಸಂಶಯಗಳ ಬಗ್ಗೆ ಕೆಲವು ಉದಾರವಾದಿಗಳು ಟಿಪ್ಪಣಿಗಳನ್ನು ಕೊಡುತ್ತಿದ್ದರೂ, ವಾದ-ವಿವಾದಗಳು ಉಂಟಾಗಬಹುದೆಂಬ ಹೆದರಿಕೆಯಿಂದ "ಇಸ್ಲಾಮಿಕ್" ಗಣರಾಜ್ಯದ ಕಲ್ಪನೆಯ ಬಗ್ಗೆ ಗಂಭೀರ ಟೀಕೆಗಳನ್ನು ಮಾಡಲು ಹಿಂದೇಟು ಹೊಡೆಯುತ್ತಿದ್ದಾರೆ. ಇದರ ಉಪಯೋಗಪಡೆದು ಸಂಪ್ರದಾಯವಾದಿಗಳು ಆತ್ಮವಿಶ್ವಾಸದಿಂದ "ಇಸ್ಲಾಮಿಕ್ ಗಣರಾಜ್ಯ"ದ ಬಗ್ಗೆ ಗಟ್ಟಿಯಾಗಿ ತಮ್ಮ ವಾದವನ್ನು ಜನತೆಯ ಮುಂದೆ ಪ್ರಚಾರಮಾಡುತ್ತಿದ್ದಾರೆ.

ಸಮಾಜವಾದಿ ದೇಶಗಳಲ್ಲಿ ಹಾಗೂ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕಾನೂನನ್ನು ಜನಗಳಿಂದ ಅಥವಾ ಜನಗಳನ್ನು ಪ್ರತಿನಿಧಿಸುವ ಒಂದು ಸಂಸ್ಥೆ ಜನತೆ ಒಪ್ಪಿ ತಮಗೆ ನೀಡಿದ ಅಧಿಕಾರದ ಮೂಲಕ ಕಾನೂನನ್ನು ರಚನೆ ಮಾಡುತ್ತದೆ. ಆದರೆ, ಇಸ್ಲಾಮಿಕ್ ರಾಷ್ಟ್ರಗಳ ದೃಷ್ಟಿಕೋನವೇ ಬೇರೆ. ವಿಶ್ವದ ಪ್ರಭುತ್ವ ದೇವರಿಗೆ ಸೇರಿದ್ದಾದ್ದರಿಂದ, ಪವಿತ್ರ ಕಾನೂನು (ಶರೀ'ಯಾ) ದೇವರ ಇಚ್ಛೆಯೇ ಆಗಿರುತ್ತದೆ. ಆದ್ದರಿಂದ, ಕಾನೂನನ್ನು ಉಲ್ಲಂಘಿಸುವವರು ದೇವರ ಅನುಜ್ಞೆಯನ್ನು ಉಲ್ಲಂಘಿಸುವವರು ಮಾತ್ರವಲ್ಲದೆ, ನರಕಕ್ಕೆ ಹೋಗುವ ಪಾಪಿಗಳೂ ಆಗುತ್ತಾರೆ. ಇದರಿಂದಾಗಿ ಕಾನೂನು ಪಾಲನೆ, ಧಾರ್ಮಿಕ ಕಟ್ಟುನಿಟ್ಟು ಹಾಗೂ ನೈತಿಕತೆ ಒಂದೇ ನಾಣ್ಯದ ಎರಡು ಮುಖಗಳು ಎಂಬ ವಾದವನ್ನು ಮುಂದೆ ಒಡ್ಡುತ್ತಾರೆ. ಈ ಕಾನೂನು ಮುಸ್ಲಿಮರ ಜೀವನದ ಅತಿಸಣ್ಣ ಅಂಶಗಳಿಂದ ಸಾಮಾಜಿಕ, ನೈತಿಕ ಹಾಗೂ ಉಳಿದೆಲ್ಲಾ ಕರ್ತವ್ಯಗಳನ್ನು ಬೋಧಿಸುತ್ತದೆ.

ಸಮಾಜವಾದವನ್ನು ಅಥವಾ ಸಾಮ್ಯವಾದವನ್ನು ಜನತೆಯಿಂದ ಪ್ರತ್ಯೇಕಿಸಲು ಅರಬ್ ರಾಷ್ಟ್ರಗಳ ಬಂಡವಾಳಶಾಹಿಗಳು ಹಾಗೂ ಅವರ ಹಸ್ತಕರಾದ ಸಂಪ್ರದಾಯವಾದಿಗಳು "ಕಮ್ಯುನಿಸಂ ಎಂದರೆ ಇಸ್ಲಾಂ ಧರ್ಮದ ಭ್ರಷ್ಟ ರೂಪ" ಎಂದು ವ್ಯಾಖ್ಯಾನ ಮಾಡುತ್ತಾರೆ. ಮಾರ್ಕ್ಸ್‌ನ ಸಿದ್ಧಾಂತದಲ್ಲಿ ಧರ್ಮದ ಕೇಂದ್ರಬಿಂದುವಾದ ದೇವರು (ಅಲ್ಲಾ) ಇಲ್ಲದಿರುವುದರಂದ ಅದು ಅಪೂರ್ಣವಾಗಿದೆ, ಅದು ಕೇವಲ ಹೊಟ್ಟೆ ತುಂಬುವ ಸಿದ್ಧಾಂತವಾಗಿದೆ ಎಂದು ವಾದಿಸುತ್ತಾರೆ. ಆದರೆ, ಕೇವಲ ನಾಸ್ತಿಕವಾದವನ್ನು ಅಥವಾ ಮಾರ್ಕ್ಸ್‌ವಾದವನ್ನು ತೆಗಳುವುದರಿಂದ ಧಾರ್ಮಿಕ ಪ್ರಜ್ಞೆ ಬೆಳೆಯುದಿಲ್ಲವೆಂದು ಗಟ್ಟಿಯಾಗಿ ಹೇಳುವ ಧೈರ್ಯ ಕಮ್ಯುನಿಸ್ಟ್ ಪಕ್ಷಗಳ ಮುಖಂಡರಲ್ಲಾಗಲೀ, ಕಾರ್ಯಕರ್ತರಲ್ಲಾಗಲೀ ಇಲ್ಲ. ಇದನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುವ ಬಂಡವಾಳಶಾಹಿ ಪರ ಶಕ್ತಿಗಳು ಜನತೆಯ ಮುಂದೆ ಇಸ್ಲಾಂ ಸಮಾಜವಾದವನ್ನು ಮಂಡಿಸಿ ಗೆಲ್ಲುತ್ತಾರೆ, ನಂತರ ಕಮ್ಯುನಿಸ್ಟ್ ಪಕ್ಷಗಳನ್ನು ಕ್ರೂರವಾಗಿ ನಿರ್ನಾಮ ಮಾಡುತ್ತಾರೆ. ಉದಾಹರಣೆಗೆ ಅಫ್‌ಘಾನಿಸ್ತಾನವನ್ನೇ ನೋಡೋಣ.

ಅಫ್‌ಘಾನಿಸ್ಥಾನದಲ್ಲಿ, ರಾಜಾಶ್ರಯ ಪಡೆದು ಸುಖಜೀವನ ನಡೆಸುತ್ತಿದ್ದ ಮುಲ್ಲಾಗಳು, ಜಮೀನುದಾರರು ನ್ಯಾಯಾಲಯಗಳಲ್ಲಿ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಮುಖ್ಯಸ್ಥಾನಗಳನ್ನು ಪಡೆದು ವಿಲಾಸೀ ಜೀವನ ನಡೆಸುತ್ತಿದ್ದರು. ಈ ವಿಶೇಷ ಸೌಲಭ್ಯ ಪಡೆದಿದ್ದ ಜನರೇ ಈವೊತ್ತು ಈಸ್ಲಾಂ ಧರ್ಮದ ಹೆಸರಿನಲ್ಲಿ ಪ್ರತಿಕ್ರಾಂತಿಯ ವಕ್ತಾರರು. ಇಲ್ಲಿ ಸಮಾಜವಾದಿ ಸರಕಾರ ಸ್ಥಿತಗೊಂಡರೆ, ಅದರ ಪ್ರಭಾವದಿಂದ ತಮ್ಮ ಬುಡಕ್ಕೆ ಸಂಚಕಾರ ಬರಬಹುದೆಂಬುದು ನೆರೆಯ ಪಾಕಿಸ್ತಾನ, ಇರಾನ್‌ಗಳ ಹೆದರಿಕೆ. ಆದ್ದರಿಂದಲೇ ಈ ದೇಶಗಳು ಹೊರಗಡೆ ಅಮೇರಿಕ ವಿರೋಧಿ ನೀತಿಯನ್ನು ಪ್ರದರ್ಶಿಸುತ್ತಿದ್ದರೂ, ಗುಪ್ತವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಸಹಾಯ ಮಾಡುತ್ತಿದ್ದಾರೆ. ಇದಕ್ಕೆ ಅಫ್‌ಘಾನಿಸ್ಥಾನ-ಪಾಕಿಸ್ಥಾನ ಗಡಿಯಲ್ಲಿ ನಡೆದಿರುವ ಘರ್ಷಣೆಗಳು, ನಿರಾಶ್ರಿತರ ಶಿಬಿರಗಳಿಗೆ ಅಮೇರಿಕಾವ ಸಹಾಯಧನ, ಶಸ್ತ್ರಾಸ್ತ್ರ ಸರಬರಾಜುಗಳೇ ಸಾಕ್ಷಿ.

ಈ ಇಸ್ಲಾಮಿಕ್ ಸಮಾಜವಾದದಲ್ಲಿ ಎಣ್ಣೆ ಭಾವಿಗಳ ಗುತ್ತೇದಾರರಾದ ಶೇಖರ ಖಾಸಗಿ ಒಡೆತನಕ್ಕಾಗಲೀ, ಅವರ ಹಿತರಕ್ಷಣೆಯ ಜವಾಬ್ದಾರಿ ಹೊತ್ತಿರುವ ಸುಲ್ತಾನರ ಅಸ್ತಿತ್ವಕ್ಕಾಗಲೀ ಧಕ್ಕೆಯಿಲ್ಲ. ಅಸಂಖ್ಯಾತ ಕಾರ್ಮಿಕರಿಗೆ, ಬಡಜನತೆಗೆ ಸಿಗುವುದು ವರ್ಷಕ್ಕೊಮ್ಮೆ ರಂಜಾನ್ ತಿಂಗಳಲ್ಲಿ ನೂರಕ್ಕೆ ರೂ. 2-50 ಪೈಸೆಯಂತೆ ಉಳ್ಳವರು ನೀಡುವ(ಜಕಾತ್) ದಾನ ಮಾತ್ರ. ಸಮಾಜದ ಮೇಲ್ವರ್ಗಗಳಾಗಿ ಉಳಿರುವ ಮುಲ್ಲಾಗಳು (ಪುರೋಹಿತರು) ರಾಜ್ಯ ಸೂತ್ರಗಳನ್ನು ಹಿಡಿದಿರುವ ಸುಲ್ತಾನರು (ಕ್ಷತ್ರಿಯರು?) ವ್ಯಾಪಾರಿಗಳಾದ ಶೇಖರು, ಅಮೀನರು (ವೈಶ್ಯಾ?) ಸಮಾಜದ ಚಲನೆಯ ಗತಿಯನ್ನೇ ನಿರ್ಬಂಧಿಸತೊಡಗಿದ್ದಾರೆ. ದುಡಿಯುವ ವರ್ಗವನ್ನು ಶರೀಯತ್ ಹೆಸರಿನಲ್ಲಿ ಅಡಗಿಸಲು, ಮುಷ್ಕರಗಳನ್ನು ಮುರಿಯಲು ನದೀ ಬಯಲುಗಳ ಫಲವತ್ತಾದ ಭೂಮಿಯನ್ನು ತಮ್ಮ ಕೈಯಲ್ಲೇ ಉಳಿಸಿಕೊಳ್ಳಲು ಇವರಿಗೆ ಇಸ್ಲಾಮಿಕ್ ಗಣರಾಜ್ಯಬೇಕು.

ಅರಬಸ್ತಾನದ ಚರಿತ್ರೆಯನ್ನೊಮ್ಮೆ ಸಂಪೂರ್ಣವಾಗಿ ಅವಲೋಕಿಸುವವರಿಗೆ ಒಂದು ಆಶ್ಚರ್ಯದ ಸಂಗತಿ ಎದ್ದು ಕಾಣುತ್ತದೆ. ಅದೇನೆಂದರೆ, ಮೊಹಮ್ಮದ್ ಪೈಗಂಬರರ ಮೊಮ್ಮಕ್ಕಳಾದ ಹಸನ್ ಮತ್ತು ಹುಸೇನ್ ಇಬ್ಬರೂ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹುತಾತ್ಮರಾದದ್ದು. ಪ್ರಜಾಪೀಡಿತವಾಗಿದ್ದ ಖಲೀಫ ಯಜೀದ್ ಅರಸೊತ್ತಿಗೆ ವಂಶಪಾರಂಪರ್ಯವಾದದ್ದೆಂಬ ವಾದದ ಆಧಾರದ ಮೇಲೆ ಅಧಿಕಾರಕ್ಕೆ ಬಂದವನು. ದೇಶವನ್ನು ಆಳುವುದಕ್ಕೆ ಕೇವಲ ವಂಶವೊಂದೇ ಅಧಾರವಲ್ಲ, ಜನತೆಯೇ ಪ್ರಭುತ್ವದ ವಾರಸುದಾರರು, ಜನಗಳಿಂದ ಆಯ್ಕೆ ಆಗುವವನು ಮಾತ್ರ ಅಧಿಕಾರದಲ್ಲಿ ಇರಲು ಸಾಧ್ಯವೆಂದು ಹೇಳಿದವರು ಹಸನ್ ಮತ್ತು ಹುಸೇನ್. ಜನತೆಯ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಈ ಇಬ್ಬರು ಸಹೋದರರೂ ಕರ್ಬಲಾ ಮೈದಾನದಲ್ಲಿ ನಡೆದ ಯುದ್ಧದಲ್ಲಿ ತಮ್ಮ ಪ್ರಾಣವನ್ನೇ ಬಲಿಕೊಟ್ಟರು. ಇದರ ಸ್ಮರಣಾರ್ಥವಾಗಿಯೇ ಮೊಹರಂ ನಡೆಯುವುದು. ಇದರಿಂದಾಗಿಯೇ ಮುಸ್ಲಿಮರಲ್ಲಿ ಶಿಯಾ-ಸುನ್ನಿಗಳೆಂದು ಎರಡು ವಿಭಾಗವಾದದ್ದು. ಆದರೆ, ಯಾವ ಹಕ್ಕುಗಳಿಗಾಗಿ ಪೈಗಂಬರರ ಮೊಮ್ಮಕ್ಕಳು ಹುತಾತ್ಮರಾದರೋ ಆ ಹಕ್ಕುಗಳು ಈವೊತ್ತು ಇಸ್ಲಾಮಿಕ್ ಗಣರಾಜ್ಯವೆಂದು ಹೇಳಿಕೊಳ್ಳುವ ಯಾವ ದೇಶದಲ್ಲಿಯೂ ಇಲ್ಲ. ಇದರಿಂದಾಗಿ ಧರ್ಮ ಕೇವಲ ಅನುಕೂಲಸಿಂಧು ಎಂಬುದು ಸ್ಪಷ್ಟವಾಗುತ್ತದೆ.

ಧರ್ಮವನ್ನು ಉಪಯೋಗಿಸಿಕೊಂಡು ಜನತೆಯನ್ನು ಒಡೆದು ಆಳುವ ಸಾಮ್ರಾಜ್ಯಶಾಹಿ ನೀತಿ, ಧರ್ಮದ ಹೆಸರಿನಲ್ಲಿ ಉಳ್ಳವರ ಬೆಂಬಲದಿಂದ ನಡೆಯುವ ಸರ್ವಾಧಿಕಾರಿ ಸರಕಾರಗಳ ನೀತಿ ಇಂದು ಜಗತ್ತಿಗೆ ಒಂದು ಎಚ್ಚರಿಕೆ ಎಂದು ಹೇಳಬಹುದು. ಮಾನವನ ಮೂಲಭೂತ ಅವಶ್ಯಕತೆಗಳನ್ನು, ಸಮಸ್ಯೆಗಳನ್ನು ಬಗೆಹರಿಸಲು ಅಸಮರ್ಥವಾಗಿರುವ ಎಲ್ಲಾ ಧರ್ಮಗಳು ಹಾಗೂ ಸಾಮ್ರಾಜ್ಯಶಾಹಿಗಳು ನಾಳಿನ ನಿರ್ಣಾಯಕ ಯುದ್ಧದಲ್ಲಿ ಒಂದಾದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ●

ದೇಶದ ದಾರಿದ್ರ್ಯ ಕುರಿತು
ಮಾತಾಡೋಣ
ಅಪರಿಚಿತ ಸರ್ಕಾರವನ್ನು ಕುರಿತು
ಮಾತಾಡೋಣ
ಕುಸಿಯುತ್ತಿಹ ಅರಮನೆಯ
ಗುಣಗಾನವೇಕೆ?
ಮಜ್ದೂರನ ಹಿಕಾಸೆಯ ಕುರಿತು
ಮಾತಾಡೋಣ

—ಸಾಹಿರ್

ಬಂಡವಾಳಶಾಹಿ ಬೆಳವಣಿಗೆಗೆ ಆರನೇ ಯೋಜನೆ

-ಯಡೂರ ಮಹಾಬಲ

ಯೋಜನೆಗಳ ಹಿನ್ನೆಲೆ :

ಒಂದು ದೇಶದ ಆರ್ಥಿಕ ಬೆಳವಣಿಗೆಯನ್ನು ಸಮಗ್ರ ಯೋಜನೆಯ ಮೂಲಕ ಕೈಗೊಳ್ಳುವ ಕ್ರಮ ಜಗತ್ತಿನಲ್ಲೇ ಮೊದಲಬಾರಿಗೆ ಬೆಳೆದುಬಂದದ್ದು ರಷ್ಯಾದಲ್ಲಿ ಸಮಾಜವಾದವು ಸ್ಥಾಪನೆಯಾದ ನಂತರ. ಅದಕ್ಕೆ ಹಿಂದೆ ಬಂಡವಾಳಶಾಹಿ ದೇಶಗಳಲ್ಲಿ ಪ್ರತಿಯೊಬ್ಬ ಬಂಡವಾಳಗಾರರೂ ತಮ್ಮತಮ್ಮ ಉದ್ಯಮಗಳನ್ನು ಯೋಜಿಸುವುದಿತ್ತೇಹೊರತು ದೇಶದ ಪೂರ್ಣ ಅರ್ಥವ್ಯವಸ್ಥೆಯನ್ನು ಯೋಜಿಸುವುದು ಇರಲಿಲ್ಲ. ರಷ್ಯಾದಲ್ಲಿ ಕ್ರಾಂತಿಯಾಗಿ ಕೈಗಾರಿಕೆ ಮತ್ತು ಕೃಷಿಗಳೆರಡೂ ಸಾರ್ವಜನಿಕರ ಸಾಮೂಹಿಕ ಒಡೆತನಕ್ಕೆ ಒಳಗಾದಾಗ ದೇಶದ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಪಂಚವಾರ್ಷಿಕ ಯೋಜನೆಗಳನ್ನು ಪ್ರಾರಂಭಿಸಲಾಯಿತು. 1929-33ರಲ್ಲಿ ಬಂಡವಾಳಶಾಹಿ ಜಗತ್ತು ಹಿಂದೆಂದೂ ಅನುಭವಿಸಿರದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ಸ್ಟಾಲಿನ್ ನೇತೃತ್ವದಲ್ಲಿ ಮೊಟ್ಟಮೊದಲ ಪಂಚವಾರ್ಷಿಕ ಯೋಜನೆ ಅಪಾರ ಯಶಸ್ಸನ್ನು ಗಳಿಸಿತು.

ಈ ಸಮಯದಲ್ಲಿಯೇ ಮುಕ್ತ ಉದ್ಯಮ ಬಂಡವಾಳಶಾಹಿಯ (Free Enterprise Capitalism) ಯುಗ ಮುಗಿಯಿತೆಂದೂ ಆರ್ಥಿಕ ಬಿಕ್ಕಟ್ಟುಗಳನ್ನು ಬಗೆಹರಿಸುವ ಸಲುವಾಗಿ ಸರಕಾರವು ಅರ್ಥವ್ಯವಸ್ಥೆಯಲ್ಲಿ ಕೈಹಾಕಬೇಕೆಂದೂ ಜೆ.ಎಮ್. ಕೀನ್ಸ್ ಹೊಸ ಆರ್ಥಿಕ ಸಿದ್ಧಾಂತವನ್ನೇ ಮಂಡಿಸಿದ. ಇದನ್ನು ಅಭಿವೃದ್ಧಿಹೊಂದಿದ ಬಂಡವಾಳಶಾಹಿ ದೇಶಗಳಲ್ಲೂ, ಹಾಗೂ ಹಿಂದುಳಿದ ದೇಶಗಳಲ್ಲೂ ಅಳವಡಿಸಲಾಯಿತು.

ಎರಡನೇ ಮಹಾಯುದ್ಧಾನಂತರ ಸ್ವತಂತ್ರಗೊಂಡ ಹಿಂದುಳಿದ ದೇಶಗಳು ಬಂಡವಾಳಶಾಹಿ ಬೆಳವಣಿಗೆಗೆಬೇಕಾದ ತಾಂತ್ರಿಕತೆ ಹಾಗೂ ಬಂಡವಾಳದ ಕೊರತೆಯಿಂದಾಗಿ ನರಳಬೇಕಾಯಿತು. ಒಂದೆಡೆ ಜನರ ಸುಲಿಗೆಯನ್ನು ನಡೆಸಿ, ಇನ್ನೊಂದೆಡೆ ಸಮಾಜವಾದಿ ದೇಶಗಳ ಸಹಾಯವನ್ನು ಪಡೆದು ಮೂಲ ಹಾಗೂ ಭಾರ ಕೈಗಾರಿಕೆಗಳನ್ನು (Basic and Heavy Industries) ಸ್ಥಾಪಿಸುವುದಕ್ಕಾಗಿ 'ಸಾರ್ವಜನಿಕ ರಂಗ'ವನ್ನೇ ದೊಡ್ಡ ಪ್ರಮಾಣದಲ್ಲಿ ಯೋಜಿಸಬೇಕಾಯಿತು. ಹೀಗಾಗಿ ಅನೇಕ ಹಿಂದುಳಿದ ದೇಶಗಳಲ್ಲೂ ಬಂಡವಾಳಶಾಹಿ ಬೆಳವಣಿಗೆಗೆ ಪಂಚವಾರ್ಷಿಕ ಯೋಜನೆಗಳನ್ನು ಹಾಕಲಾಯಿತು. ಈ ಬಂಡವಾಳಶಾಹಿ ಪಂಚವಾರ್ಷಿಕ ಯೋಜನೆಗಳಿಗೂ, ಸಮಾಜವಾದಿ ಪಂಚವಾರ್ಷಿಕ ಯೋಜನೆಗಳಿಗೂ ಯಾವ ಸಾಮ್ಯತೆಯೂ ಇಲ್ಲ. ಈ ದೇಶದ ಯೋಜನೆಗಳು ತಮ್ಮಲ್ಲಿರುವ ಶಕ್ತಿ, ಸಂಪನ್ಮೂಲಗಳನ್ನು ಹೇಗೆ ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಂಡು ವೇಗದ ಬಂಡವಾಳಶಾಹಿ ಅರ್ಥವ್ಯವಸ್ಥೆಯ ಬೆಳವಣಿಗೆಯನ್ನು ಸಾಧಿಸಬಹುದು ಎನ್ನುವುದಕ್ಕಾಗಿದೆ ಮತ್ತು ಹಿಂದಿನ ಐದು ಯೋಜನೆಗಳಲ್ಲದೆ ಇದೀಗ ಸಿದ್ಧಪಡಿಸಿರುವ ಆರನೇ ಯೋಜನೆಯೂ ಬಂಡವಾಳಶಾಹಿ ಯೋಜನೆಯಾಗಿದೆ ಎನ್ನುವುದನ್ನು ಈ ಕೆಳಗೆ ನೋಡಬಹುದು.

ಖಾಸಗಿ ಬಂಡವಾಳದ ಸಿಂಹಪಾಲು

ಆರನೇ ಯೋಜನೆಯಲ್ಲಿ ಒಟ್ಟು 158,710ಕೋಟಿ ರೂ.ಗಳನ್ನು ವಿನಿಯೋಗಿಸಲು ನಿರ್ಧರಿಸಲಾಗಿದೆ. ಇದರಲ್ಲಿ ಖಾಸಗಿ ಬಂಡವಾಳದ ಪಾಲು 74,710 ಕೋಟಿ ರೂ.ಗಳು, ಅಂದರೆ 47.07%ರಷ್ಟು. ಅದೇ ಸರಕಾರವು ಸಾರ್ವಜನಿಕ ರಂಗದಲ್ಲಿ ಕೈಗಾರಿಕೆ ಮತ್ತು ಖನಿಜಗಳಿಗಾಗಿ ವಿನಿಯೋಗಿಸುವುದು 15,017 ಕೋಟಿ ರೂ. ಅಂದರೆ 9.46%ರಷ್ಟು. ಇದಲ್ಲದೆ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳಿಗಾಗಿ ಸಾರ್ವಜನಿಕ ರಂಗದಲ್ಲಿ 7170 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುತ್ತಿದೆ. ಅಂದರೆ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳೂ ಒಳಗೊಂಡಂತೆ ಕೈಗಾರಿಕಾ ಕ್ಷೇತ್ರದಲ್ಲಿ ವಿನಿಯೋಗಿಸಲ್ಪಡುವ ಒಟ್ಟು 95117 ಕೋಟಿ ರೂ.ಗಳಲ್ಲಿ ಖಾಸಗಿ ಬಂಡವಾಳಶಾಹಿಗಳ ಪಾಲು 74710 ಕೋಟಿ ರೂ.ಅಥವಾ 78.55%ರಷ್ಟಾದರೆ, ಸರಕಾರಿ ಕ್ಷೇತ್ರದ ಪಾಲು ಕೇವಲ 20407 ಕೋಟಿರೂ. ಅಥವಾ 21.45%ರಷ್ಟು. ಇದು ಬಂಡವಾಳದಾರರ ಯೋಜನೆಯಲ್ಲವೆ?

ಸಂಖ್ಯಾಪಟ್ಟಿ–1. ಖಾಸಗಿ ಬಂಡವಾಳದ ಸಿಂಹಪಾಲು

	ಆರನೇ ಯೋಜನೆಯಲ್ಲಿ ಕೈಗಾರಿಕಾ ರಂಗದಲ್ಲಿ ವಿನಿಯೋಗಿಸಲ್ಪಡುವ ಒಟ್ಟು ಹಣ	ಖಾಸಗಿ ಬಂಡವಾಳದ ಪಾಲು	ಸರಕಾರಿ ರಂಗದ ಪಾಲು
ಒಟ್ಟು ಹಣ (ಕೋಟಿ ರೂ.ಗಳು)	95,117	74,710	20,407
ಶೇಕಡಾ ಪ್ರಮಾಣ	100	78.55	21.45

ಸಾರ್ವಜನಿಕ ಹಣ ಖಾಸಗಿ ರಂಗಕ್ಕೆ

ಯೋಜನೆಯಲ್ಲಿ ಶೇ. 22.9ರಷ್ಟು ಹಣ ಸಾರ್ವಜನಿಕ ಉಳಿತಾಯದಿಂದ ಬಂದದ್ದೆಂದೂ, ಉಳಿದ ಶೇ. 77.1ರಷ್ಟು ಖಾಸಗಿ ಉಳಿತಾಯದಿಂದ ಬಂದದ್ದೆಂದೂ ತೋರಿಸಿ ಖಾಸಗಿ ರಂಗದಿಂದ ಸಾರ್ವಜನಿಕ ರಂಗಕ್ಕೆ ಹಣ ವರ್ಗಾವಣೆಯಾಗುತ್ತದೆಯೆಂದು ಹೇಳಿರುವುದು ಯೋಜನಾಕಾರರ ಮೋಸವಾಗಿದೆ. ಖಾಸಗಿ ಉಳಿತಾಯ ಎನ್ನುವಲ್ಲಿ ಖಾಸಗಿ ಕಂಪನಿಗಳ ಬಂಡವಾಳದ ಉಳಿತಾಯವಲ್ಲದೆ, ಕೌಟುಂಬಿಕ ಉಳಿತಾಯ Household Savings)ವನ್ನೂ ಸೇರಿಸಲಾಗಿದೆ. ಕೌಟುಂಬಿಕ ಉಳಿತಾಯ ಎನ್ನುವುದು ಒಬ್ಬ, ಇಬ್ಬರು, ಅಥವಾ ಕೆಲವು ಜನರದ್ದಲ್ಲದೆ, ಮಿಲಿಯಾಂತರ ಜನರ ಉಳಿತಾಯವಾಗಿರುವುದರಿಂದ ಇದನ್ನು ಸಾರ್ವಜನಿಕ ಸಂಪನ್ಮೂಲವೆಂದೇ ಪರಿಗಣಿಸಬೇಕು. ಹಾಗೆ ಪರಿಗಣಿಸಿದರೆ ಸಾರ್ವಜನಿಕ ಸಂಪನ್ಮೂಲ ಶೇ. 93.00 ರಷ್ಟಾಗುತ್ತದೆ. ಖಾಸಗಿರಂಗದ ಪ್ರಮಾಣ ಶೇ. 6.00 ಮತ್ತು ಸಹಕಾರಿ ರಂಗದ ಪ್ರಮಾಣ ಶೇ. 1.00ರಷ್ಟಾಗುತ್ತದೆ.

ಸಂಖ್ಯಾಪಟ್ಟಿ–2. ಸಂಪನ್ಮೂಲ ಸಾರ್ವಜನಿಕರಿಂದ

	ಸರಕಾರಿ ಮೂಲ, ಸಾರ್ವಜನಿಕ ಉದ್ದಿಮೆ, ಸಾರ್ವಜನಿಕ ಆರ್ಥಿಕ ಸಂಸ್ಥೆಗಳು ಮನೆತನ ಉಳಿತಾಯ, ಮುಂತಾದವುಗಳಿಂದ	ಖಾಸಗಿ ಬಂಡವಾಳಶಾಹಿ ರಂಗದ ಉಳಿತಾಯ	ಸಹಕಾರಿ ರಂಗ	ಒಟ್ಟು
ಒಟ್ಟು ಹಣ (ಕೋಟಿ ರೂ.)	139,059	9053	1535	149647
ಶೇಕಡಾ ಪ್ರಮಾಣ	93.00	6.00	1.00	100

ಶೇ. 93ರಷ್ಟು ಹಣದ ಮೂಲ ಸಾರ್ವಜನಿಕದ್ದಾಗಿದ್ದರೂ ಸಾರ್ವಜನಿಕ ರಂಗದಲ್ಲಿ ವಿನಿಯೋಗಿಸಲ್ಪಡುವುದು ಕೇವಲ ಶೇ. 53ರಷ್ಟು ಮಾತ್ರ. ಖಾಸಗಿರಂಗದ ಉಳಿತಾಯ ಶೇ. 6.00ರಷ್ಟಿದ್ದರೂ ಖಾಸಗಿರಂಗದಲ್ಲಿ ವಿನಿಯೋಗಿಸಲ್ಪಡುವುದು ಶೇ. 47ರಷ್ಟು. ಇದು ಹೇಗೆಂದರೆ ಸಾರ್ವಜನಿಕ ಮೂಲದಿಂದ 67523 ಕೋಟಿ ರೂ. ಅಂದರೆ ಶೇ. 48.55ರಷ್ಟನ್ನು ಖಾಸಗಿರಂಗಕ್ಕೆ ವರ್ಗಾವಣೆಮಾಡಲಾಗುತ್ತದೆ. ಖಾಸಗಿ ಬಂಡವಾಳಗಾರರಿಗೆ ದೇಶದ ಹೊರಗಡೆ ಬಂಡವಾಳವನ್ನು ಒಯ್ಯಲು ಬಿಡುವುದು(1866 ಕೋಟಿ ರೂ.ಗಳಷ್ಟು), ಸಾರ್ವಜನಿಕ ಹಣವನ್ನು ಖಾಸಗಿರಂಗಕ್ಕೆ ಸಾಗಿಸುವುದು, ಸಾರ್ವಜನಿಕ ರಂಗಕ್ಕೆ ವಿದೇಶಿಸಾಲ ತರುವುದು - ಇದು ಬಂಡವಾಳಶಾಹಿಗಳ ಯೋಜನೆಯಲ್ಲದೆ ಮತ್ತೇನು ?

ಸಂಖ್ಯಾ ಪಟ್ಟಿ – 3. ಖಾಸಗಿ ರಂಗಕ್ಕೆ ಹಣದ ವರ್ಗಾವಣೆ (ಕೋಟಿ ರೂ.)

ಖಾಸಗಿ ರಂಗದ ಉಳಿತಾಯ	ವಿದೇಶಗಳಲ್ಲಿ ಹೂಡಲು ಹೋಗುವುದು	ಉಳಿಕೆ	ಸಾರ್ವಜನಿಕ ಮೂಲದಿಂದ ಖಾಸಗಿ ರಂಗಕ್ಕೆ	ಖಾಸಗಿರಂಗದಲ್ಲಿ ಒಟ್ಟು ವಿನಿಯೋಗ
9,053	1,866 (20.61%)	7,187 ( )	67,523 ( )	74,710 (100%)

ಯೋಜನೆಯ ಅರ್ಥವೇನು?

ಭಾರತದ ಪಂಚವಾರ್ಷಿಕಯೋಜನೆಗಳ ಒಳತಿರುಳು ಏನೆಂದು ಒಂದು ಉದಾಹರಣೆಯ ಮೂಲಕ ಸುಲಭವಾಗಿ ಅರಿಯಬಹುದು. ಬೆಂಗಳೂರಿನ ಹೊರವಲಯದಲ್ಲಿ ಒಬ್ಬ ಖಾಸಗಿ ಬಂಡವಾಳಗಾರ ಕಾರ್ಖಾನೆಯೊಂದನ್ನು ಸ್ಥಾಪಿಸತೊಡಗುತ್ತಾನೆ ಎಂದಿಟ್ಟುಕೊಳ್ಳೋಣ. ಇದಕ್ಕೆಬೇಕಾಗುವ ಬಂಡವಾಳದ ಶೇ. 25 ಅಥವಾ ಶೇ. 50ರಷ್ಟನ್ನು ಮಾತ್ರ ತಾನೇ ಸ್ವತಃ ಹಾಕುತ್ತಾನೆ. ಉಳಿದ ಶೇ. 75 ಅಥವಾ ಶೇ. 50ರಷ್ಟನ್ನು ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಥವಾ ಯಾವುದೇ ಸಾರ್ವಜನಿಕ ಬ್ಯಾಂಕಿನಿಂದ ಪಡೆಯುತ್ತಾನೆ. (ಇದೇ ಸಾರ್ವಜನಿಕ ಹಣ ಖಾಸಗಿರಂಗಕ್ಕೆ ಹೋಗುವುದು) ಈ ಕಾರ್ಖಾನೆಗೆಹೋಗಲು ರಸ್ತೆನಿರ್ಮಿಸುವುದು, ಬಸ್ ಸಾರಿಗೆ ವ್ಯವಸ್ಥೆಮಾಡುವುದು, ವಿದ್ಯುಚ್ಛಕ್ತಿ ಸರಬರಾಜು ಮಾಡುವುದು, ಸಾರ್ವಜನಿಕ ಸಂಡಾಸ್ ಕಟ್ಟಿಸುವುದು, ನೀರಿನ ಸರಬರಾಜು ಮಾಡುವುದು, ಒಳಚರಂಡಿ ವ್ಯವಸ್ಥೆ, ದವಾಖಾನೆ, ಶಾಲೆ ಸೌಲಭ್ಯಗಳನ್ನು ಏರ್ಪಡಿಸುವುದು ಇವೆಲ್ಲವೂ ಸರಕಾರವು ನಡೆಸುವ ಸಾರ್ವಜನಿಕ ರಂಗದ ಕೆಲಸಗಳು. ಕಾರ್ಖಾನೆ, ಅದರ ಉತ್ಪಾದನೆ, ಲಾಭ, ಎಲ್ಲವೂ ಬಂಡವಾಳಗಾರನದು; ಅಂದರೆ ಖಾಸಗಿರಂಗದ್ದು. ಈ ಸೇವೆಗಳು ಮಾತ್ರ ಸಾರ್ವಜನಿಕ ರಂಗದಲ್ಲಿ, ಸಾರ್ವಜನಿಕ ವೆಚ್ಚದಲ್ಲಿ ನಡೆಯುತ್ತವೆ. ಆದ್ದರಿಂದ ಅಂತಿಮವಾಗಿ ಸಾರ್ವಜನಿಕರಂಗ ಎನ್ನುವುದು ಖಾಸಗಿರಂಗದ ಸೇವೆಯಲ್ಲಿರುವ ಸಾರ್ವತ್ರಿಕವಾಗಿ ಬಂಡವಾಳಶಾಹಿ ಬೆಳವಣಿಗೆಗೆ ಅನುಕೂಲ ಮಾಡಿಕೊಡುವ ಸರಕಾರಿ ಬಂಡವಾಳದ ರಂಗವಾಗಿದೆ.

ಜನಸಾಮಾನ್ಯರ ಸುಲಿಗೆ- ಹಣಸಂಗ್ರಹದ ಪ್ರಮುಖ ವಿಧಾನ

ಈ ಖಾಸಗಿ ಬಂಡವಾಳಶಾಹಿಗೆ ಅನುಗುಣವಾಗಿರುವ ಸಾರ್ವಜನಿಕ ರಂಗದ ಯೋಜನೆಗೆ ಹಣಸಂಗ್ರಹಕ್ಕಾಗಿ ಹಿಂದಿನ ಎಲ್ಲಾ ಯೋಜನೆಗಳಂತೆಯೇ ಜನವಿರೋಧಿ ನೀತಿಗಳನ್ನು ಅನುಸರಿಸಲಾಗುತ್ತದೆ. ಮೊದಲೇ ಹೊರಲಾರದ ಕರಭಾರ ಜನತೆಯ ಮೇಲಿದೆ. ಈಗ ಈ ಭಾರದ ಮೇಲೆ 1.ಮತ್ತೊಂದು ಬಂಡೆಹಾಕಿ ಜನರ ತಲೆ ಜಜ್ಜುವುದು 2. ರೈಲ್ವೆ.ಬಸ್ಸು,ಪೋಸ್ಟ್ ತಂತಿ, ವಿದ್ಯುಚ್ಛಕ್ತಿ, ಆಹಾರ, ನೀರಾವರಿ, ಗೊಬ್ಬರ ಇತ್ಯಾದಿಗಳ ದರಗಳನ್ನು ಏರಿಸಿ ಜನರ ಕತ್ತುಹಿಸುಕುವುದು 3) ಕೊರತೆ ಬಜೆಟ್‌ನಿಂದ ಜನರನ್ನು ಹಣದುಬ್ಬರ ಬೆಲೆಏರಿಕೆಯ ಸಂಕಟದಲ್ಲಿ ನೂಕುವುದು 4. ದೇಶವನ್ನು ಮತ್ತಷ್ಟು ವಿದೇಶಿ ಸಾಲದ ದಾಸ್ಯತ್ವಕ್ಕೆ ತಳ್ಳುವುದು ಈ ನಾಲ್ಕು ಜನವಿರೋಧಿ ಕ್ರಮಗಳಿಂದಲೇ ಯೋಜನೆಗೆ ಬೇಕಾದ ಶೇ. 51.98ರಷ್ಟು ಹಣವನ್ನು ಸಂಗ್ರಹಿಸಲಾಗುತ್ತದೆ.

ಸಾರ್ವಜನಿಕ ಕ್ಷೇತ್ರದ ವೆಚ್ಚಕ್ಕಾಗಿ ಸಾರ್ವಜನಿಕ ಉದ್ಯಮಗಳಿಂದ 9395 ಕೋಟಿ ರೂ. (9.63%) ಸಣ್ಣ ಉಳಿತಾಯಗಳಿಂದ 6463 ಕೋಟಿ ರೂ. (6.62) ರಾಜ್ಯಕ್ಷೇಮ ನಿಧಿಯಿಂದ 3702 ಕೋಟಿ ರೂ. (3.79) ಬರುತ್ತದೆ. ಈ ಮೂಲಗಳನ್ನು ಯಾರೂ ಪ್ರಶ್ನಿಸಬೇಕಾದ್ದಿಲ್ಲ. ಇನ್ನು ಮಾರುಕಟ್ಟೆಯಲ್ಲಿ ಸರಕಾರ ಮತ್ತು ಸಾರ್ವ

ಜನಿಕ ಸಂಸ್ಥೆಗಳು 19,500 ಕೋಟಿ ರೂ. ಸಾಲತೆಗೆಯಲಾಗುತ್ತದೆ. (ಶೇ. 20.00%) ಹಾಗೂ 2722 ಕೋಟಿ ರೂ.ಗಳಷ್ಟನ್ನು (2.79%) ಹಣಕಾಸು ಸಂಸ್ಥೆಗಳಿಂದ ಪಡೆಯಲಾಗುತ್ತದೆ.

ವಿದೇಶಿ ಅವಲಂಬನೆ

ಸಾರ್ವಜನಿಕ ಸಾಲ ಸತತವಾಗಿ ಏರುತ್ತಾ ಹೋಗುತ್ತಿದ್ದರೂ ಆಂತರಿಕ ಸಾಲದ ಮಟ್ಟಿಗೆ ಆತಂಕ ಪಡಬೇಕಾ

ಸಂಖ್ಯಾ ಪಟ್ಟಿ – 4. ಜನವಿರೋಧಿ ಕ್ರಮಗಳಿಂದ ಹಣ ಸಂಗ್ರಹ

(ಕೋಟಿ ರೂ.)

1.	ಈಗಿರುವ ತೆರಿಗೆ (1979-80) ದರದಂತೆ ಬರುವ ಆದಾಯ	14,478
2.	ಹೆಚ್ಚಿನಕರ, ಬಸ್ಸು, ರೈಲ್ವೆ, ಪೋಸ್ಟ್, ತಂತಿ, ಆಹಾರ, ನಿರಾವರಿ, ಗೊಬ್ಬರ ಇತ್ಯಾದಿಗಳ ಬೆಲೆ ಏರಿಸುವುದರಿಂದ	21,302
3.	ಕೊರತೆ ಹಣಕಾಸು	5,000
4.	ವಿದೇಶಿ ಸಾಲ	9,929
	ಒಟ್ಟು	50,709

[ಒಟ್ಟು ಸಾರ್ವಜನಿಕ ರಂಗದ ವೆಚ್ಚ 97,500.* ಇದರಲ್ಲಿ ಮೇಲಿನ ನಾಲ್ಕು ಮೂಲಗಳ ಪ್ರಮಾಣ 51.98%]

ದುದೇನೂ ಇಲ್ಲ. ಆದರೆ ಐದು ಯೋಜನೆಗಳ ನಂತರವೂ ಸಹ ಭಾರತದ ವಿದೇಶಿ ಅವಲಂಬನೆ ಕೊಂಚವೂ ಕಡಿಮೆಯಾಗುತ್ತಿಲ್ಲ. 19 ರಲ್ಲಿ ರಷ್ಟಿದ್ದ ನಮ್ಮ ವಿದೇಶಿಸಾಲ ಡಿಸೆಂಬರ್ 31, 1980ಕ್ಕೆ 13,147 ಕೋಟಿರೂ. ಮುಟ್ಟಿದೆ. ಇಷ್ಟಿದ್ದೂ ಆರನೇ ಯೋಜನೆಯಲ್ಲಿ ಮತ್ತೆ 9929 ಕೋಟಿ ರೂ.ಗಳ ವಿದೇಶಿ ಹಣದ ಮೇಲೆಯೇ ಅವಲಂಬಿಸಿದೆ. ಇದು ನಮ್ಮ ಸ್ವತಂತ್ರ ಮಾತು ನೀಲುವುಗಳಿಗೆ ಕಡಿವಾಣ ಹಾಕುವುದಲ್ಲದೆ, ವಿದೇಶಿ ವ್ಯಾಪಾರದ ಮೇಲೂ ಹಾನಿಕಾರಕ ಪರಿಣಾಮವನ್ನು ಹೊಂದಿದೆ.

ಸಾರ್ವಜನಿಕ ಕ್ಷೇತ್ರಕ್ಕೆ ಹಣ ಸಂಗ್ರಹದ ಕ್ರಮಗಳು

(ಕೋಟಿ ರೂ.ಗಳಲ್ಲಿ)

		ಒಟ್ಟು ಹಣ	ಶೇಕಡಾ ಪ್ರಮಾಣ
1.	ಈಗಿರುವ (1979-80) ತೆರಿಗೆ ದರದಂತೆ ಬರುವ ಆದಾಯ	14,478	14.84
2.	ಸಾರ್ವಜನಿಕ ಉದ್ಯಮಗಳಿಂದ	9,395	9.63
3.	ಸರಕಾರ, ಸಾರ್ವಜನಿಕ ಸಂಸ್ಥೆಗಳು, ಸ್ಥಳೀಯ ಮಂಡಳಿಗಳು ಮಾರುಕಟ್ಟೆಯಲ್ಲಿ ಎತ್ತುವ ಸಾಲ	19,500	20.00
4.	ಸಣ್ಣ ಉಳಿತಾಯ	6,463	6.62
5.	ರಾಜ್ಯ ಕ್ಷೇಮ ನಿಧಿ	3,702	3.79
6.	ಹಣಕಾಸು ಸಂಸ್ಥೆಗಳಿಂದ ಸಾಲ	2,722	2.79
7.	ಇತರೆ	4,009	4.11
8.	ವಿದೇಶಿ ಸಾಲ	9,929	10.18
9.	ವಿದೇಶಿ ವಿನಿಮಯಗಳಿಕೆ	1,000	1.02
10.	ಹೆಚ್ಚಿನ ಕರ, ಬಸ್, ರೈಲ್ವೆ, ತಂತಿ, ಪೋಸ್ಟ್, ಆಹಾರ, ನಿರಾವರಿ ಗೊಬ್ಬರ ಮುಂತಾದವುಗಳ ಬೆಲೆ ಏರಿಕೆಯಿಂದ	21,302	21.84
11.	ಕೊರತೆ ಹಣ ಕಾಸು	5,000	5.12
		97,500*	

[*ಇದರಲ್ಲಿ 1979-80ರ, 13,500 ಕೋಟಿ ರೂ. ವೆಚ್ಚವೂ ಸೇರಿದೆ]

ಕೊರತೆ ಹಣಕಾಸು

ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಇದು ಅನಿವಾರ್ಯವೆಂಬುದೇ ನಮ್ಮ ಯೋಜನಾಕಾರರವಾದವಾಗಿದೆ. ಆದರೆ ಐದು ಪಂಚವಾರ್ಷಿಕ ಯೋಜನೆಗಳಾದರೂ ಕೊರತೆಯ ಪ್ರಮಾಣ ಕಡಿಮೆಯಾಗುತ್ತಿಲ್ಲ. ಯೋಜನೆಯು ಯಶಸ್ವಿಯಾಗಿ ಕಾರ್ಯಗತವಾಗಲು ಹಣದುಬ್ಬರವಿರದಂತಹ ಸ್ಥಿತಿ ಅವಶ್ಯಕ ಎಂದು ಹೇಳುತ್ತಲೇ 5,000 ಕೋಟಿ ರೂ. ಕೊರತೆಹಣಕಾಸನ್ನು ಯೋಜಿಸಲಾಗಿದೆ. ಸಾಮಾನ್ಯವಾಗಿ ಪ್ರತಿಯೊಂದು ಪಂಚವಾರ್ಷಿಕಯೋಜನೆಗಳ ಕೊನೆಯಲ್ಲೂ ಕೊರತೆಯು ಮೊದಲು ಅಂದಾಜು ಮಾಡಿದುದಕ್ಕಿಂತ ಜಾಸ್ತಿಯಾಗುತ್ತದೆ.

ವಿದೇಶಿಸಾಲ, ಕೊರತೆ ಹಣಕಾಸುಗಳು ಸಾಕಾಗದೆ 21302 (21.84%) ಕೋಟಿರೂ. ಯಷ್ಟನ್ನು ಹೆಚ್ಚಿನ ಹಣ ಸಂಗ್ರಹ ಮಾಡುವುದರಿಂದ ಸೇರಿಸಲಾಗುವುದೆಂದು ಹೇಳಲಾಗಿದೆ. ಇದರಲ್ಲಿ 12,290ಕೋಟಿರೂ. ಕೇಂದ್ರ ಸರಕಾರವೂ, 9012ಕೋಟಿರೂ. ರಾಜ್ಯ ಸರಕಾರಗಳೂ ಸಂಗ್ರಹಮಾಡತಕ್ಕದ್ದು. ಈ ಪಾಟಿ ಹೆಚ್ಚಿನ ಹಣ ಸಂಗ್ರಹಕ್ಕೆ "ಅನೇಕ ಕಠಿಣ ನಿರ್ಣಯಗಳು" ಅವಶ್ಯಕ ಎಂದು ಹೇಳಲಾಗಿದೆ. ಈ ಕಠಿಣ ಕ್ರಮಗಳು ಯಾವುವು ಎಂದರೆ:

ಮತ್ತಷ್ಟು ಕರಭಾರ

ಕೇಂದ್ರದ 12290 ಕೋಟಿ ರೂ. ಹೆಚ್ಚಿನ ಹಣ ಸಂಗ್ರಹದಲ್ಲಿ 5140 ಕೋಟಿ ರೂ.ಗಳನ್ನು ಹೊಸಕರಗಳನ್ನು ಹಾಕುವುದರ ಮೂಲಕ, ಕರ ತಪ್ಪಿಸುವುದನ್ನು ತಡೆಯುವುದರ ಮೂಲಕ,ಹಾಗೂ ಹಳ್ಳಿಯ ಶ್ರೀಮಂತ ರೈತವರ್ಗದ ಹೆಚ್ಚುವರಿಯ ಭಾಗವೊಂದನ್ನು ಸಂಗ್ರಹಿಸುವುದರ ಮೂಲಕ ಜಮಾಯಿಸಲಾಗುವುದೆಂದು ಹೇಳಲಾಗಿದೆ. ಪ್ರತ್ಯಕ್ಷ ಕರಗಳನ್ನು ಹಾಕುವುದಕ್ಕೆ ಅಥವಾ ಹೆಚ್ಚಿಸುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಈಗಿನ ಕರಭಾರದಿಂದ ಜನತೆಗೆ ಏನೂ ಪರಿಹಾರ ನೀಡಲಾಗಿಲ್ಲ. ಅಲ್ಲದೆ ತೆರಿಗೆಯ ಪ್ರಮಾಣ ನಮ್ಮ ರಾಷ್ಟ್ರೀಯ ಉತ್ಪನ್ನದ ಶೇ. 20ರಷ್ಟಾಗಿದೆಯೆಂದು ಯೋಜನೆಯಲ್ಲೇ ಹೇಳಲಾಗಿದ್ದರೂ ಜನಸಾಮಾನ್ಯರ ಮೇಲೆ ಹೊಸ ಕರಗಳನ್ನು ಹಾಕಲಾಗುವುದಿಲ್ಲವೆನ್ನುವ ಭರವಸೆ ಯೋಜನೆಯಲ್ಲಿಲ್ಲ.

ಇನ್ನು 3250 ಕೋಟಿರೂ.ಗಳನ್ನು ಸರ್ಕಾರವು ಕೊಡುತ್ತಿದ್ದ ಸಬ್ಸಿಡಿಗಳನ್ನು ಕಡಿಮೆಗೊಳಿಸುವುದರ ಮೂಲಕ ಉಳಿಸಬೇಕೆಂದಿದೆ. ಮುಖ್ಯವಾಗಿ ಆಹಾರ, ರಾಸಾಯನಿಕ ಗೊಬ್ಬರ, ಹಾಗೂ ನಿರ್ಯಾತಗಳಿಗೆ ಸಬ್ಸಿಡಿಗಳನ್ನು ನೀಡಲಾಗುತ್ತಿದೆ. 1975-76ರಲ್ಲಿ ಈ ಸಬ್ಸಿಡಿ 470 ಕೋಟಿ ರೂ.ಗಳಷ್ಟಿದ್ದದ್ದು, 1979-80ರಲ್ಲಿ 1860 ಕೋಟಿ ರೂ.ಗಳಷ್ಟಾಯಿತು. ಈ ದರದಲ್ಲಿಯೇ ಹೋದರೆ ಆರನೇ ಯೋಜನಾ ಅವಧಿಯಲ್ಲಿ 12,400 ರೂ.ಗಳ ಸಬ್ಸಿಡಿ ನೀಡಬೇಕಾಗುತ್ತದೆ.

ಆಹಾರಧಾನ್ಯಗಳ ಬೆಲೆಏರಿಕೆ

ರೈತರಿಗೆ ಉತ್ತೇಜನ ನೀಡುವುದರ ಸಲುವಾಗಿ ಧಾನ್ಯ ಖರೀದಿಯ ಬೆಲೆಗಳನ್ನು ಏರಿಸುವುದು ಅವಶ್ಯಕವಾಗಬಹುದೆಂದು ಯೋಜನೆಯಲ್ಲಿ ಹೇಳಲಾಗಿದೆ. ಆದರೆ ಹಾಗೆ ಏರಿಸಿದ ಬೆಲೆಗೆ ಸಬ್ಸಿಡಿ ನೀಡಿ ಜೀವನದ ಮೂಲಭೂತ ಅವಶ್ಯಕತೆಯಾದ ಆಹಾರಧಾನ್ಯಗಳನ್ನು ಜನಸಾಮಾನ್ಯರಿಗೆ ಸುಲಭ ದರದಲ್ಲಿ ಒದಗಿಸುವುದರ ಬದಲು, ಅವುಗಳ ಬೆಲೆಗಳನ್ನು ಏರಿಸಿ ಸಬ್ಸಿಡಿ ಕಡಿತಗೊಳಿಸುವುದನ್ನು ಯೋಜಿಸಲಾಗಿದೆ.

ರಾಸಾಯನಿಕ ಗೊಬ್ಬರಗಳ ಬೆಲೆಏರಿಕೆ

ಅದೇ ರೀತಿ ರಾಸಾಯನಿಕ ಗೊಬ್ಬರಗಳ ಮಾರಾಟದ ಬೆಲೆಯನ್ನು ಏರಿಸಿ ನೀಡುತ್ತಿದ್ದ ಸಬ್ಸಿಡಿಯನ್ನು ಕಡಿತಗೊಳಿಸಲು ಹೇಳಲಾಗಿದೆ.

ಆದರೆ ಬಂಡವಾಳಗಾರರಿಗೆ ನಿರ್ಯಾತಕ್ಕಾಗಿ ಕೊಡುತ್ತಿದ್ದ ಸಬ್ಸಿಡಿಯಲ್ಲಿ ಏನೂ ಕಡಿತವಿಲ್ಲ.

ಆಡಳಿತ,ಸರಕಿನ ಬೆಲೆಏರಿಕೆ ಮುಂತಾದ ಕ್ರಮಗಳ ಮೂಲಕ ಸುಮಾರು 1000 ಕೋಟಿ ರೂ.ಗಳ ಹಣವನ್ನು ಸಂಗ್ರಹಿಸಲಾಗುವುದೆಂದು ಹೇಳಲಾಗಿದೆ.

ರಾಜ್ಯಗಳು ಒಟ್ಟಾಗಿ 9012 ಕೋಟಿ ರೂ. ಹೆಚ್ಚಿನ ಹಣ ಸಂಗ್ರಹ

ಹೊಸಕರ, ಆಹಾರ ಮತ್ತು ಗೊಬ್ಬರಗಳ ಬೆಲೆ ಏರಿಕೆಯಿಂದಲ್ಲದೆ 3900 ಕೋಟಿರೂ.ಗಳನ್ನು ಸಾರ್ವಜನಿಕ ರಂಗದ ಆಂತರಿಕ ಮೂಲಗಳಿಂದ ಸಂಗ್ರಹಿಸಲಾಗುವುದೆಂದು ಹೇಳಲಾಗಿದೆ. ಈ ಆಂತರಿಕ ಮೂಲಗಳು ಯಾವುವು ಎಂದರೆ :

ರೈಲ್ವೆ, ಅಂಚೆ, ತಂತಿ ಇತ್ಯಾದಿಗಳು ತುಟ್ಟಿ

ಕೋಲ್ ಇಂಡಿಯಾ ಸಂಸ್ಥೆ ವರ್ಷದಿಂದ ವರ್ಷಕ್ಕೆ ಹೆಚ್ಚಿನ ನಷ್ಟವನ್ನು ಅನುಭವಿಸುತ್ತಿದೆಯೆಂದೂ ಈ ನಷ್ಟವನ್ನು ಸರಿದೂಗಿಸುವುದಕ್ಕಾಗಿ ಕಲ್ಲಿದ್ದಲಿನ ಬೆಲೆಏರಿಸಿ 500 ಕೋಟಿ ರೂ.ಗಳ ಹೆಚ್ಚಿನ ಹಣವನ್ನು ಸಂಗ್ರಹಿಸಲಾಗುತ್ತದೆ. ಕಲ್ಲಿದ್ದಲನ್ನು ಬಳಸುವ ರೈಲ್ವೆ, ಥರ್ಮಲ್ ಘಟಕ ಇತ್ಯಾದಿ ಉದ್ಯಮಗಳ ಮೇಲೆ ಇದು ಪ್ರಭಾವ ಬೀರುತ್ತದೆ ಹಾಗೂ ತಿರುಗಿ ಅವುಗಳಲ್ಲೂ ಬೆಲೆಏರಿಕೆಗೆ ಕಾರಣವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಅದೇ ರೀತಿ ರೈಲ್ವೆ ದರಗಳನ್ನು ಏರಿಸಿ 1200 ಕೋಟಿ ರೂ.ಗಳನ್ನೂ, ಅಂಚೆ, ಟೆಲಿಫೋನ್, ಟೆಲಿಗ್ರಾಂ ದರಗಳನ್ನು ಏರಿಸಿ 200 ಕೋಟಿ ರೂ.ಗಳನ್ನು ಸಂಗ್ರಹಿಸಲು ನಿರ್ಧರಿಸಲಾಗಿದೆ. ಈಗಾಗಲೇ 1979-80ರಲ್ಲಿ ಇವುಗಳ ದರಏರಿಕೆಯಿಂದ 562 ಕೋಟಿ ರೂ.ಗಳ ಸಂಗ್ರಹವಾಗುತ್ತದೆ. ಇನ್ನುಳಿದ 838 ಕೋಟಿ ರೂ.ಗಳ ಸಂಗ್ರಹಕ್ಕಾಗಿ ಉಳಿದ ನಾಲ್ಕು ವರ್ಷಗಳಲ್ಲಿ ಮತ್ತೆ ಇವುಗಳ ದರಗಳನ್ನು ಏರಿಸಲಾಗುವುದು.

ಇದೇ ರೀತಿ ಇತರೆ ಸಾರ್ವಜನಿಕ ರಂಗದ ಕೈಗಾರಿಕೆಗಳಲ್ಲಿ ಸಮರ್ಥ ಮಾಡಬೇಕು. ರಾಜ್ಯ ವಿದ್ಯುಚ್ಛಕ್ತಿ ಮಂಡಳಿಗಳು 1979-80ರಲ್ಲಿ 440 ಕೋಟಿ ರೂ.ಗಳಷ್ಟು ನಷ್ಟವನ್ನು ಅನುಭವಿಸಿವೆ. ಈ ದರದಲ್ಲೇ ಹೋದರೆ ಯೋಜನಾ ಅವಧಿಯಲ್ಲಿ 4400 ಕೋಟಿ ರೂ. ಹಾನಿಯಾಗುತ್ತದೆಯೆಂದು ಅಂದಾಜುಮಾಡಲಾಗಿದೆ. ಇದರಲ್ಲಿ ಶೇ. 80ರಷ್ಟು ಹಾನಿಯನ್ನು ತಡೆದು 3500 ಕೋಟಿ ರೂ.ಗಳ ಹಣವನ್ನು ಯೋಜನೆಗಾಗಿ ಸಂಗ್ರಹಿಸಲಾಗುವುದೆಂದು ಹೇಳಲಾಗಿದೆ. ಆದರೆ ಈಪಾಟಿ ಹಾನಿಯಾಗುತ್ತಿರುವ ಮೂಲ ಕಾರಣವನ್ನಾಗಲಿ, ಅದನ್ನು ತೊಡೆದುಹಾಕುವ ಬಗೆಯಾಗಲಿ ಯೋಜನೆಯಲ್ಲಿ ಹೇಳಿಲ್ಲ. ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ತೀರಾ ಕಡಿಮೆದರದಲ್ಲಿ ವಿದ್ಯುತ್ ಸರಬರಾಜು ಮಾಡುವುದು ಈಪಾಟಿಯ ಹಾನಿಗೆ ಕಾರಣಗಳಲ್ಲೊಂದು. ಉದಾಹರಣೆಗೆ ಕರ್ನಾಟಕ ರಾಜ್ಯದಲ್ಲಿ ಉತ್ಪತ್ತಿಯಾದ ಶೇ. 69ರಷ್ಟು ವಿದ್ಯುತನ್ನು ದೊಡ್ಡ ದೊಡ್ಡ ಕೈಗಾರಿಕೆಗಳೇ ಬಳಸುತ್ತವೆ. ಪ್ರತಿ ಯೂನಿಟ್ ವಿದ್ಯುತ್ತಿನ ಉತ್ಪಾದನಾ ಖರ್ಚು ಸುಮಾರು 15 ಪೈಸೆಗಳಷ್ಟಾಗುತ್ತೆ. ಕೇರಳದಿಂದ ನಾವು ತರಿಸುವ ವಿದ್ಯುತ್ತಿಗೆ ಯೂನಿಟಿಗೆ 28 ಪೈಸೆ ಕೊಡಲಾಗುವುದು. ಆದರೂ ಕೆನಡಾ ದೇಶದ ಬಹುರಾಷ್ಟ್ರೀಯ ಕಂಪನಿಗೆ ಸೇರಿದ ಬೆಳಗಾವಿಯ ಇಂಡಾಲ್ ಅಲ್ಯೂಮಿನಿಯಂ ಕಂಪನಿಗೆ ಯೂನಿಟಿಗೆ 8 ಪೈಸೆಯಂತೆ ನೀಡಲಾಗುತ್ತಿದೆ. ಇದೇರೀತಿ ಎಲ್ಲ ಬಂಡವಾಳಶಾಹಿಗಳಿಗೂ ಸಹ. ಆದರೆ ಈ ಸವಲತ್ತನ್ನು ತೆಗೆದುಹಾಕುವ ಕ್ರಮ ಸರಕಾರ ಎಂದೂ ಕೈಗೊಂಡಿಲ್ಲ, ಕೈಗೊಳ್ಳುವುದೂ ಇಲ್ಲ. ಅಲ್ಲದೆ ವಿದ್ಯುಚ್ಛಕ್ತಿ ಮಂಡಳಿಗಳಲ್ಲಿ ತುಂಬಿಕೊಂಡಿರುವ ಭ್ರಷ್ಟ ರಾಜಕಾರಣಿಗಳನ್ನು ಬಯಲಿಗೆಳೆಯುವುದೂ ಇಲ್ಲ. ಹೀಗಾದಾಗ, ಇನ್ನೂ ಜನಸಾಮಾನ್ಯರು ಬಳಸುವ ವಿದ್ಯುಚ್ಛಕ್ತಿಯ ಬೆಲೆಯನ್ನು ಏರಿಸುವುದೇ ಈ ಹಣ ಸಂಗ್ರಹದ ದಾರಿಯಾಗುತ್ತದೆ.

ಬಸ್ಸುದರ ಹೆಚ್ಚಳ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಂದ 1378 ಕೋಟಿ ರೂ. ಹೆಚ್ಚಿನ ಸಂಗ್ರಹ ಯೋಜಿಸಲಾಗಿದೆ. ಈಗಾಗಲೇ ಪ್ರಯಾಣದ ದರ ಸಾಕಷ್ಟು ತುಟ್ಟಿಯಾಗಿದೆ. 1979-80 ರಲ್ಲಿಯೇ ಪ್ರಯಾಣದರ ಏರಿಕೆಯಿಂದ 825 ಕೋಟಿ ರೂ.ಗಳ ಹಣವನ್ನು ಸಂಗ್ರಹಿಸಲಾಗುತ್ತಿದೆ. ಇನ್ನುಳಿದ ಬಾಕಿ ಹಣವನ್ನು ಮತ್ತೆ ನಾಲ್ಕು ವರ್ಷಗಳಲ್ಲಿ ದರಏರಿಸಿ ಬಸ್‌ಪ್ರಯಾಣವನ್ನು ಅಸಾಧ್ಯವಾಗಿಸುವಂತೆ ಮಾಡಲಾಗುತ್ತದೆ. ಈ ಏರಿಕೆಯ ಜೊತೆಗೆ ಪೆಟ್ರೋಲ್, ಡೀಸೆಲ್‌ಗಳ ಬೆಲೆಗಳು ಏರಿದವೆಂದು ಮತ್ತಷ್ಟು ದರಏರಿಸುವುದು ಇದ್ದೇ ಇದೆ.

ನೀರಾವರಿ ದರ ಏರಿಕೆ

ನೀರಾವರಿ ಪ್ರದೇಶದಲ್ಲಿ ಈಗಿರುವ ನೀರಾವರಿ ದರದ ಪ್ರಮಾಣವೇ

(19ನೇ ಪುಟ ನೋಡಿ)

ಸ್ವಾತಂತ್ರ್ಯಪೂರ್ವಕಾಲದ ಕಾರ್ಮಿಕ ಹೋರಾಟಗಳು

ಕೆ. ರಾಮಚಂದ್ರನಾಯಕ್

ಕ್ರಿ. ಶ. ೧೬೦೦ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ವ್ಯಾಪಾರಮಾಡುವ ಸನ್ನದನ್ನು ಪಡೆಯಿತು. ಈ ಘಟನೆ ಭಾರತದ ಚರಿತ್ರೆಯಲ್ಲಿ ಗುಣಾತ್ಮಕವಾದ ಬದಲಾವಣೆಯೊಂದನ್ನು ತರುವುದಕ್ಕೆ ನಾಂದಿಯಾಯಿತು.

15-16ನೆಯ ಶತಮಾನದವರೆಗೆ ಈಸ್ಟ್ ಇಂಡಿಯಾ ಕಂಪನಿಯ ತಾಯಿನಾಡಾದ ಇಂಗ್ಲೆಂಡ್ ಕೂಡ ಮೂಲಭೂತವಾಗಿ ಕೃಷಿಪ್ರಧಾನ ದೇಶವಾಗಿತ್ತು. ಬಹುತೇಕ ಜನಸಂಖ್ಯೆಯು ವ್ಯವಸಾಯದಲ್ಲಿ ಅಥವಾ ಗೃಹಕೈಗಾರಿಕೆಗಳಲ್ಲಿ ಜೀವನೋಪಾಯವನ್ನು ಪಡೆಯುತ್ತಿತ್ತು. 17ನೇ ಶತಮಾನದಲ್ಲಿ ಮಾತ್ರ ತಂತ್ರಜ್ಞಾನದಲ್ಲಿ ಬಂದ ಕೆಲವು ಹೊಸ ಬೆಳವಣಿಗೆಗಳು ಜನರ ಉತ್ಪಾದನಾ ವಿಧಾನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದವು. ಆಧುನಿಕ ಕೈಗಾರಿಕಾ ನಾಗರೀಕತೆ ಹುಟ್ಟಿತು. ಬೃಹತ್ ಕಾರ್ಖಾನೆಗಳು ಮೇಲೆದ್ದವು. ಗೃಹಕೈಗಾರಿಕೆಗಳು ನಶಿಸಿದವು. ಸರಕುಗಳ ಉತ್ಪಾದನೆ ಅಭೂತಪೂರ್ವ ಪ್ರಮಾಣದಲ್ಲಿ ಆಗತೊಡಗಿತು. ಹೀಗೆ ಅಧಿಕವಾಗಿ ಉತ್ಪಾದನೆಯಾದ ಸರಕುಗಳಿಗೆ ಹೊಸಹೊಸ ಮಾರುಕಟ್ಟೆಗಳನ್ನು ಹುಡುಕುವುದು ಇಂಗ್ಲೆಂಡಿನ ಕೈಗಾರಿಕಸ್ಥರ ಉದ್ದೇಶವಾಯಿತು. ಈ ಉದ್ದೇಶದ ಫಲವೇ ಈಸ್ಟ್ ಇಂಡಿಯಾ ಕಂಪನಿಯ ಹುಟ್ಟು.

ಈಸ್ಟ್ ಇಂಡಿಯಾ ಕಂಪನಿಯು ಭಾರತದ ಆರ್ಥಿಕ ಶೋಷಣೆಯಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿತು. 1817ರಲ್ಲಿ ಹೌರಾದಲ್ಲಿ ಫೋರ್ಟ್ ಗ್ಲಸ್ಟರ್ ಮಿಲ್ಸ್ (ಇಂದಿನ ಚೌರಿಯಾ ಹತ್ತಿಗಿರಣಿ) ಸ್ಥಾಪಿತವಾಯಿತು. ಬಂಗಾಲದಲ್ಲಿ ಪಾಳೆಗಾರಶಾಹೀವರ್ಗದವರಾದ ದ್ವಾರಕಾನಾಥ ಠಾಕೂರ್ ಮತ್ತು ರಾಜಾರಾಮ್ ಮೋಹನರಾಯ್‌ರವರಂತವರು ಬುದ್ಧಿಜೀವಿಗಳಾಗಿ ಬೆಳೆಯತೊಡಗಿದರು. ಇವರು ಪ್ರಾರಂಭಿಸಿದ ಆಂದೋಳನ ವ್ಯಾಪಾರೋದ್ಯಮಿಗಳಿಗೆ ಸಹಾಯಕವಾದ ವಾತಾವರಣವನ್ನು ಕಟ್ಟುವ ಒಂದು ಸಂಘಟಿತ ಚಳುವಳಿಯ ರೂಪದ್ದಾಗಿತ್ತು. ಬ್ರಿಟಿಷ್ ಬಂಡವಾಳಶಾಹಿಗಳೊಡನೆ ದ್ವಾರಕಾನಾಥ್ ಠಾಕೂರ್‌ರವರ ವಿಫಲ ಪ್ರೇಮ ಪ್ರಯತ್ನ ನಡೆದದ್ದು ಈ ಹಿನ್ನೆಲೆಯಲ್ಲಿ. ದ್ವಾರಕಾನಾಥ್ ಠಾಕೂರ್ ಬ್ರಿಟಿಷ್ ಕೈಗಾರಿಕಾ ಪದ್ಧತಿಯನ್ನು ಭಾರತದಲ್ಲಿ ಅನಾಮತ್ತಾಗಿ ಇಳಿಸುವುದರಿಂದ ಭಾರತದ ಕೈಗಾರೀಕರಣ ಸಾಧ್ಯವೆಂಬ ಭ್ರಮೆಯಲ್ಲಿದ್ದರು. ಅಸ್ಸಾಂ ಟೀ ಕಂಪನಿ ಎಂಬ ಬ್ರಿಟಿಷ್ ಕಂಪನಿಯು ಈಗಾಗಲೇ ಸ್ಥಾಪಿತವಾಗಿತ್ತು. ಟೀ ತೋಟಗಾರಿಕೆಗಾಗಿ ದ್ವಾರಕಾನಾಥ್ ಠಾಕೂರ್‌ರವರು ಬ್ರಿಟಿಷ್ ಬಂಡವಾಳಗಾರರೊಡನೆ ಸೇರಿ ಬೆಂಗಾಲ್ ಟೀ ಅಸೋಸಿಯೇಷನ್ ಅನ್ನು ಸ್ಥಾಪಿಸಿದರು. ಠಾಕೂರ್‌ರವರ ಲಾಭಕೋರತನವು ಬ್ರಿಟಿಷ್ ಬಂಡವಾಳದ ಧಾಳಿಗಳಿಂದ ನುಚ್ಚುನೂರಾಯಿತು. ಆಗ ಅವರಿಗೆ ಉಂಟಾದ ನಿರಾಶೆಯನ್ನು ಅವರು ಹೀಗೆ ವ್ಯಕ್ತಪಡಿಸಿದರು. "ಅವರು (ಬ್ರಿಟಿಷರು) ನಮ್ಮ ದೇಶದ ಜನರ ಜೀವನ, ಸ್ವಾತಂತ್ರ್ಯ, ಐಶ್ವರ್ಯ ಎಲ್ಲವನ್ನೂ ಅಪಹರಿಸುವರು".

ರೈಲ್ವೆ ನಿರ್ಮಾಣ

ಬ್ರಿಟಿಷರ ಆಡಳಿತದ ವಿರುದ್ಧ ಇಷ್ಟು ಹೊತ್ತಿಗಾಗಲೇ ಅತೃಪ್ತಿ ಅಸಮಾಧಾನ ಹೊಗೆಯಾಡತೊಡಗಿದ್ದವು. 1813ರಿಂದ 1857ರವರೆಗೆ ಭಾರತೀಯ ಜನತೆ ಅನೇಕ ಬ್ರಿಟಿಷ್ ವಿರೋಧಿ ಹೋರಾಟಗಳನ್ನು ನಡೆಸಿತು. ಜನರ ಅತೃಪ್ತಿಯನ್ನು ಹತ್ತಿಕ್ಕುವುದು ಬ್ರಿಟಿಷರ ಮುಂದಿನ ಕೆಲಸವಾಯಿತು. ಜನರ ಹೋರಾಟವನ್ನು ದಮನಮಾಡಲು ಮತ್ತು ತಮ್ಮ ವ್ಯಾಪಾರಿ ಲಾಲಸೆಯನ್ನು ಬೆಳೆಸಲು ಸುಲಭ ಸಂಪರ್ಕಸಾಧನವು ಅಗತ್ಯವಾಗಿದ್ದವು. ಇದರ ಪರಿಣಾಮವಾಗಿಯೇ ರೈಲ್ವೆ ನಿರ್ಮಾಣ ಶುರುವಾಗಿದ್ದು. ರೈಲ್ವೆ ನಿರ್ಮಾಣಕ್ಕೆಬೇಕಾದ ಭೂಮಿಯನ್ನು ಪುಕ್ಕಟೆಯಾಗಿ ಭಾರತ ಸರ್ಕಾರ ಈಸ್ಟ್ ಇಂಡಿಯಾ ಕಂಪನಿಗೆ ಬಿಟ್ಟುಕೊಟ್ಟಿತು. ಇದರ ಮೇಲೆ ಹೂಡಿದ ಬಂಡವಾಳಕ್ಕೆ ವರ್ಷಕ್ಕೆ ಶೇ. 5ರಂತೆ ಖಾತರಿ ಆದಾಯವನ್ನು ಕೊಡುವುದಾಗಿ ಘೋಷಿಸಿತು. ಇಷ್ಟೇ ಅಲ್ಲದೆ ಯಾವ ಲಾಭವೂ ಹುಟ್ಟದಿದ್ದರೆ ಆದಾಯ ರೂಪದಲ್ಲಿ ಕೊಡಬೇಕಾದ ಮೊಬಲಗನ್ನು ಸರಕಾರ ತನ್ನ ಬೊಕ್ಕಸದಿಂದ ಕೊಡಬೇಕೆಂದು ತೀರ್ಮಾನಿಸಲಾಯಿತು.

18ನೇ ಶತಮಾನದಲ್ಲಿ ಪರ್ಷಿಯಾದಿಂದ ಪಾರ್ಸಿಗಳು ಭಾರತಕ್ಕೆ ವಲಸೆ ಬಂದರು. ಇವರೇ ಭಾರತದ ಪ್ರಥಮ ಬಂಡವಾಳಶಾಹಿಗಳು. 1817ರಲ್ಲಿ ತಲೆಎತ್ತಿದ ಚೌರಿಯಾ ಹತ್ತಿಗಿರಣಿ ಭಾರತದ ಮೊತ್ತಮೊದಲ ಹತ್ತಿಗಿರಣಿ. 1854ರಲ್ಲಿ ಬೊಂಬಾಯಿಯ ತಾರ್ದೇವ್‌ನಲ್ಲಿ ಸ್ಥಾಪಿತವಾದ ಗಿರಣಿಯ ಸ್ಥಾಪಕ ಒಬ್ಬ ಪಾರ್ಸಿ. ಕಲ್ಕತ್ತಾ ಬಳಿಯ ರಿಸ್ರಾದಲ್ಲಿ ಇದೇ ವರುಷ ಒಬ್ಬ ಇಂಗ್ಲಿಷ್‌ನವನು ಪ್ರಥಮ ಸೆಣಬಿನ ಕಾರ್ಖಾನೆಯನ್ನು ಸ್ಥಾಪಿಸಿದನು. ಆದರೂ 1880ರ ವರೆಗೂ ಭಾರತದ ಬಂಡವಾಳವು ಪೂರ್ಣ ಬೆಳವಣಿಗೆಯನ್ನು ಪಡೆದಿರಲಿಲ್ಲ.

ಕಾಂಗ್ರೆಸ್ ಸ್ಥಾಪನೆ

ದೇಶದಲ್ಲಿ ಹತ್ತಿಉರಿಯುತ್ತಿದ್ದ ರಾಜಕೀಯ ಅತೃಪ್ತಿಯ ದುರ್ಲಾಭವನ್ನು ಪಡೆದು ಭಾರತದ ಬೂರ್ಜ್ವಾ ವರ್ಗದ ಹಿತರಕ್ಷಣೆಯನ್ನು ನೆರವೇರಿಸಲು 1885ರಲ್ಲಿ ಒಂದು ಸಂಸ್ಥೆಯು ಅಸ್ತಿತ್ವಕ್ಕೆ ಬಂತು. ಇದೇ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್. ಆಗ ಭಾರತವನ್ನು ಸೇರಿಕೊಂಡಿದ್ದ ಹ್ಯೂಂ ಎಂಬ ಬ್ರಿಟಿಷ್ ಅಧಿಕಾರಶಾಹಿ ಇದರ ಪ್ರತಿಪಾದಕನಾಗಿದ್ದನು. ಆತನು ಸಿಮ್ಲಾದಲ್ಲಿ ಆಗಿನ ಭಾರತದ ವೈಸ್‌ರಾಯ್ ಲಾರ್ಡ್ ಡೆಫರಿನ್‌ರವರನ್ನು ಮತ್ತೆಮತ್ತೆ ಭೇಟಿಯಾಗುತ್ತಿದ್ದನು. ಭಾರತದ ಐಕ್ಯತೆ ಮತ್ತು ಪುನರುತ್ಥಾನ ಇವುಗಳ ನೆಪದಿಂದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಯನ್ನು ಉದ್ದೇಶಿಸಲಾಯಿತು. ಈ ಸಂಸ್ಥೆಗೂ ದೇಶಾಭಿಮಾನಕ್ಕೂ ಏನೇನೂ ಸಂಬಂಧವಿರಲಿಲ್ಲ. ಬ್ರಿಟಿಷರ ಜೊತೆಗೆ ಮೈತ್ರಿಯನ್ನು ವೃದ್ಧಿಗೊಳಿಸಲು ಅದು ಹುಟ್ಟಿಕೊಂಡಿತು. ಈ ಹೊಸ ಸಂಸ್ಥೆಗೆ ಶುಭವನ್ನು ಕೋರುತ್ತಾ ಲಾರ್ಡ್ ಡೆಫರಿನ್ ಹೇಳಿದರು: "ಕಾಂಗ್ರೆಸ್ಸ್, ಬ್ರಿಟಿಷ್ ಮಹಾರಾಣಿಯ ಸುಭದ್ರ ವಿರೋಧ ಪಕ್ಷವಾಗಿರುವುದು". ಕಾಂಗ್ರೆಸ್ಸ ಸ್ಥಾಪನೆಯ ದಿವಸ ಹ್ಯೂಂ ತಾನು ಬ್ರಿಟನ್ನಿನ ಮಹಾರಾಣಿಯ ಪಾದರಕ್ಷೆಗಳ ದಾರವನ್ನು ಬಿಚ್ಚಲೂ ನಾಲಾಯಕ್ಕೆಂದು ಹೇಳಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಇದರ ಜೊತೆಗೆ ಭಾರತದ ಶ್ರೀಮಂತವರ್ಗದ ಬುದ್ಧಿಜೀವಿಗಳ ಸ್ವಾರ್ಥವೂ ಕಾಂಗ್ರೆಸ್ಸಿನ ಹಿಂದಿತ್ತು. ಕಾಂಗ್ರೆಸ್ಸಿನ ಮೊದಲ 10 ಅಧಿವೇಶನಗಳ ಕಾರ್ಯನಡವಳಿಕೆಗಳ ಕಡೆಗೆ ಕಣ್ಣು ಹಾಯಿಸಿದರೆ ಸಾಕು. ಈ ಸಂಸ್ಥೆಯು ಬೂರ್ಜ್ವಾವರ್ಗದ ಭೂಸ್ವಾಮಿಗಳ ಹಾಗೂ ಶ್ರೀಮಂತ ಬುದ್ಧಿಜೀವಿಗಳ ವರ್ಗಹಿತಗಳಿಗೆ ಸತತ ನಿಷ್ಠೆಯನ್ನು ತೋರಿಸಿರುವುದು ಬೆಳಕಿನಷ್ಟೇ ಸ್ಪಷ್ಟ. ಭಾರತದ ಬೂರ್ಜ್ವಾವರ್ಗ ಕಾಂಗ್ರೆಸ್ಸಿನ ಮುಸುಕಿನ ಕೆಳಗೆ ಬ್ರಿಟಿಷ್ ಸರಕಾರದಿಂದ ಅನೇಕ ರಿಯಾಯಿತಿಗಳನ್ನು ಪಡೆದು ಬರಬರುತ್ತಾ ಬಲಿಷ್ಠವಾಯಿತು.

ಪರಿಣಾಮವಾಗಿ1905ರ ಹೊತ್ತಿಗೆ ಹತ್ತಿಗಿರಣಿಗಳ ಸಂಖ್ಯೆ 1880ಕ್ಕೆ ಹೋಲಿಸಿದರೆ ಹತ್ತುಪಟ್ಟು ಹೆಚ್ಚಾಗಿತ್ತು. ಫ್ಯಾಕ್ಟರಿಗಳ ಸಂಖ್ಯೆಯೂ 2688ಕ್ಕೆ ಏರಿತ್ತು. ಈ ಸನ್ನಿವೇಶದಲ್ಲಿ ಟಾಟಾರವರು ಭಾರತದ ಬಂಡವಾಳಶಾಹಿಯ ಬೆಳವಣಿಗೆಯನ್ನು ಮುಂದಿನ ಘಟ್ಟಕ್ಕೆ ಒಯ್ದರು. ಲಂಡನ್‌ನಲ್ಲಿ ಬಂಡವಾಳವನ್ನು ಎತ್ತಲು ಹೋಗಿ ಬರಿಗೈಯಿಂದ ವಾಪಸ್ ಆಗಿದ್ದರು. ಆದರೆ ಸ್ವದೇಶಿ ಚಳುವಳಿ ಹಬ್ಬತೊಡಗಿತ್ತು. ವ್ಯಾಪಕವಾಗಿದ್ದ ರಾಷ್ಟ್ರೀಯ ಭಾವನೆಯ ಸದುಪಯೋಗ ಪಡೆದು ಹೊಸಹೊಸ ಯೋಜನೆಗಳನ್ನು ಟಾಟಾ ರೂಪಿಸಿದರು. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಲ್ಲಿ ಹಣತೊಡಗಿಸಲು ಜನತೆಗೆ ಕರೆಕೊಟ್ಟರು. ಪರಿಣಾಮವಾಗಿ 16,30,000 ಪೌಂಡುಗಳ ಬಂಡವಾಳ ಸಂಚಯಿಸಿತು. 1874ರಲ್ಲಿ ಎಂಪ್ರೆಸ್ಸ್ ಮಿಲ್‌ಗಳನ್ನು ಸ್ಥಾಪಿಸಿದರು. ಅವು ಆ ಕಾಲಕ್ಕೆ ಅತ್ಯಂತ ದೊಡ್ಡ ಮಿಲ್ಲುಗಳಾಗಿದ್ದವು. ಟಾಟಾರವರಿಗೆ ಇನ್ನೊಂದು ಅನುಕೂಲಕರ ಪರಿಸ್ಥಿತಿ ಒದಗಿಬಂತು. ಬ್ರಿಟಿಷ್ ಸರಕಾರ ಅಬಿಸೀನಿಯಾದ ರಾಜನ ವಿರುದ್ಧ ಯುದ್ಧವನ್ನು ಘೋಷಿಸಿತು. ಟಾಟಾರವರು ಸೈನ್ಯ ಸರಬರಾಜು ಇಲಾಖೆಯ ಕಂಟ್ರಾಕ್ಟ್ ತೆಗೆದುಕೊಂಡು ಬಹಳ ದೊಡ್ಡ ಪ್ರಮಾಣದ ಬಂಡವಾಳವನ್ನು ಲಾಭವನ್ನಾಗಿ ಪಡೆದರು. ನಂತರ ಅವರು ಹತ್ತಿಗಿರಣಿಗಳ ಕಡೆಗೆ ಗಮನಹರಿಸಿದರು. ಸೆಂಟ್ರಲ್ ಇಂಡಿಯಾ ಸ್ಪಿನ್ನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಯು ಅಸ್ತಿತ್ವಕ್ಕೆ ಬಂತು. 1877ರ ಜನವರಿ 1 ವಿಕ್ಟೋರಿಯಾ ರಾಣಿ ಭಾರತದ ಚಕ್ರವರ್ತಿನಿಯೆಂದು ಘೋಷಿಸಲಾಯಿತು. ಆ "ಸವಿನೆನಪಿ"ನ ಕುರುಹಾಗಿ ತಮ್ಮ ಫ್ಯಾಕ್ಟರಿಗೆ ಎಂಪ್ರೆಸ್ಸ್ ಮಿಲ್ ಎಂದು ನಾಮಕರಣ ಮಾಡಿದರು.

ಸಂಕ್ಷಿಪ್ತವಾಗಿ ಹೇಳುವುದಾದರೆ 19ನೆಯ ಶತಮಾನದಲ್ಲಿ ಜನ್ಮವೆತ್ತಿದ ಭಾರತದ ಬಂಡವಾಳಶಾಹಿ ಪದ್ಧತಿಯು 20ನೆಯ ಶತಮಾನದ ಹಾದಿಯಲ್ಲಿ ಆಗಲೇ ಪೂರ್ಣ ಯೌವ್ವನಾವಸ್ಥೆಯ ಬೆಳವಣಿಗೆಯನ್ನು ತಲುಪಿತ್ತು.

ಕಾರ್ಮಿಕರ ಉದಯ

ಬ್ರಿಟಿಷ್ ವಸಾಹತುಶಾಹೀ ಪದ್ಧತಿ ಭಾರತದಲ್ಲಿ ನೆಲೆಯೂರಿದ ಮೇಲೆ ಗುಡಿಕೈಗಾರಿಕೆಗಳು ನಾಶವಾಗಿ ಹೋದವು. ಜೊತೆಗೆ ಭೂಮಿಯ ಸಂಬಂಧದಲ್ಲಿ ಖಾಯಂ ಠರಾವಣೆಗಳನ್ನು ತಂದದ್ದರಿಂದ ರೈತರನ್ನು ಒಕ್ಕಲೆಬ್ಬಿಸುವುದು ಮತ್ತು ಭೂಮಾಲೀಕರನ್ನು ಶಾಸನಬದ್ಧ ಒಡೆಯರನ್ನಾಗಿಸುವುದು ವ್ಯಾಪಕವಾಗಿ ನಡೆದವು. ಭಾರತದ ಜನಸಂಖ್ಯೆಯ ಬಹುಪಾಲು ಒಂದು ದೊಡ್ಡ ನೆಲರಹಿತ ಸಮೂಹವಾಗಿ ಮಾರ್ಪಟ್ಟಿತು. ಅವರಲ್ಲಿ ಅನೇಕರು ಲೋಕೋಪಯೋಗಿ ಖಾತೆ ನಡೆಸುತ್ತಿದ್ದ ಹೆದ್ದಾರಿ ಮತ್ತು ರೈಲ್ವೆದಾರಿಗಳ ನಿರ್ಮಾಣದಲ್ಲಿ ಉದ್ಯೋಗ ಪಡೆದರು. ಇವರೇ ಭಾರತದ ಇಂದಿನ ಕಾರ್ಮಿಕವರ್ಗದ ಅಗ್ರಗಾಮಿಗಳು. ಇಷ್ಟೇ ಅಲ್ಲದೆ ಬ್ರಿಟಿಷ್ ವಸಾಹತುಶಾಹಿಗಳು ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಿದರು. ತಮ್ಮ ಕೈಗಾರಿಕೆಗಳಿಗೆ ಶ್ರಮಜೀವಿಗಳ ಅಗತ್ಯವಿದ್ದ ಬೇರೆ ವಸಾಹತುಗಳಿಗೂ ಭಾರತದ ಕಾರ್ಮಿಕರನ್ನು ರವಾನಿಸತೊಡಗಿದರು. ಈ ಮಧ್ಯೆ ಗುಲಾಮಿ ಪದ್ಧತಿ ನಾಶವಾಗಿದ್ದದ್ದು ನಿಷೇಧಗೊಂಡಿದ್ದು ಇನ್ನೊಂದು ಗಮನಾರ್ಹ ಘಟನೆ. ಒಟ್ಟಿನಲ್ಲಿ ಈ ಕಾಲಘಟ್ಟದಲ್ಲಿ ಹುಟ್ಟಿಬಂದ ಜನತೆಯ ವಿಶಾಲ ನಿರ್ವಸಿತ ಸಮೂಹವು ಇಂದಿನ ಕಾರ್ಮಿಕ ವರ್ಗವಾಗಿ ಪರಿವರ್ತನೆ ಹೊಂದಿತು.

ಹೋರಾಟಗಳ ಆರಂಭ

ಭಾರತದ ಟ್ರೇಡ್‌ಯೂನಿಯನ್ ಚಳುವಳಿಯು ಯೂರೋಪಿನ ಮಾದರಿಯಿಂದ ಬಂದದ್ದು ನಿಜ. ಆದರೂ ಪ್ರಾಚೀನ ಭಾರತದ ಮಂಡಲಿ ಪದ್ಧತಿಯಲ್ಲಿ ಇಂದಿನ ಟ್ರೇಡ್‌ಯೂನಿಯನ್ನಿನ ಮೊಳಕೆಗಳಿದ್ದುದನ್ನು ಮರೆಯುವಂತಿಲ್ಲ. ಉದಾಹರಣೆಗೆ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಚಂದ್ರಗುಪ್ತನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ವಿವಿಧ ಮಂಡಲಿಗಳ ಪಾತ್ರವನ್ನು ಕುರಿತು ಹೇಳುತ್ತಾನೆ. ಅದು ಇವತ್ತಿನ ಟ್ರೇಡ್‌ಯೂನಿಯನ್‌ಗಳನ್ನು ನೆನಪಿಸುವುದು ಸಹಜವಾಗಿಯೇ ಇದೆ.

ಭಾರತೀಯ ಕಾರ್ಮಿಕವರ್ಗವು ತನ್ನ ಹೋರಾಟದ ಮುಖ್ಯ ಅಸ್ತ್ರವನ್ನಾಗಿ ಮುಷ್ಕರವನ್ನು ಆರಿಸಿಕೊಂಡಿತು. 1877ರಲ್ಲಿ ಮಿಲ್‌ಗಳ ಕಾರ್ಮಿಕರು ಹೂಡಿದ ಹೋರಾಟವು ಮೊಟ್ಟಮೊದಲ ಕಾರ್ಮಿಕ ಮುಷ್ಕರ. ಈ ಸುಮಾರಿನಲ್ಲೇ ರೈಲ್ವೆ ಕಾರ್ಮಿಕರು ಬಂಗಾಲದಲ್ಲಿ ಮುಷ್ಕರ ಹೂಡಿದರು. 1863ರಲ್ಲಿ ಬೊಂಬಾಯಿಯ ಕ್ಷೌರಿಕರು, 1873ರಲ್ಲಿ ಕಲ್ಕತ್ತಾದ ಕುದುರೆಗಾಡಿ ಚಾಲಕರು, ಇದೇ ವರುಷ ಬೊಂಬಾಯಿಯ ಸರಕಾರೀ ಮುದ್ರಣಾಲಯದ ಕೆಲಸಗಾರರು ಚಳುವಳಿ ಹೂಡಿದರು. ಈ ರೀತಿಯ ಮುಷ್ಕರಗಳು ಮೊದಲು ವಿದೇಶೀ ಉದ್ದಿಮೆಗಳಲ್ಲಿ ಶುರುವಾಗಿ ಆಮೇಲೆ ಖಾಸಗಿ ಉದ್ದಿಮೆಗಳಿಗೆ ಹಬ್ಬಿದ್ದು ಗಮನಾರ್ಹ.

19ನೇ ಶತಮಾನದ ಉತ್ತರಾರ್ಧದಲ್ಲಿ ಬೊಂಬಾಯಿಯ ಹತ್ತಿಬಟ್ಟೆ ಕಾರ್ಮಿಕರು ಕೆಲಸದ ಗಂಟೆಗಳನ್ನು ಕಡಿಮೆಗೊಳಿಸಲು ಮತ್ತು ಹೆಂಗಸರು ಮಕ್ಕಳ ಕೆಲಸದ ಪರಿಸ್ಥಿತಿಯನ್ನು ಸುಧಾರಿಸಲು ಹೋರಾಟ ನಡೆಸಿದರು. ಈ ಕಾಲಘಟ್ಟದಲ್ಲಿ ಕೆಲವು ಜನಸುಧಾರಣಾವಾದಿಗಳು ಗಣನೀಯ

ಪಾತ್ರವಹಿಸಿದರು. ಬಂಗಾಲದ ಭಾಟ್ಪಾ ನಗರದಲ್ಲಿ ಸೆಣಬು ಕಾರ್ಖಾನೆಯ ಕೆಲಸಗಾರರಲ್ಲಿ ಕೆಲವು ಸುಧಾರಣೆಗಳು ಜಾರಿಗೆ ಬಂದವು. ಈ ಹಿನ್ನೆಲೆಯಿಂದ ಬಂದ ಬ್ಯಾನರ್ಜಿ ಇಂಗ್ಲೆಂಡಿಗೆ ಹೋದರು. ಅಲ್ಲಿ ಇಂಗ್ಲೆಂಡಿನ ಕಾರ್ಮಿಕವರ್ಗಕ್ಕೆ ದೊರಕಿದ್ದ ಸೌಕರ್ಯ ಸವಲತ್ತುಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಅವಕಾಶವಾಯಿತು. 1871ರಲ್ಲಿ ಲಂಡನ್ನಿನ ಟೌನ್‌ಹಾಲ್‌ನಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಭಾರತದಲ್ಲಿ ಕಾರ್ಮಿಕರ ಬಗೆಗಿರುವ ಉದಾಸೀನಭಾವ ಮತ್ತು ಸರ್ಕಾರದ ನಿಷ್ಕ್ರಿಯತೆ ಇವುಗಳನ್ನು ಉಲ್ಲೇಖಿಸಿದರು. ದುಡಿಯುವ ಜನರ ಕ್ಲಬ್‌ಗಳನ್ನು ಸ್ಥಾಪಿಸಿದರು. ಇಂಗ್ಲೆಂಡಿನ ಫ್ಯಾಕ್ಟರಿ ಆ್ಯಕ್ಟ್ ಭಾರತಕ್ಕೂ ಬರಬೇಕೆನ್ನುವ ಆಶೆಯನ್ನು ವ್ಯಕ್ತಪಡಿಸಿದರು. ಇತ್ತ ಬೊಂಬಾಯಿಯಲ್ಲಿ ಬ್ರಹ್ಮಸಮಾಜದ ಸಿ. ಎಂ. ಮಜುಂದಾರ್‌ರವರ ನಾಯಕತ್ವದಲ್ಲಿ ಕಾರ್ಮಿಕರ ಸಾಮಾಜಿಕ ಕ್ಷೇಮ ಚಟುವಟಿಕೆಗಳು, ಕಾರ್ಮಿಕರಿಗಾಗಿ ರಾತ್ರಿಶಾಲೆಗಳು ತೆರೆಯಲ್ಪಟ್ಟವು.

ಬೊಂಬಾಯಿಯ ಬಟ್ಟೆಗಿರಣಿ ಮಾಲೀಕರಿಗೆ ಕೂಲಿ ಮತ್ತು ಕಚ್ಚಾ ಮಾಲುಗಳು ಅಗ್ಗವಾಗಿ ಸಿಗುತ್ತಿದ್ದವು. ಇವರಿಗೆ ಸರಿಸಾಟಿ ಆಗಲು ಲ್ಯಾಂಕಾಷೈರ್‌ನ ಮಿಲ್ ಮಾಲೀಕರಿಗೆ ಸಾಧ್ಯವಾಗಿರಲಿಲ್ಲ. ಅವರು ಭಾರತದಲ್ಲಿ ಫ್ಯಾಕ್ಟರಿ ಆ್ಯಕ್ಟ್ ಜಾರಿಗೊಳಿಸಬೇಕೆಂದು ಒತ್ತಾಯವನ್ನು ಹೇರಿದರು. ಈ ಚಳುವಳಿಯ ಲಾಭವನ್ನು ಪಡೆದುಕೊಂಡು ಸೊರಾಬ್ಜಿಯವರು ಭಾರತದಲ್ಲಿ ಫ್ಯಾಕ್ಟರಿ ಆ್ಯಕ್ಟನ್ನು ಜಾರಿಗೊಳಿಸಲು ಬಹಳ ಪ್ರಯತ್ನಿಸಿದರು. 1881ರಲ್ಲಿ ಅದು ಒಂದು ಕಾಯಿದೆಯಾಗಿ ಮಂಜೂರು ಪಡೆಯಿತು. ಇದರ ಅನ್ವಯ ಕೆಲಸದ ಗಂಟೆಗಳು ಕಡಿಮೆಗೊಳಿಸಲ್ಪಟ್ಟು ರಾತ್ರಿವೇಳೆ ಸ್ತ್ರೀಯರ ನೇಮಕಾತಿ ನಿಷಿದ್ಧವಾಯಿತು. ಮತ್ತು ಫ್ಯಾಕ್ಟರಿ ಇನ್‌ಸ್ಪೆಕ್ಟರ್‌ರ ಹುದ್ದೆ ಸೃಷ್ಟಿಯಾಯಿತು. ಬ್ರಿಟನ್ನಿನ ಕಾರ್ಮಿಕರೂ ಕೂಡ ಭಾರತದ ಸಹೋದರರಿಗಾಗಿ ಈ ಕಾಯಿದೆಯನ್ನು ತರುವುದಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದರು.

1890ರಲ್ಲಿ ಬರ್ಲಿನ್‌ನಲ್ಲಿ ನಡೆದ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಮ್ಮೇಳನವು ಭಾರತದ ಕಾರ್ಮಿಕ ಚಳುವಳಿಗೆ ಚಾಲನೆಯನ್ನು ಕೊಟ್ಟಿತು. ಅಲ್ಲಿ ಪ್ರಪಂಚದ ಎಲ್ಲೆಡೆ ಕಾರ್ಮಿಕರ ಪರ ಶಾಸನಗಳನ್ನು ಜಾರಿಗೊಳಿಸುವುದಕ್ಕೆ ಒಂದು ಸಂಘವನ್ನು ರಚಿಸಿದರು. ಚಾಲಕರ ನೇಮಕಾತಿ ನಿಷೇಧ, ಮತ್ತು ಸ್ತ್ರೀಯರ ಸ್ಥಿತಿಗತಿಗಳ ಸುಧಾರಣೆ ಇವುಗಳ ಬಗ್ಗೆ ಸಮ್ಮೇಳನವು ಒಂದು ಠರಾವನ್ನು ಅಂಗೀಕರಿಸಿತು.

1881-1890ರ ನಡುವೆ ಕಾರ್ಮಿಕ ಚಳುವಳಿಯ ಒತ್ತಡ ಹೆಚ್ಚಾಯಿತು. 1890ರಲ್ಲಿ ಬೊಂಬಾಯಿಯಲ್ಲಿ ಅಭೂತಪೂರ್ವವಾದ 10ಸಾವಿರ ಕಾರ್ಮಿಕರ ರ್‍ಯಾಲಿ ನಡೆಯಿತು. 1890ರಲ್ಲಿ ಸರಕಾರ ಒಂದು ಕಮಿಷನನ್ನು ನೇಮಕಮಾಡಿದ್ದು ಈ ಕಾರಣಗಳಿಂದ. 1890ರಿಂದ 1905ರ ಅವಧಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಮುಷ್ಕರಗಳು ನಡೆದು ಕಾರ್ಮಿಕ ವರ್ಗವು ಅನೇಕ ರಿಯಾಯಿತಿಗಳನ್ನು ಗಿಟ್ಟಿಸಿಕೊಂಡಿತು. ಮುಖ್ಯವಾಗಿ ಸ್ತ್ರೀಯರ ಕೆಲಸದ ವೇಳೆಯನ್ನು 11 ಗಂಟೆಗಳಿಗೆ ಮೊಟಕುಗೊಳಿಸಲಾಯಿತು. 9ರಿಂದ 11 ವರುಷದ ಮಕ್ಕಳ ನೇಮಕಾತಿ ನಿಷೇಧಿಸಲ್ಪಟ್ಟಿತು. 1903ರಲ್ಲಿ ಮದ್ರಾಸಿನ ಸರಕಾರಿ ಮುದ್ರಣಾಲಯದ ಕಾರ್ಮಿಕರು, 1905ರಲ್ಲಿ ಕಲ್ಕತ್ತೆಯ ಸರ್ಕಾರಿ ಮುದ್ರಣಾಲಯದ ಕಾರ್ಮಿಕರು ಮುಷ್ಕರಗಳನ್ನು ನಡೆಸಿದರು. ಸಂತೋಷ್‌ಬೋಸ್‌ರವರ ಮುಂದಾಳುತನದಲ್ಲಿ ರೈಲ್ವೆ ನೌಕರರು ಭಾರತದ ರೈಲ್ವೆ ಕಾರ್ಮಿಕರ ಎರಡನೇ ಮುಷ್ಕರವನ್ನು ನಡೆಸಿದರು. ಹಾಗೂ ಬೊಂಬಾಯಿಯ ಫ್ಯಾಕ್ಟರಿ ಕಾರ್ಮಿಕರು ನಡೆಸಿದ ಮುಷ್ಕರಕ್ಕೆ ರೈಲ್ವೆ ಕಾರ್ಮಿಕರು ಬೆಂಬಲದ ಮುಷ್ಕರ ನಡೆಸಿದರು.

1908ರಲ್ಲಿ ಬ್ರಿಟಿಷ್ ಸರಕಾರ ರಾಷ್ಟ್ರೀಯ ಚಳುವಳಿಯ ಹಿರಿಯ ನಾಯಕರಲ್ಲೊಬ್ಬರಾದ ಬಾಲಗಂಗಾಧರ್ ತಿಲಕ್‌ರವರಿಗೆ ಅನೇಕ ವರುಷಗಳ ಕಾಲ ಸಜೆಯನ್ನು ವಿಧಿಸಿತು. ಈ ಕೇಸಿನ ತೀರ್ಮಾನವು ಓದಲ್ಪಟ್ಟಿದ್ದು ರಾತ್ರಿ 11 ಗಂಟೆಗೆ ಬೊಂಬಾಯಿಯ ಹೈಕೋರ್ಟಿನಲ್ಲಿ. ಅದೊಂದು ಚಂಡಮಾರುತದಧಾರಾಕಾರ ಮಳೆಯ ಪ್ರಕ್ಷುಬ್ಧರಾತ್ರಿ. ಕಾರ್ಮಿಕರು ಪ್ರಕೃತಿಯ ಪ್ರಕೋಪವನ್ನಾಗಲೀ, ಬ್ರಿಟಿಷ್ ಕುದುರೆ ಸವಾರ ಪೋಲೀಸ್ ಪಡೆಯನ್ನಾಗಲೀ ಲೆಕ್ಕಿಸದೆ ಸಾವಿರಗಟ್ಟಲೆಯಾಗಿ ಹೈಕೋರ್ಟ್ ಬಳಿ ಜಮಾಯಿಸಿದರು. ಪೋಲೀಸರು ಲಾಠಿ ಏಟುಗಳ ಮಳೆಯನ್ನು ಅವರ ಮೇಲೆ ಸುರಿದರು. ಇದಾದ ನಂತರ ಮಿಲ್ ಕಾರ್ಮಿಕರು ಕೆಲಸ ನಿಲ್ಲಿಸಿದರು. ಹೋರಾಟ ಮುಂದುವರಿಯಿತು. ಶಸ್ತ್ರಪಾಣಿಗಳಾದ ಪೋಲೀಸರು ಮತ್ತು ಸಿಟ್ಟಿನ ಉಂಡೆಗಳಾದ ಕಾರ್ಮಿಕರು ಮುಖಾಮುಖಿಯಾದರು. ಕೆಲವು ಕಡೆ ಕಾರ್ಮಿಕರು ಗೆರಿಲ್ಲಾ ಮಾದರಿಯ ಹೋರಾಟಗಳನ್ನು ನಡೆಸಬೇಕಾಯಿತು. ಈ ಸಂದರ್ಭದಲ್ಲಿ ಕಾರ್ಮಿಕವೀರ ಗಣಪತಿಗೋವಿಂದ್ ವೀರಮೃತ್ಯುವನ್ನು ಅಪ್ಪಿದರು.

1910ರಲ್ಲಿ ಬೊಂಬಾಯಿಯ ಕಾರ್ಮಿಕರು ಕೆಲಸದ ಗಂಟೆಗಳು ಕಡಿಮೆಯಾಗಬೇಕೆಂದು ಒಂದು ಮಹಾನ್ ಮುಷ್ಕರವನ್ನು ಸಂಘಟಿಸಿದರು. ಅದೇ ವರ್ಷ ಕಾಮ್‌ಗಾರ್ ಹಿತಸಭಾ ಮತ್ತು ರಾಷ್ಟ್ರೀಯ ಸೇವಾಸಂಸ್ಥೆಗಳು ಸ್ಥಾಪಿತವಾದವು. ಬ್ರಿಟಿಷ್ ಸರಕಾರವು ಕೆಲಸದ ಗಂಟೆಗಳನ್ನು ಹನ್ನೊಂದಕ್ಕೆ ಇಳಿಸಬೇಕಾಯಿತು.

ಇಪ್ಪತ್ತನೇ ಶತಮಾನದ ಹೊತ್ತಿಗೆ ವಿದ್ಯಾವಂತ ಮಧ್ಯಮವರ್ಗದ ನೌಕರರೊಡನೆ ಟ್ರೇಡ್‌ಯೂನಿಯನ್‌ಗಳು ಬೆಳೆದವು. ಉದಾಹರಣೆಗೆ ಅಂಚೆ ಮತ್ತು ತಂತಿ ನೌಕರರು, ಮತ್ತು ರೈಲ್ವೆ ನೌಕರರು ಟ್ರೇಡ್ ಯೂನಿಯನ್ ಪರಿಧಿಯೊಳಗೆ ಸೇರಿಕೊಂಡರು.

ಒಂದನೇ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷ್ ಸರಕಾರ ಮತ್ತು ಭಾರತದ ಬಂಡವಾಳಗಾರರು ಶರೀಖಾಗುವ ಪ್ರಸಂಗವು ಒದಗಿಬಂದವು. ಭಾರತದ ಬಂಡವಾಳಶಾಹಿಯ ಭಾಗ್ಯದ ಬಾಗಿಲುತೆರೆಯಿತು. ಇಂಗ್ಲೆಂಡಿನ ಫ್ಯಾಕ್ಟರಿಗಳು ಯುದ್ಧದ ಬೇಡಿಕೆಗಳನ್ನು ಪೂರೈಸುವುದರಲ್ಲಿ ಮುಳುಗಿದವು. ಬ್ರಿಟಿಷ್ ಸರಕಾರ ಕೆಲವು ವಲಯಗಳನ್ನು ಭಾರತೀಯ ಬಂಡವಾಳಗಾರರಿಗೆ ತೆರವುಮಾಡಿತು. ಕಾಂಗ್ರೆಸ್ಸಿಗರು ಸಾಮ್ರಾಜ್ಯಶಾಹೀ ಯುದ್ಧವನ್ನು ವಿಮೋಚನಾ ಯುದ್ಧವೆಂದು ಮುಗಿಲಿಗೆ ಏರಿಸಿದರು. ರಾಷ್ಟ್ರೀಯ ಚಳುವಳಿಯ ಗತಿಯನ್ನು ನಿಧಾನಗೊಳಿಸಿದರು.

ಇನ್ನೂ ಕೆಲವು ಅಂತರ್‌ರಾಷ್ಟ್ರೀಯ ಬೆಳವಣಿಗೆಗಳು ಭಾರತದ ಕಾರ್ಮಿಕ ವರ್ಗದ ಅಭಿವೃದ್ಧಿಗೆ ವೇಗವರ್ಧಕವಾಗಿ ಕೆಲಸಮಾಡಿದವು. ರಷ್ಯಾದಲ್ಲಿ ನಡೆದ ಕಾರ್ಮಿಕವರ್ಗದ ಕ್ರಾಂತಿ ಮತ್ತು ಅದರ ಬೆನ್ನಲ್ಲೇ ಬಂದ ಪ್ರಪಂಚದ ವಿವಿಧ ಭಾಗಗಳಲ್ಲಿ ಸಂಭವಿಸಿದ ಕಾರ್ಮಿಕ ಚಳುವಳಿ ಇವುಗಳಲ್ಲಿ ಬಹು ಮುಖ್ಯವಾದವು.

ಮೊದಲ ಟ್ರೇಡ್ ಯೂನಿಯನ್

1917ರಲ್ಲಿ ಅಹಮದಾಬಾದಿನಲ್ಲಿ ನೇಕಾರರ ಒಂದು ಸಂಘ ಇತ್ತು. ಆದರೂ 1918ರಲ್ಲಿ ಬಂದ ಮದರಾಸ್ ಲೇಬರ್ ಯೂನಿಯನ್ ಅನ್ನು ಮೊದಲ ಟ್ರೇಡ್‌ಯೂನಿಯನ್ ಎಂದು ಚರಿತ್ರೆಕಾರರು ಕರೆಯುವುದುಂಟು. ಇದು ಸರಿಯಲ್ಲ. ಇದಕ್ಕೆ ಮೊದಲೇ ಅನೇಕ ಕಡೆ ಟ್ರೇಡ್ ಯೂನಿಯನ್ ಸಂಘಟನೆಗಳಿದ್ದವು. ಬಿ.ಪಿ. ವಾಡಿಯಾ ಈ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಸದಸ್ಯರುಗಳಲ್ಲಿ ಬಹುಪಾಲು ಗಿರಣಿ ಕಾರ್ಮಿಕರಾಗಿದ್ದರೂ ಟ್ರಾಂವೇ ಕಾರ್ಮಿಕರು ಮತ್ತು ರಿಕ್ಷಾಕಾರ್ಮಿಕರೂ ಸಹ ಇದನ್ನು ಸೇರಬಹುದಾಗಿತ್ತು. 1920ರಲ್ಲಿ ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ನಿರತರಾಗಿರುವುದರಿಂದ ವಾಡಿಯಾರವರ ಮೇಲೆ ಒಂದು ನಿಷೇಧಾಜ್ಞೆಯನ್ನು ಜಾರಿಪಡಿಸಲಾಯಿತು. 1918-20ರ ನಡುವೆ ಕಾರ್ಮಿಕರ ಚಳುವಳಿ ಮತ್ತು ಟ್ರೇಡ್‌ಯೂನಿಯನ್ ಸ್ಥಾಪನೆಯು ಒಂದು ಪರ್ವಕಾಲವಾಗಿತ್ತು. ದೇಶದಾದ್ಯಂತ ಕಾರ್ಮಿಕ ಚಳುವಳಿಯು ಹಬ್ಬುತ್ತಿತ್ತು. ಜಮ್‌ಷೆಡ್‌ಪುರದ ಉಕ್ಕಿನ ಕಾರ್ಖಾನೆಯು ಪ್ರಾರಂಭವಾದಾಗ 35ಸಾವಿರ ಉಕ್ಕಿನ ಕಾರ್ಖಾನೆಯ ಕಾರ್ಮಿಕರ ಮುಷ್ಕರವನ್ನು ಹುಟ್ಟಡಗಿಸಲು ಸರಕಾರ ಸಶಸ್ತ್ರ ಪೋಲೀಸ್ ಮತ್ತು ಮಿಲಿಟರಿಯನ್ನು ಕರೆತಂದಿತು. ಆದರೂ ಕಂಪನಿ ಅಂತಿಮವಾಗಿ ಸೋಲಬೇಕಾಯಿತು. ಜಮ್‌ಷೆಡ್‌ಪುರ ಲೇಬರ್ ಅಸೋಸಿಯೇಷನ್ ಎಸ್. ಎನ್. ಹಾಲ್ದಾರ್ ರವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಯಿತು. ಬಳಿಕ ಟ್ರೇಡ್‌ಯೂನಿಯನ್ನಿನ ಸ್ಥಳೀಯ ಫೆಡರೇಷನ್ ಮತ್ತು ರಾಷ್ಟ್ರೀಯ ಫೆಡರೇಷನ್ ಸ್ಥಾಪನೆಗೊಂಡವು. ಮಿಲ್ ಕೆಲಸಗಾರರ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ, ಪ್ರಾವಿಡೆಂಟ್‌ಫಂಡ್ ಮತ್ತು ಸರಕಾರಿ ಸಾಲ ಸಂಘಗಳ ಸ್ಥಾಪನೆ ಈ ಬೇಡಿಕೆಗಳು ಅಂಗೀಕೃತವಾದವು.

1919ರ ಸುಧಾರಣಾ ಮಸೂದೆಯ ಅನುಸಾರ ಪ್ರಾಂತೀಯ ಮತ್ತು ಕೇಂದ್ರ ಶಾಸನ ಸಭೆಗಳಿಗೆ ಕಾರ್ಮಿಕ ಪ್ರತಿನಿಧಿಗಳನ್ನು ಕಳುಹಿಸುವ ಅವಕಾಶ ಉಂಟಾಯಿತು. ಆದರೆ 140 ಜನ ಸದಸ್ಯರ ಪೈಕಿ ಕಾರ್ಮಿಕರಿಗೆ ಒಂದು ಸ್ಥಾನವನ್ನೂ ಮಿಲ್ ಮಾಲೀಕರಿಗೆ 20 ಸ್ಥಾನಗಳನ್ನೂ ನೀಡಲಾಗಿತ್ತು. ಮೇಲಾಗಿ ಕಾರ್ಮಿಕ ಪ್ರತಿನಿಧಿಗಳನ್ನೂ ಸರಕಾರವೇ ನಾಮಕರಣ ಮಾಡುವುದು ಬೇರೆ ಇತ್ತು. ಇದು ಕಾರ್ಮಿಕರಿಗೆ ಒಪ್ಪಿಗೆಯಾಗಲಿಲ್ಲ.

1920ರಲ್ಲಿ ಸುಮಾರು 15ಲಕ್ಷ ಕಾರ್ಮಿಕರನ್ನೊಳಗೊಂಡ ಇನ್ನೂರು ಮುಷ್ಕರಗಳು ನಡೆದವು. ಇವುಗಳಲ್ಲಿ ಮುಖ್ಯವಾದವು ಬೊಂಬಾಯಿಯ ಸಾರ್ವತ್ರಿಕ ಮುಷ್ಕರ, ಪಂಜಾಬಿನ ಮಹಾ ರೈಲ್ವೆ ಮುಷ್ಕರ. ರೈಲ್ವೆ ಅಧಿಕಾರಿಗಳಾದರೂ ಯೂನಿಯನ್ನಿಗೆ ಮಾನ್ಯತೆಯನ್ನು ಕೊಡಲು ಒಪ್ಪಲಿಲ್ಲ. ಆದಕ್ಕಾಗಿ ಮತ್ತೆ ಮುಷ್ಕರ ನಿರತರಾದ ಕಾರ್ಮಿಕರಿಗೆ ರೈಲ್ವೆ ಅಧಿಕಾರಿಗಳು ಚಿತ್ರಹಿಂಸೆ ಕೊಟ್ಟರು. ಕಾರ್ಮಿಕರನ್ನು ಮನೆಯಿಂದ ಅಟ್ಟುವುದು, ಅವರ ಒಡವೆ ವಸ್ತ್ರಗಳನ್ನು ಲೂಟಿ ಮಾಡುವುದು ನಡೆಯಿತು. ಕೊನೆಗೂ ಕಾರ್ಮಿಕರೇ ಗೆದ್ದರು. ಮದ್ರಾಸಿನ ಎಲೆಕ್ಟ್ರಿಕಲ್ ಸಪ್ಲೈ ಕಾರ್ಪೋರೇಷನ್ ಮತ್ತು ಎಣ್ಣೆ ಕಂಪೆನಿಯ ಕಾರ್ಮಿಕರು ಹಾಗೂ ಅಸ್ಸಾಂನ ಟೀ ಕಂಪನಿಯ ಕಾರ್ಮಿಕರು ಈ ಸುಮಾರಿನಲ್ಲೇ ಮುಷ್ಕರ ಹೂಡಿದರು.

ಅಸ್ಸಾಂನ ಮುಷ್ಕರವು ಭಾರತದ ಮೊದಲ ತೋಟ ಕಾರ್ಮಿಕರ ಮುಷ್ಕರವಾಗಿದೆ. 1917-1920ರವರೆಗೆ ವೇತನ ಹೆಚ್ಚಳ, ಕೆಲಸದ ಗಂಟೆಗಳ ಕಡಿತ, ಬೋನಸ್ ಗ್ರಾಚುಯಿಟಿ ಈ ಬೇಡಿಕೆಗಳಲ್ಲದೆ ಕಾರ್ಮಿಕರು ಸಭೆ ಪ್ರದರ್ಶನಗಳನ್ನು ನಡೆಸುವ ಮೂಲಭೂತ ಬೇಡಿಕೆಗಳನ್ನೂ ಕೂಡ ಮುಂದಿಟ್ಟರು. 1920ರಲ್ಲಿ ಸರ್ಕಾರ ಮತ್ತು ಮಾಲೀಕರು 10 ಗಂಟೆಗಳ ದಿನವನ್ನು ಒಪ್ಪಬೇಕಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಆ ಕಾಲದಲ್ಲಿ ಕಾರ್ಮಿಕ ಮುಷ್ಕರದ ಮೂಸೆಯಲ್ಲಿ ಟ್ರೇಡ್‌ಯೂನಿಯನ್‌ಗಳು ಹುಟ್ಟುತ್ತಿದ್ದವು. ಈ ಟ್ರೇಡ್‌ಯೂನಿಯನ್‌ಗಳು ಪುನಃ ಮುಷ್ಕರದಲ್ಲಿ ತೊಡಗುತ್ತಿದ್ದವು. ಯಾವುದೇ ರಾಷ್ಟ್ರೀಯವಾದಿ ನಾಯಕನೂ ಕಾರ್ಮಿಕ ವರ್ಗದ ಸಂಘಟನೆಗೆ ಕೈಹಾಕಲಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ.

ಐ.ಎಲ್.ಓ.

1917ರಲ್ಲಿ ಲೀಗ್ ಆಫ್ ನೇಷನ್ಸ್ ಆಶ್ರಯದಲ್ಲಿ (ILO) ಐ.ಎಲ್.ಓ. (ಅಂತರ್‌ರಾಷ್ಟ್ರೀಯ ಮಜೂರರ ಸಂಸ್ಥೆ) ಸ್ಥಾಪಿತವಾಯಿತು. 1920ರಲ್ಲಿ ಭಾರತದ ಕೇಂದ್ರ ಟ್ರೇಡ್ ಯೂನಿಯನ್ ಸಂಘಟನೆಯು (ಎ.ಐ.ಟಿ.ಯು.ಸಿ.) ಅಸ್ತಿತ್ವಕ್ಕೆ ಬಂದಿತು.

ಕಾರ್ಮಿಕವರ್ಗ ತನ್ನ ಪ್ರತಿನಿಧಿಗಳನ್ನು ಹೆಸರಿಸುವ ಹಕ್ಕನ್ನು ಬ್ರಿಟಿಷ್ ಸರಕಾರ ಕೊಡಲು ಒಪ್ಪಲಿಲ್ಲ. ಅದು ಎಸ್. ಎಂ. ಜೋಷಿಯವರನ್ನು ಕಾರ್ಮಿಕ ಪ್ರತಿನಿಧಿಗಳನ್ನಾಗಿ ಹೆಸರಿಸಿ ಅವರ ಸಹಾಯಕರನ್ನಾಗಿ ಬಿ. ಪಿ. ವಾಡಿಯಾರವರನ್ನು ನೇಮಿಸಿತು. ವಿವಿಧ ಟ್ರೇಡ್‌ಯೂನಿಯನ್‌ನ ನಾಯಕರು ಇದಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಎಸ್. ಎಂ. ಜೋಷಿಯವರು ತಮ್ಮ ಪ್ರಾತಿನಿಧ್ಯವನ್ನು ಆರಿಸುವುದಕ್ಕೆ ಮತ್ತು ಅಖಿಲಭಾರತ ಮಟ್ಟದ ಕಾರ್ಮಿಕಸಂಘಟನೆಯನ್ನು ಆರಿಸುವುದಕ್ಕೆ ವಿವಿಧ ಟ್ರೇಡ್‌ಯೂನಿಯನ್‌ಗಳ ಸಮ್ಮೇಳನವನ್ನು ಸೇರಿಸಬೇಕೆನ್ನುವ ಸಲಹೆಯನ್ನು ಪತ್ರಿಕಾ ಹೇಳಿಕೆಯ ಮೂಲಕ ನೀಡಿದರು. ತದನುಸಾರ 1920ರ ಜುಲೈ 16ರಂದು ಬೊಂಬಾಯಿಯ ಪರೇಲ್‌ನಲ್ಲಿ ವಿವಿಧ ಟ್ರೇಡ್‌ಯೂನಿಯನ್‌ಗಳ ಪ್ರತಿನಿಧಿಗಳ ಸಮ್ಮೇಳನವು ಸೇರಿತು. ಅಲ್ಲಿ ಅಖಿಲ ಭಾರತ ಟ್ರೇಡ್‌ಯೂನಿಯನ್ ಕಾಂಗ್ರೆಸ್ಸನ್ನು ಸ್ಥಾಪಿಸುವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

ಈ ಸಂಘಟನೆಯ ಉದ್ಘಾಟನಾ ಸಮ್ಮೇಳನವನ್ನು ಸಂಘಟಿಸುವುದಕ್ಕೆ 500 ಸದಸ್ಯರ ಸ್ವಾಗತ ಸಮಿತಿಯು ರಚನೆಯಾಯಿತು. ಆ ಸಮ್ಮೇಳನವು 1920ರ ಅಕ್ಟೋಬರ್‌ನಲ್ಲಿ ಲಾಲಾಲಜಪತರಾಯರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಲ್ಲಿ ನಡೆಯಿತು. ನೆಹರೂ, ಅನ್ನಿಬೆಸೆಂಟ್, ಜಿನ್ನಾ, ಪಟೇಲ್, ಡಾಂಗೆ ಮುಂತಾದ ರಾಷ್ಟ್ರೀಯ ನಾಯಕರು ಬ್ರಿಟಿಷ್ ಟ್ರೇಡ್‌ಯೂನಿಯನ್ ಕಾಂಗ್ರೆಸ್ಸ್‌ನ ಪ್ರತಿನಿಧಿಯಾಗಿ ಕರ್ನಲ್ ಜೆ. ಸಿ. ವೆಡ್ಜ್‌ವುಡ್‌ರವರು ಭಾಗವಹಿಸಿದ್ದರು. ಲಜಪತರಾಯ್‌ರವರು ಭಾರತದ ಕಾರ್ಮಿಕರು ಪ್ರಪಂಚದ ಕಾರ್ಮಿಕರೊಂದಿಗೆ ಐಕ್ಯತೆಯನ್ನು ಸ್ಥಾಪಿಸಬೇಕೆಂಬ ಅಂಶವನ್ನು ಒತ್ತಿ ಹೇಳಿದರು.

10,000 ಜನರ ಮೆರವಣಿಗೆ ಆಯಿತು. ಅನೇಕ ಕಾರ್ಮಿಕಪರ ನಿರ್ಣಯಗಳ ಜೊತೆಗೆ ಫಿಜಿ ದ್ವೀಪದಲ್ಲಿನ ಕಾರ್ಮಿಕರ ಸ್ಥಿತಿಯನ್ನು ಉತ್ತಮಗೊಳಿಸುವ ನಿರ್ಣಯವನ್ನು ಸಮ್ಮೇಳನವು ಅಂಗೀಕರಿಸಿತು. ಲಾಲಾ ಲಜಪತರಾಯರವರನ್ನು ಭಾರತದ ಪ್ರತಿನಿಧಿಗಳಾಗಿ ಐ.ಎಲ್.ಓ.ಗೆ ಕಳಿಸುವ ತೀರ್ಮಾನ ಆಯಿತು. ಅವರ ಸಹಾಯಕರಾಗಿ ಬಿ. ಪಿ. ವಾಡಿಯಾ,

ದಿವಾನ್ ಚಮನ್‌ಲಾಲ್ ಮತ್ತು ಎಸ್. ಎಂ. ಜೋಷಿಯವರನ್ನು ಆರಿಸಲಾಯಿತು.

ಗಾಂಧೀಜಿ ಆಲೋಚನೆ

ಭಾರತ ಸರಕಾರ ಮತ್ತೆ ಜನರ ಚುನಾಯಿತ ಪ್ರತಿನಿಧಿಗಳನ್ನು ಆ ಸಮ್ಮೇಳನಕ್ಕೆ ಕಳುಹಿಸುವುದಕ್ಕೆ ಒಪ್ಪಲಿಲ್ಲ. ಎಲ್ಲಕ್ಕಿಂತ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕ್ರಾಂತಿಕಾರೀ ಕಾರ್ಮಿಕವರ್ಗದ ವಿಚಾರಧಾರೆಯನ್ನು ಹೊಂದಿದ್ದರ ಜೊತೆಜೊತೆಗೆ ಮಾನವತಾವಾದ ಸುಧಾರಣಾವಾದ ಮತ್ತು ಬೂರ್ಜ್ವಾ ಅವಕಾಶವಾದದ ವಕ್ತಾರರು ಈ ಸಂಘಟನೆಯ ಮುಂಚೂಣಿಯಲ್ಲಿದ್ದದ್ದು. ಇದರ ಪರಿಣಾಮವಾಗಿ ಸುಧಾರಣಾವಾದ ಮತ್ತು ಬೂರ್ಜ್ವಾ ದೃಷ್ಟಿಕೋನದ ವಿಷಬೀಜಗಳು ಪ್ರಾರಂಭದಿಂದಲೇ ಕಾರ್ಮಿಕ ಚಳುವಳಿಯಲ್ಲಿ ಊರಲ್ಪಟ್ಟವು.

ಭಾರತದ ಕಾರ್ಮಿಕವರ್ಗದ ಬೆಳವಣಿಗೆಯ ಘಟ್ಟಗಳಲ್ಲಿ ಗಾಂಧೀಜಿ ವಹಿಸಿದ ಪಾತ್ರವನ್ನು ಅರ್ಥಮಾಡಿಕೊಳ್ಳಬೇಕು. ಕಾರ್ಮಿಕ ಚಳುವಳಿಯ ಒಳಕ್ಕೆ ರಾಜಕಾರಣವನ್ನು ಇವರೇ ಮೊದಲು ತೂರಿಸಿದವರು. ಮಿಲ್ ಮಾಲೀಕರ ಸಹಕಾರ ಮತ್ತು ವರ್ಗಮೈತ್ರಿಯ ಬುನಾದಿಯ ಮೇಲೆ ಕಾರ್ಮಿಕಸಂಘವನ್ನು ಕಟ್ಟುವುದು ಇವರ ಹೆಗ್ಗುರಿಯಾಗಿತ್ತು. ಈ ಚೌಕಟ್ಟಿನಲ್ಲೇ 16.450 ಸದಸ್ಯತ್ವ ಹೊಂದಿದ್ದ ಅಹಮದಾಬಾದಿನ ಲೇಬರ್ ಅಸೋಸಿಯೇಷನ್ ಮೂಡಿಬಂದಿತ್ತು. ಸಹಜವಾಗಿಯೇ ಅದು ಎ.ಐ.ಟಿ.ಯು.ಸಿ.ಯನ್ನು ಸೇರಿಕೊಳ್ಳಲಿಲ್ಲ. ಅದು ಮಾಲೀಕರ ಆಶ್ರಯದಲ್ಲೇ ಕೆಲಸಮಾಡುತ್ತಿತ್ತು. ಗಾಂಧೀಜಿಯ ಸಿದ್ಧಾಂತಗಳು ಇಂಡಿಯನ್ ನ್ಯಾಷನಲ್ ಟ್ರೇಡ್‌ಯೂನಿಯನ್ ಕಾಂಗ್ರೆಸ್ ಆಗಿ (ಐ.ಎನ್.ಟಿ.ಯು.ಸಿ.) ಅವತರಿಸಿತು. ತಕ್ಷಣ ಅಹಮದಾಬಾದ್‌ನ ಲೇಬರ್ ಅಸೋಸಿಯೇಷನ್ ಅದರೊಡನೆ ಕರಗಿಹೋಯಿತು. ಗಾಂಧೀಜಿ ಹೇಳುತ್ತಿದ್ದರು "ಸಾಧ್ಯವಾಗಿದ್ದರೆ ಭಾರತದ ಎಲ್ಲಾ ಮಜೂರ ಸಂಘಗಳನ್ನೂ ಅಹಮದಾಬಾದಿನ ಮಾದರಿಯಲ್ಲಿ ಸಂಘಟಿಸುತ್ತಿದ್ದೆ".

1947 ರಲ್ಲಿ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಐ. ಎನ್. ಟಿ. ಯು. ಸಿ.) ಸ್ಥಾಪನೆಯಾಯಿತು. ಕಾರ್ಮಿಕ ವರ್ಗದ ಐಕ್ಯತೆಯನ್ನು ಮುಕ್ಕು ಮಾಡುವ ಗಾಂಧೀಜಿಯವರ ಕನಸು ನನಸಾದ ಘಟನೆ ಅದು.

ಇತಿಹಾಸದ ಪಾಠಗಳು

ಇವತ್ತು ಕಾರ್ಮಿಕವರ್ಗ ಚೂರು ಚೂರಾಗಿದೆ. ಅಸಂಘಟಿತ ಕಾರ್ಮಿಕರನ್ನು ಇಂದಿನ ಕಾರ್ಮಿಕ ವರ್ಗದ ಹೋರಾಟದಲ್ಲಿಅಸ್ಪೃಶ್ಯರಂತೆ ಇಡಲಾಗುತ್ತಿದೆ. ಜನಸಂಖ್ಯೆಯ ಬಹುಪಾಲು ಅಸಂಘಟಿತ ಕಾರ್ಮಿಕವರ್ಗದಲ್ಲೇ ಚದುರಿ ಹೋಗಿದ್ದಾರೆ. ಎಲ್ಲಾ ಕಾರ್ಮಿಕರನ್ನು ಬೆಸೆಯುವ ಐತಿಹಾಸಿಕ ಕರ್ತವ್ಯ ಇನ್ನೂ ಅಭಿಲಾಷೆಯಾಗಿ ಕೂಡ ರೂಪಿತವಾಗಿಲ್ಲ. ಇದು ಸಾಲದೆಂಬಂತೆ ಕಾರ್ಮಿಕ ಹೋರಾಟವೂ ಕೂಡ ಅಂತಿಮ ಉದ್ದೇಶಗಳಿಗೆ ಕುರುಡಾಗಿದೆ. ಹೋರಾಟದ ಸಾಗರಕ್ಕೆ ಹರಿದುಬಂದ ಸುಧಾರಣಾವಾದಿ, ಆದರ್ಶವಾದಿ ಪರಂಪರೆಯ ಕೊಳಕೇ ಇಂದಿನ ಸ್ಥಿತಿಗೆ ಕಾರಣವೆಂದು ಮತ್ತೆ ಹೇಳಬೇಕಾಗಿಲ್ಲ. ಇದರ ಪರಿಣಾಮವಾಗಿಯೇ ಇಂದು ಕಾರ್ಮಿಕ ವರ್ಗ ತನ್ನ ಚಾರಿತ್ರಿಕ ಪಾತ್ರವನ್ನು ಮರೆತು ತಾತ್ಕಾಲಿಕ ರಿಯಾಯಿತಿಗಳನ್ನು ಗಿಟ್ಟಿಸಿಕೊಳ್ಳುವುದರಲ್ಲೇ ತೃಪ್ತಿ ಹೊಂದಿರುವುದು.

(1981 ನೇ ಫೆಬ್ರವರಿ 25 ರಂದು ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ನೌಕರರಿಗಾಗಿ ತುಮಕೂರಿನಲ್ಲಿ ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಯವರು ಏರ್ಪಡಿಸಿದ್ದ ಸ್ವಾತಂತ್ರ್ಯಪೂರ್ವ ಟ್ರೇಡ್ ಯೂನಿಯನ್ ಚಳುವಳಿ ಎಂಬ ವಿಷಯವಾಗಿ ತರಗತಿಯಲ್ಲಿ ಕೊಟ್ಟ ಉಪನ್ಯಾಸ).

●

ಐಕ್ಯರಂಗ ಹೊಸದರ

1981 ಮೇ 24 ರಿಂದ

ಬಿಡಿ ಪ್ರತಿ	:	60ಪೈಸೆ
6 ತಿಂಗಳಿಗೆ	:	15ರೂ.
ವಾರ್ಷಿಕ ಚಂದಾ	:	30ರೂ.

(15ನೇ ಪುಟದಿಂದ)

ಬಂಡವಾಳಶಾಹಿ ಬೆಳವಣಿಗೆಗೆ ಆರನೇ ಯೋಜನೆ

ಜಾಸ್ತಿಯಾಗಿದೆಯೆಂದು ರೈತರು ದಂಗೆ ಏಳುತ್ತಿದ್ದಾರೆ. ಜುಲೈ 1980ರ ನರಗುಂದ ರೈತ ಬಂಡಾಯಕ್ಕೆ ಇದೂ ಸಹ ಒಂದು ಕಾರಣ. ಹೀಗಿದ್ದೂ ನೀರಾವರಿ ದರವನ್ನು ಏರಿಸಿ 325 ಕೋಟಿ ರೂ.ಗಳನ್ನು ಸಂಗ್ರಹಿಸುವುದನ್ನು ಯೋಜನೆಯಲ್ಲಿ ನಿರ್ಧರಿಸಲಾಗಿದೆ.

ಇವೆಲ್ಲವೂ ಅಲ್ಲದೆ ಇನ್ನೂ 3799 ಕೋಟಿ ರೂ.ಗಳನ್ನು ರಾಜ್ಯಸರ್ಕಾರ ಸಂಗ್ರಹಿಸಬೇಕು. ಇದಕ್ಕಾಗಿ ಇನ್ನೆಷ್ಟು ಕರ ಹೇರಬೇಕು, ಇನ್ಯಾವುದರ ದರ ಏರಿಸಬೇಕು ಎನ್ನುವುದು ಬಹುಶಃ ರಾಜ್ಯಸರ್ಕಾರಗಳಿಗೇ ಬಿಟ್ಟಂತಿದೆ.

ಸಂಖ್ಯಾಪಟ್ಟಿ 6 : ಹೆಚ್ಚಿನ ಹಣಸಂಗ್ರಹದ ಕ್ರಮಗಳು

(ಕೋಟಿ ರೂ.ಗಳಲ್ಲಿ)

1.	ಆಹಾರಧಾನ್ಯ ಮತ್ತು ರಾಸಾಯನಿಕ ಗೊಬ್ಬರಗಳ ಬೆಲೆಏರಿಸುವುದರಿಂದ	3250
2.	ಮತ್ತಷ್ಟು ಕರಭಾರ ಹಾಕುವುದರಿಂದ	5140
3.	ಕಲ್ಲಿದ್ದಲಿನ ಬೆಲೆಏರಿಸುವುದರಿಂದ	500
4.	ರೈಲ್ವೆ ಪ್ರಯಾಣದ ದರಏರಿಸುವುದರಿಂದ	1200
5.	ಅಂಚೆ, ತಂತಿ, ದರಗಳನ್ನು ಏರಿಸುವುದರಿಂದ	200
6.	ವಿದ್ಯುಚ್ಛಕ್ತಿ ದರಏರಿಕೆ, ಮತ್ತು ಇತರೆ ಕ್ರಮಗಳಿಂದ	3500
7.	ಬಸ್ ಪ್ರಯಾಣದರ ಏರಿಸುವುದರಿಂದ	1378
8.	ನೀರಾವರಿ ದರ, ಮತ್ತು ಕರಗಳ ಏರಿಕೆಯಿಂದ	325
9.	ಇನ್ನಿತರೆ ವಸ್ತುಗಳ ಬೆಲೆಏರಿಕೆ, ಕರಏರಿಕೆ ಮುಂತಾದವುಗಳಿಂದ	3799

ಹಣ ವಿನಿಯೋಗದ ದಾರಿಗಳು

ಆರನೇ ಯೋಜನೆಯು ಹಿಂದಿನ ಐದು ಯೋಜನೆಗಳ ಸಾಮಾನ್ಯ ಮುಂದುವರಿಕೆಯಾಗಿದೆಯೇ ಹೊರತು ಬೆಳವಣಿಗೆಯ ದಿಕ್ಕಿನಲ್ಲಾಗಲಿ, ಬಂಡವಾಳ ಹೂಡಿಕೆಯ ಆದ್ಯತೆಗಳಲ್ಲಾಗಲಿ, ಬೇರಾವುದೇ ನೀತಿನಿಯಮಗಳಲ್ಲಾಗಲಿ ಬದಲಾವಣೆಗಳಿಲ್ಲ.

ಶೇ. 52.08ರಷ್ಟು ಹಣ ಕೈಗಾರಿಕಾ ರಂಗಕ್ಕೆ ಸಂದಿದರೆ ಶೇ. 18.12 ರಷ್ಟು ಸಾರಿಗೆ, ಸಂಪರ್ಕ, ಆರೋಗ್ಯ, ಶಿಕ್ಷಣ ಇತ್ಯಾದಿ ಸಾಮಾಜಿಕ ಸೇವೆಗಳಿಗೆ ಹೋಗುತ್ತದೆ. ಆದರೆ ಶೇ. 70 ರಷ್ಟು ಜನ ಅವಲಂಬಿಸಿರುವ, ಶೇ.55 ರಷ್ಟು ರಾಷ್ಟ್ರೀಯ ಉತ್ಪನ್ನ ನೀಡುವ ಕೃಷಿ ರಂಗಕ್ಕೆ ಕೇವಲ ಶೇ. 3.3ರಷ್ಟು ಹಣವನ್ನು ಖರ್ಚು ಮಾಡಲಾಗುವುದು. ಇದರ ಜೊತೆಗೆ ಶೇ. 3.11 ರಷ್ಟು ಹಣವನ್ನು ಗ್ರಾಮಾಭಿವೃದ್ಧಿಗಾಗಿ ಎಂದು ವಿನಿಯೋಗಿಸಲಾಗುವುದು. ಶಕ್ತಿಯ ಕೊರತೆಯೇ ಆರ್ಥಿಕ ಬೆಳವಣಿಗೆಗೆ ದೊಡ್ಡ ಅಡಚಣೆ ಎನ್ನುವ ಕಾರಣದಿಂದ ವಿದ್ಯುತ್ ಶಕ್ತಿ, ಕಲ್ಲಿದ್ದಲು, ಪೆಟ್ರೋಲಿಯಂ ಉತ್ಪಾದನೆಗೆ ಶೇ. 15.40 ರಷ್ಟು ಹಣ ಮೀಸಲಾಗಿರಿಸಿರುವುದೂ ಹಾಗೂ ನೀರಾವರಿ ಮತ್ತು ಮಹಾಪೂರ ನಿಯಂತ್ರಣಕ್ಕಾಗಿ ಶೇ. 7.06ರಷ್ಟು ಹಣ ಮೀಸಲಾಗಿರಿಸಿರುವುದೂ ಯೋಗ್ಯವಾದುದಾದರೂ ಕೃಷಿ ಮತ್ತು ಗ್ರಾಮಾಂತರ ರಂಗವನ್ನು ಹಾಗೂ ಸಣ್ಣ ಮತ್ತು ಗೃಹ ಕೈಗಾರಿಕಾ ರಂಗವನ್ನು ಕಡೆಗಣಿಸಲ್ಪಟ್ಟು, ಖಾಸಗಿ ಬಂಡವಾಳಶಾಹಿ ರಂಗವೇ ಸಿಂಹಪಾಲು ಪಡೆದುಕೊಂಡಿದೆ. ಮೂರು ದಶಕಗಳಿಂದ ಅನುಸರಿಸಿದ ಬಂಡವಾಳಶಾಹಿ ಬೆಳವಣಿಗೆಯ ದಾರಿಯಲ್ಲಿಯೇ ಆರನೇ ಯೋಜನೆಯೂ ಸಹ ಇರುವುದರಿಂದ ಬಡತನ ನಿರುದ್ಯೋಗಗಳ ನಿವಾರಣೆಯಲ್ಲಾಗಲಿ ಹಣದುಬ್ಬರ ಬೆಲೆಏರಿಕೆಗಳನ್ನು ತಡೆಗಟ್ಟುವುದಕ್ಕಾಗಲಿ, ಹಳ್ಳಿಯ ಹಿಂದುಳಿದಿರುವಿಕೆ, ಪ್ರಾದೇಶಿಕ ಅಸಮಾನತೆಗಳನ್ನು ತೊಡೆದುಹಾಕಿ, ವೇಗದ ಕೈಗಾರಿಕೀಕರಣ, ಆಧುನೀಕರಣವನ್ನು ಸಾಧಿಸುವುದಕ್ಕಾಗಲಿ, ವಿದೇಶಿ ಅವಲಂಬನೆಯನ್ನು ಕಡಿಮೆಗೊಳಿಸಿ, ಸ್ವಾವಲಂಬಿತವಾಗುವುದಕ್ಕಾಗಲಿ, ವಿದೇಶಿ ವ್ಯಾಪಾರದಲ್ಲಿ ಸತತವಾಗಿ ಅನುಭವಿಸುತ್ತಿರುವ ಕೊರತೆಯನ್ನೂ ಹಾನಿಕಾರಕ ಸ್ಥಿತಿಯನ್ನೂ ತೊಲಗಿಸುವುದಕ್ಕಾಗಲಿ ಯೋಜನಾ ನೀತಿಯಲ್ಲಿ ಯಾವ ಮೂಲಭೂತ ಬದಲಾವಣೆಗಳೂ ಕಾಣಿಸುವುದಿಲ್ಲ.

ಸಂಖ್ಯಾಪಟ್ಟಿ 7 : ಯಾವ ಯಾವ ರಂಗಕ್ಕೆ ಎಷ್ಟೆಷ್ಟು

	ಸಾರ್ವಜನಿಕರಂಗದಲ್ಲಿ	ಮೊಬಲಗು	ಶೇಕಡ
1.	ಕೃಷಿ	5695.07	3.30
2.	ಗ್ರಾಮಾಭಿವೃದ್ಧಿ	5363.73	3.11
3.	ವಿಶೇಷ ಪ್ರಾದೇಶಿಕ ಕಾರ್ಯಕ್ರಮಗಳು	1480.00	0.85
4.	ನೀರಾವರಿ, ಮಹಾಪೂರ ನಿಯಂತ್ರಣ	12160.03	7.06
5.	ಶಕ್ತಿ (ವಿದ್ಯುಚ್ಛಕ್ತಿ, ಕಲ್ಲಿದ್ದಲು, ಪೆಟ್ರೋಲಿಯಂ)	26535.44	15.40
6.	ಕೈಗಾರಿಕೆ ಮತ್ತು ಖನಿಜ	15017.57	8.70
7.	ಸಾರಿಗೆ (ರೈಲ್ವೆ ರಸ್ತೆ ನಿರ್ಮಾಣ)	12411.97	7.20
8.	ಸಂಪರ್ಕ, ವಾರ್ತಾಪ್ರಸಾರ ಇತ್ಯಾದಿ	3134.26	1.81
9.	ವಿಜ್ಞಾನ ಮತ್ತು ತಾಂತ್ರಿಕತೆ	862.20	0.50
10.	ಸಾಮಾಜಿಕ ಸೇವೆ (ಶಿಕ್ಷಣ, ಆರೋಗ್ಯ, ಪರಿಶಿಷ್ಟ ಜನಾಂಗಗಳಿಗಾಗಿ, ಇತ್ಯಾದಿ)	14035.26	8.15
11.	ಇತರೆ	801.47	0.46
12.	ಖಾಸಗಿ ಬಂಡವಾಳಶಾಹಿರಂಗ	74710.00	43.38

ಬಡತನ ನಿವಾರಣೆ ಮೋಸದ ಅಂಕಿಸಂಖ್ಯೆಗಳು

ಬಡತನ ನಿವಾರಣೆಯೇ ಆರನೇ ಯೋಜನೆಯ ಪರಮಗುರಿ ಎಂದು ಅನೇಕ ಸಾರಿ ಹೇಳಲಾಗಿದೆ. ಈ ರೀತಿ ಹೇಳಿಕೊಳ್ಳುವುದು ಹೊಸದೇನೂ ಅಲ್ಲ. ಆದರೆ ಬಡತನವನ್ನು ವಾಸ್ತವದಲ್ಲಲ್ಲದೆ ಹಾಳೆಯ ಮೇಲೆ ಕಡಿಮೆಮಾಡಲಾಗಿದೆ. ಸ್ವಾತಂತ್ರ್ಯ ನಂತರದಿಂದಲೂ ದಿನೇದಿನೇ ಬಡತನ ಜಾಸ್ತಿಯಾಗುತ್ತಿದೆ ಎನ್ನುವುದು ಎಲ್ಲ ಜನಸಾಮಾನ್ಯರ ಅನುಭವ. ಯೋಜನೆಯ ಪ್ರಕಾರವೇ 1972-73ರಲ್ಲಿ ಶೇ. 51.49 ರಷ್ಟು ಜನರು ಬಡತನ ರೇಖೆಯ ಕೆಳಗಿದ್ದರು. 1978 ರಲ್ಲಿ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯೊಂದರಲ್ಲಿ 2/3ರಷ್ಟು ಜನರು ಬಡತನ ರೇಖೆಯ ಕೆಳಗಿದ್ದಾರೆಂದು ತಿಳಿಸಲಾಗಿತ್ತು. ಈಗ ಯೋಜನೆಯಲ್ಲಿ 1979-80ರಲ್ಲಿ ಇದು 48.13% ಕ್ಕೆ ಇಳಿದಿದೆ ಎಂದು ಹೇಳಿರುವುದು ವಿಚಿತ್ರವಾಗಿದೆ. ಯೋಜನೆಯನ್ನು ರೂಪಿಸುವಾಗಲೇ ಸುಳ್ಳು ಅಂಕಿಸಂಖ್ಯೆಗಳನ್ನು ಆಧರಿಸುವುದಾದರೆ ಇನ್ನು ಸಾಧಿಸುವುದಾದರೂ ಏನು ? ಈ ರೀತಿಯ ಸುಳ್ಳು ಅಂಕೆಗಳನ್ನು ಆಧರಿಸಿರುವುದಲ್ಲದೆ, ಯೋಜನೆಯಿಂದ ಬಡತನ ರೇಖೆಯ ಕೆಳಗಿರುವ ಜನರ ಪ್ರಮಾಣ ಶೇ. 48.44 ರಿಂದ 1984-85ರಲ್ಲಿ ಶೇ. 30ಕ್ಕೆ ಇಳಿಯುತ್ತದೆ ಎಂದು ತೋರಿಸಿರುವುದು ಜನರನ್ನು ಮೋಸಮಾಡುವ ಯೋಜನಾಕಾರರ ನೀತಿಗೇಡಿತನವಾಗಿದೆ. ಇದು ಹೇಗೆಂದರೆ :

ಯೋಜನಾಕಾರರ ಪ್ರಕಾರ "ಒಟ್ಟು ಆರ್ಥಿಕತೆಯ ಬೆಳವಣಿಗೆಯ ದರದಲ್ಲಾಗುವ ಹೆಚ್ಚಳವೇ ಬಡತನ ಕಡಿಮೆಯಾಗುವ ಪರಿಸ್ಥಿತಿಯನ್ನುಂಟುಮಾಡುತ್ತದೆ". ಯೋಜನೆಯಲ್ಲಿ ಶೇ. 5.2 ದರದ ಆರ್ಥಿಕ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ. ಈ ಬೆಳವಣಿಗೆಯಿಂದಲೇ "1977–78ರ ಅನುಭೋಗದ ಖರ್ಚಿನ ರೀತಿ (Consumption expenditure pattern) ಬದಲಾಗದೆ ಇದ್ದರೂ ಬಡತನ ಶೇ. 48.44 ರಿಂದ ಶೇ. 38.93ಕ್ಕೆ ಇಳಿಯುತ್ತದೆ". "ಆದರೆ ಆರನೇ ಯೋಜನೆಯಲ್ಲಿ ಅನೇಕ ಬಡತನ ನಿವಾರಣಾ ಕಾರ್ಯಕ್ರಮಗಳಿರುವುದರಿಂದ ಅನುಭೋಗದ ರೀತಿ ಕೆಳವರ್ಗದವರ ಪರವಾಗಿ ಬದಲಾಗಿ ಬಡತನ ಶೇ.38.93 ರಿಂದ ಶೇ.30.00ಕ್ಕೆ ಇಳಿಯುತ್ತದೆ".

ಸಂಖ್ಯಾಪಟ್ಟಿ 8 : ವಿವಿಧ ರಂಗಗಳ ಪ್ರಮಾಣ

1.	ಕೃಷಿ, ಗ್ರಾಮಾಭಿವೃದ್ಧಿ, ವಿಶೇಷ ಪ್ರಾದೇಶಿಕ ಕಾರ್ಯಕ್ರಮ	7.26%
2.	ನೀರಾವರಿ, ಮಹಾಪೂರ ನಿಯಂತ್ರಣ	7.06%
3.	ಶಕ್ತಿ	15.40%
4.	ಸಾರಿಗೆ, ಸಂಪರ್ಕ, ಪ್ರಸಾರಾಂಗ, ಆರೋಗ್ಯ ಶಿಕ್ಷಣ, ವಿಜ್ಞಾನ, ಇತ್ಯಾದಿಗಳು	18.12%
5.	ಕೈಗಾರಿಕೆ ಮತ್ತು ಗಣಿ	52.08%
	a) ಸಾರ್ವಜನಿಕರಂಗ	8.70%
	b) ಖಾಸಗಿರಂಗ	43.38%

ಮೇಲುನೋಟಕ್ಕೆ ಈ ವಾದಗಳು ಮರುಳು ಮಾಡಬಹುದು. ಆದರೆ ಸ್ವಲ್ಪ ಸೂಕ್ಷ್ಮವಾಗಿ ವಿವೇಚಿಸಿದರೆ ಯೋಜನಾಕಾರರ ಠಕ್ಕುತನ ದರ್ಶನವಾಗುತ್ತದೆ.

ಮೊದಲನೆಯದಾಗಿ ಶೇ. 5.2 ರಷ್ಟು ದರದ ಆರ್ಥಿಕ ಬೆಳವಣಿಗೆ ಖಾತ್ರಿಯಿಲ್ಲ. ಹಿಂದಿನ ಯಾವ ಯೋಜನೆಯೂ ನಿರೀಕ್ಷಿಸಿದ ದರವನ್ನು ಸಾಧಿಸಿಲ್ಲ.

ಎರಡನೆಯದಾಗಿ ಆರ್ಥಿಕ ಬೆಳವಣಿಗೆ ತಾನಾಗಿಯೇ ಬಡತನ ಕಡಿಮೆಗೊಳಿಸುತ್ತದೆ ಎನ್ನುವುದಕ್ಕೆ ಭಾರತದ ಯಾವ ಅನುಭವವೂ ಸಾಕ್ಷಿ ನೀಡುವುದಿಲ್ಲ. ಹಿಂದಿನ ಐದು ಯೋಜನೆಗಳಲ್ಲೂ ಸಾಕಷ್ಟಿಲ್ಲದಿದ್ದರೂ ಕೆಲಮಟ್ಟಿಗಾದರೂ ಬೆಳವಣಿಗೆಯಾಗಿದೆ. ತಲಾ ಆದಾಯ 1950-51 ರಲ್ಲಿ 466ರೂ. ಇದ್ದದ್ದು 1978-79ಕ್ಕೆ 730ರೂ. ಆಗಿದೆಯೆಂದು ಯೋಜನೆಯಲ್ಲಿಯೇ ಹೇಳಲಾಗಿದೆ. ಕನಿಷ್ಟ ಆ ಪ್ರಮಾಣದಲ್ಲಾದರೂ ಬಡತನ ಕಡಿಮೆಯಾಗುವುದರ ಬದಲು ದಿನೇ ದಿನೇ ಹೆಚ್ಚಿದ್ದುದಾದರೂ ಏತಕ್ಕಾಗಿ? ಆರ್ಥಿಕ ಬೆಳವಣಿಗೆಯಾಗಲೇಬೇಕು. ಆದರೆ ಆರ್ಥಿಕ ಬೆಳವಣಿಗೆ ತಾನಾಗಿಯೇ ಬಡತನವನ್ನು ಕಡಿಮೆಗೊಳಿಸಲು ಶಕ್ಯವಿಲ್ಲ. ಹಾಗೆ ಆದ ಆರ್ಥಿಕ ಬೆಳವಣಿಗೆಯ ಫಲ ಜನರಿಗೆ ತಲುಪುವುದು ಅವಶ್ಯ. ಬಂಡವಾಳಶಾಹಿ ಸಮಾಜದಲ್ಲಿ ಉತ್ಪಾದನಾ ಸಾಧನಗಳ ಒಡೆತನ ಖಾಸಗಿ ವ್ಯಕ್ತಿಗಳ ಕೈಯಲ್ಲಿರುವುದರಿಂದ ಆರ್ಥಿಕ ಬೆಳವಣಿಗೆಯ ಫಲವೂ ಹೆಚ್ಚಾಗಿ ಈ ಆಸ್ತಿವಂತ ವರ್ಗಗಳಿಗೇ ದಕ್ಕುತ್ತದೆ. ಆಸ್ತಿವಂತರ ಆಸ್ತಿ ಬೆಳೆದ ಹಾಗೆ ಬಡವರ ಬಡತನವೂ ಬಡವರ ಸಂಖ್ಯೆಯೂ ಬೆಳೆಯುತ್ತದೆ.

ಮೂರನೆಯದಾಗಿ 1977-78ರ ಅನುಭೋಗ ವಿತರಣೆ ಬದಲಾಗದೆ ಇದ್ದಾಗ ಬಡತನ 48.44ರಿಂದ 38.93ಕ್ಕೆ ಇಳಿಯುತ್ತದೆ ಎಂದು ಹೇಳಲಾಗಿದೆ. 1950ರಿಂದ 1977ರ ವರೆಗೂ ನಮ್ಮ ಅನುಭವದಂತೆ ಮೇಲ್ವರ್ಗಗಳ ಅನುಭೋಗದ ಪ್ರಮಾಣ ಜಾಸ್ತಿಯಾಗುತ್ತಾ ಕೆಳವರ್ಗದವರ ಕೈಯಲ್ಲಿ ಕಾಸು ಕಡಿಮೆಯಾಗುತ್ತಾ ಬಂದಿರುವುದು ಸತ್ಯ. ಹೀಗಿರುವಾಗ ಇದೇ ಪ್ರಮಾಣದಲ್ಲಿ ವ್ಯತ್ಯಾಸವಾದರೆ ಬಡತನ ಇಳಿಯಲು ಸಾಧ್ಯವಿಲ್ಲ. ಕೆಳವರ್ಗದ ಶೇ. 50ರಷ್ಟು ಜನರು ಅನುಭೋಗಿಸುವಷ್ಟನ್ನು ಮೇಲ್ವರ್ಗದ ಶೇ. 10ರಷ್ಟು ಜನ ಅನುಭೋಗಿಸುತ್ತಿದ್ದಾರೆ ಎಂದು ಯೋಜನೆಯಲ್ಲಿ ಹೇಳಲಾಗಿದೆ. ಇದನ್ನು ಕೆಳವರ್ಗದವರ ಪರವಾಗಿ ಬದಲಾಯಿಸುವಂತಹ ಯಾವ ಕ್ರಮಗಳೂ ಯೋಜನೆಯಲ್ಲಿಲ್ಲ.

ನಾಲ್ಕನೆಯದಾಗಿ ಅನುಭೋಗ ಖರ್ಚಿನ ಪ್ರಮಾಣವನ್ನು 1977-78 ರ ಬೆಲೆಗಳ ಆಧಾರದಲ್ಲಿಯೇ ಲೆಕ್ಕಾಚಾರಹಾಕಲಾಗಿದೆ. 77-78 ರಿಂದ 84-85ರವರೆಗೆ ಆಗುವ ಬೆಲೆಏರಿಕೆ ಎಷ್ಟು ? 84-85ರ ಬೆಲೆಗಳನ್ನು ಆಧಾರವಾಗಿ ಹಿಡಿದರೆ ಬಡತನ ಇಳಿಯಲು ಸಾಧ್ಯವಿಲ್ಲ.

ಐದನೆಯದಾಗಿ ಬಡತನ ರೇಖೆಯೆಂದರೆ 1979-80ರ ಬೆಲೆಗಳಲ್ಲಿ ಹಳ್ಳಿಯಲ್ಲಿ ತಿಂಗಳಿಗೆ ತಲಾ ರೂ.76, ನಗರಗಳಲ್ಲಿ ತಲಾ 88 ರೂ.ಗಳಿಗಿಂತ ಕಡಿಮೆ ಆದಾಯವೆಂದು ಯೋಜನೆಯಲ್ಲಿ ಹೇಳಲಾಗಿದೆ. ರೂಪಾಯಿಯ ಬೆಲೆ 17 ಪೈಸೆಯಾಗಿರುವಾಗ ಈ ಮಟ್ಟವೇ ತೀರಾ ಕಡಿಮೆ. ಅಲ್ಲದೆ ಇದು 84-85ರ ಬೆಲೆಗಳಲ್ಲಿ ಎಷ್ಟಾಗಬಹುದು. ಹಾಗೂ 84-85ರ ಬೆಲೆಗಳ ಆಧಾರವನ್ನು ಹಿಡಿದರೆ ಬಡತನ ರೇಖೆಯ ಕೆಳಗಿರುವವರ ಸಂಖ್ಯೆ ಕಡಿಮೆಯಾಗಲು ಸಾಧ್ಯವಿಲ್ಲ.

ಆರನೆಯದಾಗಿ ಬಡತನ ನಿವಾರಣಾ ಕಾರ್ಯಕ್ರಮಗಳೆಂದು ಯೋಜಿಸಿರುವುದೆಲ್ಲವೂ ಬಡತನವನ್ನು ಕಡಿಮೆಗೊಳಿಸುತ್ತವೆ ಎನ್ನುವುದಕ್ಕೆ ಯಾವ ಆಧಾರವೂ ಇಲ್ಲ. ಏಕೆಂದರೆ :

ನಿರುದ್ಯೋಗ ದಾರಿದ್ರ್ಯ ಬಂಡವಾಳಶಾಹಿಗೆ ದುಷ್ಟವಾದುದೇನೂ ಅಲ್ಲ. ಬಡತನ ನಿರುದ್ಯೋಗಗಳಿದ್ದರೇನೆಯೇ ಕಡಿಮೆ ಕೂಲಿಗೆ ಹೆಚ್ಚು ದುಡಿಸಿಕೊಂಡು ಬಡಜನರನ್ನು ಸುಲಿಯಲು ಅನುಕೂಲವಾಗುತ್ತದೆ. ಆದರೆ ಬಡತನ ನಿರುದ್ಯೋಗಗಳು ವಿಪರೀತವಾಗಬಾರದೆಂದು ಬಂಡವಾಳಶಾಹಿ ವರ್ಗವೂ ಆಶಿಸುತ್ತದೆ. ಏಕೆಂದರೆ ವಿಪರೀತವಾದರೆ ಜನರ ಅಸಂತೋಷ ಆಸ್ಫೋಟಕ ಶಕ್ತಿಗಳನ್ನುಂಟುಮಾಡ

(21ನೇ ಪುಟ ನೋಡಿ)

(19ನೇ ಪುಟದಿಂದ)

ಬಂಡವಾಳಶಾಹಿ ಬೆಳವಣಿಗೆಗೆ ಆರನೇ ಯೋಜನೆ

ಬಹುದೆನ್ನುವ ಭಯ ಬಂಡವಾಳಶಾಹಿ ವರ್ಗಕ್ಕಿದೆ. ಹೀಗಾಗಿ ಬಡತನದ ನಿವಾರಣೆಗಲ್ಲ, ಬದಲು ಬಡತನ ವಿಪರೀತವಾಗಬಾರದೆಂದು ಕೆಲವು ಸುಧಾರಣೆಗಳನ್ನು ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಎಲ್ಲಾ ಬಂಡವಾಳಶಾಹಿ ದೇಶಗಳಲ್ಲೂ ಇದೆ. ಆರನೇ ಯೋಜನೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (Integrated Rural development programme) ಗ್ರಾಮೀಣ ಉದ್ಯೋಗ ಕಾರ್ಯಕ್ರಮ (Rural Employment programme)ಗಳನ್ನು ಬಡತನ ಕಡಿಮೆಗೊಳಿಸುವ ಕಾರ್ಯಕ್ರಮವೆಂದು ಹೇಳಲಾಗಿದೆ.

ಈ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಕ್ಕೆ (IRDP) 1500 ಕೋಟಿ ರೂ.ಗಳನ್ನು ಮೀಸಲಾಗಿಟ್ಟಿರುವುದಲ್ಲದೆ ಸುಮಾರು 3,000 ಕೋಟಿ ರೂ.ಗಳನ್ನು ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಒದಗಿಸಲಾಗುವುದೆಂದು ಹೇಳಲಾಗಿದೆ ಹಾಗೂ ಇದರಿಂದ 61 ಮಿಲಿಯ ಜನರನ್ನು ಬಡತನ ರೇಖೆಯ ಮೇಲೆ ತರಲಾಗುವುದೆಂದು ಹೇಳಲಾಗಿದೆ. ಈ ಹಿಂದಿನ ಯೋಜನೆಗಳಲ್ಲಿ ಸಮುದಾಯ ಅಭಿವೃದ್ಧಿ ಯೋಜನೆ (Community Development Programme) ಎನ್ನುವ ಹೆಸರಿನಲ್ಲಿ ಹಣ ಸುರಿಯಲಾಯಿತು. ಈಗ ಸಮುದಾಯ ಅಭಿವೃದ್ಧಿ ಯೋಜನೆ ದೋಷಪೂರ್ಣವಾಗಿತ್ತೆಂದೂ ಆ ಕಾರಣ ಅದು ಸಂಪೂರ್ಣ ವಿಫಲವಾಯಿತೆಂದೂ ಹೇಳಿ ಅದರ ಬದಲು ಈ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (IRDP)ವನ್ನು ರೂಪಿಸಲಾಗಿದೆ. ಸಮುದಾಯ ಅಭಿವೃದ್ಧಿ ಯೋಜನೆ ವಿಫಲವಾಗಲು, ಅರ್ಥತಜ್ಞರು ಕೊಡುವ ಕಾರಣವೆಂದರೆ 1. ಸಮುದಾಯ ಅಭಿವೃದ್ಧಿ ಯೋಜನೆ ದೊಡ್ಡ-ಸಣ್ಣ ರೈತ; ಭೂಮಾಲಕ-ಭೂರಹಿತ; ಪ್ರತಿಷ್ಠಿತವರ್ಗ-ಬಡಜನರು ಇವರ ನಡುವಿನ ವ್ಯತ್ಯಾಸವನ್ನು, ಕಲಹವನ್ನು ಕಾಣಲಿಲ್ಲ. 2. ಅದರಲ್ಲಿ ಜನಸಮೂಹ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ. 3. ವಿಪರೀತವಾದ ಅಧಿಕಾರಶಾಹಿ ನಿಯಂತ್ರಣವಿತ್ತು. 4. ಅದು ಅಸ್ತಿತ್ವದಲ್ಲಿದ್ದ ಹಳ್ಳಿಯ ಸಮಾಜವ್ಯವಸ್ಥೆಯನ್ನು ಬಲಪಡಿಸಿತು. 5. ಅಧಿಕಾರದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣವಿರಲಿಲ್ಲ. 6. ಹಳ್ಳಿಯ ಅಧಿಕಾರವ್ಯವಸ್ಥೆ ಬದಲಾಗದೆ ಇದ್ದುದರಿಂದ ಅಭಿವೃದ್ಧಿ ಯೋಜನೆಯ ಲಾಭವನ್ನೆಲ್ಲಾ ಪ್ರತಿಷ್ಠಿತ ಹಿತಾಸಕ್ತಿಗಳೇ ಕೊಳ್ಳೆಹೊಡೆದವು...ಇತ್ಯಾದಿಯಾಗಿ.

ಆದರೆ, ಈ ಹೊಸ ಮಾದರಿಯ ಯೋಜನೆಯಲ್ಲಿ ದೊಡ್ಡ-ಚಿಕ್ಕ ರೈತರು, ಭೂಮಾಲಕ-ಭೂರಹಿತರು ಇತ್ಯಾದಿಯಾದ ವರ್ಗೀಕರಣವನ್ನು ಮಾಡಲಾಗಿದ್ದರೂ, ಭೂರಹಿತರಿಗೆ, ಚಿಕ್ಕ ರೈತರಿಗೆ ಹಾಗೂ ಕುಶಲಕರ್ಮಿಗಳಿಗೆ ಆಸ್ತಿಯನ್ನು ವರ್ಗಾಯಿಸಲಾಗುವುದೆಂದು ಹೇಳಲಾಗಿದ್ದರೂ ಸಹ ಸಮುದಾಯ ಅಭಿವೃದ್ಧಿ ಯೋಜನೆ ವಿಫಲವಾಗಲು ಕಾರಣವಾದ-ಅಧಿಕಾರಶಾಹಿ ನಿಯಂತ್ರಣ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ನೀತಿ ಇಲ್ಲದಿರುವುದು, ಪ್ರತಿಷ್ಠಿತ ಹಿತಾಸಕ್ತಿಗಳೇ ಹಳ್ಳಿಯ ಅಧಿಕಾರವ್ಯವಸ್ಥೆಯಲ್ಲಿ ಪ್ರಬಲವಾಗಿರುವುದು ಮುಂತಾದವು-ಯಾವುದೇ ಅಂಶಗಳನ್ನು ತೊಡೆದು ಹಾಕಿಲ್ಲ. ಅಲ್ಲದೆ ಹಣಕಾಸು ಸಂಸ್ಥೆಗಳ ಮೂಲಕ ಹಣ ಸರಬರಾಜಾಗುವುದರಿಂದ, ಸಾಲನೀಡಲು ಆಸ್ತಿಯ ಸೆಕ್ಯೂರಿಟಿ ಕೇಳುವುದು ಸಹಜವಾದ್ದರಿಂದ, ಇದು ಸಹ ಮಧ್ಯಮ, ಮೇಲ್‌ಮಧ್ಯಮವರ್ಗದ ಜನರಿಗೆ ದಕ್ಕಬಹುದೇ ಹೊರತು ಆಸ್ತಿರಹಿತ ಜನರಿಗಲ್ಲ. ಆ ಕಾರಣ, ಈ ಹೊಸ ಮಾದರಿಯ ಯೋಜನೆಯೂ ಸಮುದಾಯ ಅಭಿವೃದ್ಧಿ ಯೋಜನೆಯಂತೆ ವಿಫಲವಾಗುವುದಿಲ್ಲ ಎನ್ನುವುದಕ್ಕೆ ಯಾವ ಆಧಾರವೂ ಇಲ್ಲ.

ಈ ಹೊಸ ಮಾದರಿಯ ಕಾರ್ಯಕ್ರಮದ (IRDP)ಉದ್ದೇಶ ಆಸ್ತಿಯ ವರ್ಗಾವಣೆ ಮಾಡುವುದೆಂದು ಹೇಳಲಾಗಿದೆ. ಹಳ್ಳಿಯಲ್ಲಿ ಮುಖ್ಯವಾದ ಆಸ್ತಿ ಎಂದರೆ ಭೂಮಿ. ಶೇ. 75ರಷ್ಟು ಭೂಮಿಯನ್ನು ಶೇ. 25ರಷ್ಟು ಜನರು ಹಿಡಿದುಕೊಂಡಿದ್ದಾರೆ ಎಂದು ಯೋಜನೆಯಲ್ಲಿಯೇ ಹೇಳಲಾಗಿದ್ದರೂ ಸಹ, ಹೆಚ್ಚು ಜನರು ಭೂಮಿಯನು ಹೊಂದುವಂತಹ ಭೂವಿತರಣಾ ಕಾರ್ಯಕ್ರಮವನ್ನು ಯೋಜನೆಯಲ್ಲಿ ಗಂಭೀರವಾಗಿ ಪರಿಗಣಿಸಿರುವುದಿಲ್ಲ. ಆದ್ದರಿಂದ 'ಆಸ್ತಿಯ ವರ್ಗಾವಣೆ' ಎನ್ನುವುದು ಒಂದು ಬೋಳುಮಾತು. ಒಟ್ಟಿನಲ್ಲಿ ಭೂಮಾಲಕರ ಕೈಯಲ್ಲಿ ಭೂಮಿಯಿರಿಸಿ ಬಡಜನರ ಮೂತಿಗೆ ಬೆಲ್ಲ ಒರೆಸಿ ಸಂತೈಸುವ ಕಾರ್ಯಕ್ರಮವಾಗಿದೆ.

ನಿರುದ್ಯೋಗ

ಯೋಜನಾ ಅವಧಿಯಲ್ಲಿ ಉಂಟಾಗುವ ಹೊಸ ಉದ್ಯೋಗಾವಕಾಶಗಳು ಜನಸಂಖ್ಯೆಯ ಹೆಚ್ಚಳದಿಂದಾಗುವ ಶ್ರಮಿಕರೆಲ್ಲರನ್ನೂ ಉದ್ಯೋಗಿಸುತ್ತದೆ ಎಂದು ಯೋಜನೆಯಲ್ಲಿ ಹೇಳಲಾಗಿದೆ. ಅಂದರೆ ಈಗಿರುವ ನಿರುದ್ಯೋಗ ಕಡಿಮೆಯಾಗಲಾರದು ಎಂದೇ ಹೇಳಿದಂತಾಯಿತು. ಹಿಂದಿನ ಪ್ರತಿಯೊಂದು ಯೋಜನೆಯೂ ಗುರಿ ಸಾಧಿಸುವಲ್ಲಿ ವಿಫಲವಾಗಿರುವ ಅನುಭವದ ಮೇರೆಗೆ ಈ ಯೋಜನೆಯೂ ನೂರಕ್ಕೆನೂರು ಸಾಧಿಸುವುದಿಲ್ಲ ಎನ್ನುವುದಾದರೆ ಈಗಿರುವ ನಿರುದ್ಯೋಗ ಮತ್ತಷ್ಟು ಬೆಳೆಯುತ್ತದೆ ಎಂದು ಅರಿಯಬಹುದು. ಗ್ರಾಮೀಣ ಉದ್ಯೋಗ ಕಾರ್ಯಕ್ರಮ (Rural Employment Programme) ವನ್ನು ಉದ್ಯೋಗ ನಿರ್ಮಾಣದ ಯೋಜನೆಯನ್ನಾಗಿ ಪರಿಗಣಿಸಲಾಗಿದೆ. ಗ್ರಾಮೀಣ ಉದ್ಯೋಗ ಕಾರ್ಯಕ್ರಮ ಎಂದರೆ 'ಕೂಲಿಗಾಗಿ ಕಾಳು ಯೋಜನೆ' ಇದು ಸರಿಯಾಗಿ ಕಾರ್ಯಾಚರಣೆಯಾದಲ್ಲಿ ಕೃಷಿಕೆಲಸವಿರದ ತಿಂಗಳುಗಳಲ್ಲಿ ಕೃಷಿಕಾರ್ಮಿಕರಿಗೆ ಬದುಕಲು ಸ್ವಲ್ಪ ಸಹಾಯವಾಗುತ್ತದೆಯೇ ಹೊರತು ವಾಸ್ತವವಾಗಿ ಶಾಶ್ವತ ಉದ್ಯೋಗಗಳನ್ನು ನಿರ್ಮಿಸುವುದಿಲ್ಲ. ಆದ್ದರಿಂದ ಯೋಜನೆಯಲ್ಲಿ ಹೇಳಿರುವಂತೆ ಜನಸಂಖ್ಯೆಯ ಹೆಚ್ಚಳದಿಂದಾದ ಶ್ರಮಿಕರನ್ನು ಪೂರ್ಣವಾಗಿ ಉದ್ಯೋಗಿಸುವುದೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಈಗಿನ ನಿರುದ್ಯೋಗಿಗಳ ಜೊತೆಗೆ ಮತ್ತಷ್ಟು ನಿರುದ್ಯೋಗಿ ಸೇರಿಕೊಳ್ಳುವುದು ಖಾತ್ರಿ.

ಇದು ಬಂಡವಾಳಶಾಹಿ ಯೋಜನೆಯಾದ ಕಾರಣ ಉದ್ಯೋಗಗಳನ್ನು ಸೃಷ್ಟಿಸುವಂತಹ ರಂಗಗಳನ್ನು ಪೂರ್ಣವಾಗಿ ಕಡೆಗಣಿಸಲಾಗಿದೆ. "ಕೃಷಿ, ಗ್ರಾಮಾಭಿವೃದ್ಧಿ, ಮತ್ತು ಸಣ್ಣಪ್ರಮಾಣದ ಕೈಗಾರಿಕೆಗಳು ಇತ್ಯಾದಿಗಳು ಉದ್ಯೋಗಗಳನ್ನು ಹುಟ್ಟಿಸುವ ಪ್ರಮುಖ ರಂಗಗಳು" ಎಂದು ಯೋಜನೆಯಲ್ಲಿ ಹೇಳಲಾಗಿದ್ದರೂ ಕೃಷಿರಂಗಕ್ಕೆ 3.30% ರಷ್ಟು, ಗ್ರಾಮಾಭಿವೃದ್ಧಿಗೆ 3.11% ರಷ್ಟು ಹಣ ಮಾತ್ರ ವಿನಿಯೋಗವಾದರೆ, ಗೃಹ ಮತ್ತು ಸಣ್ಣಕೈಗಾರಿಕೆಗಳ ಪಾಲು 1.03% ರಷ್ಟು ಮಾತ್ರವಾಗಿದೆ. ಒಟ್ಟು ಕೈಗಾರಿಕಾ ರಂಗಕ್ಕೆ ಸಲ್ಲುವ 95117 ಕೋಟಿ ರೂ.ಗಳಲ್ಲಿ, ಗೃಹ ಮತ್ತು ಸಣ್ಣಕೈಗಾರಿಕೆಗಳ ಪಾಲು 1780 ಕೋಟಿ ರೂ. ಅಂದರೆ 1.87% ರಷ್ಟು. ಉದ್ಯೋಗ ನಿರ್ಮಿಸುವ ರಂಗಗಳು ಕಡೆಗಣಿಸಲ್ಪಟ್ಟಿರುವುದರಿಂದ ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುವುದರಲ್ಲಿ ಸಂಶಯವಿಲ್ಲ.

ಹಣದುಬ್ಬರ ಬೆಲೆಏರಿಕೆ

"ಹಣದುಬ್ಬರದ ನಿಯಂತ್ರಣ ಹಾಗೆ ಬೆಲೆಗಳ ಸ್ಥಿರತೆ ಯೋಜನೆಯ ಯಶಸ್ವೀ ಕಾರ್ಯಾಚರಣೆಗೆ ಬಹಳ ಪ್ರಾಮುಖ್ಯವಾದ ಅಂಶಗಳು"ಎಂದು ಯೋಜನೆಯಲ್ಲಿ ನೂರುಬಾರಿ ಉಚ್ಚರಿಸಿರಬಹುದು. ಆದರೆ ಹಣದುಬ್ಬರ ಮತ್ತು ಬೆಲೆಏರಿಕೆಯನ್ನು ತಡೆಗಟ್ಟುವಂತಹ ಯಾವ ಪರಿಣಾಮಕಾರಿ ಕ್ರಮಗಳನ್ನೂ ಯೋಜಿಸಲಾಗಿಲ್ಲ. ಬದಲು ತದ್ವಿರುದ್ಧವಾಗಿ ಬಜೆಟ್, ಹಣಕಾಸು, ಬೆಲೆನೀತಿಗಳು ಹಾಗೂ ಯೋಜನೆಗೆ ಹಣಸಂಗ್ರಹಿಸುವ ಕ್ರಮಗಳೂ ಹಣದುಬ್ಬರ ಮತ್ತು ಬೆಲೆ ಏರಿಕೆಯನ್ನು ಉಂಟುಮಾಡುವಂತಹದಾಗಿವೆ.

ಹಣದುಬ್ಬರ, ಬೆಲೆಏರಿಕೆ ಅನಿವಾರ್ಯ ಎಂದೇ ವ್ಯಕ್ತಪಡಿಸಲಾಗಿದೆ. 32ನೇ ಪ್ಯಾರಾದಲ್ಲಿ "ಐದನೇ ಯೋಜನೆಗೆ ಹೋಲಿಸಿದಾಗ ಆರನೇ ಯೋಜನೆಯ ಗಾತ್ರ ಶೇ. 148 ರಷ್ಟು ಜಾಸ್ತಿಯಾಗಿದೆಯೆಂದೂ, ಈ ಅವಧಿಯಲ್ಲಿ ಆಗುವ ಬೆಲೆಏರಿಕೆಯ ಪರಿಣಾಮವನ್ನು ಕಳೆದರೂ, ಐದನೇ ಯೋಜನೆಗಿಂತ ಶೇ.80ರಷ್ಟು ದೊಡ್ಡದಾಗಿರುತ್ತದೆ"ಯೆಂದು ಹೇಳಲಾಗಿದೆ. ಅಂದರೆ ಯೋಜನೆಯ ಗಾತ್ರವೇ ಐದನೇ ಯೋಜನೆಯ ಹೋಲಿಕೆಯಲ್ಲಿ ಶೇ. 68ರಷ್ಟು ಕಡಿಮೆಯಾಗುವಷ್ಟು ಹಣದುಬ್ಬರ, ಬೆಲೆಏರಿಕೆಯನ್ನು ನಿರೀಕ್ಷಿಸಲಾಗಿದೆ.

ಯೋಜನೆಯಲ್ಲಿ 5,000 ಕೋಟಿ ರೂ.ಗಳ ಕೊರತೆ ಹಣಕಾಸು ಮಾಡಲಾಗಿದೆ. ಕೊರತೆ ಅಂದಾಜಿಗಿಂತ ಹೆಚ್ಚಾಗುತ್ತದೆ ಎಂದಿಟ್ಟುಕೊಂಡರೆ, ಈ ಕೊರತೆ ಹಣಕಾಸೇನೆಯೇ ಹಣದುಬ್ಬರಕ್ಕೂ ಬೆಲೆಏರಿಕೆಗೂ ಸಾಕಷ್ಟು ಕಾರಣವಾಗುತ್ತದೆ.

ಇದಲ್ಲದೆ ಯೋಜನೆಗೆ ಹಣ ಸಂಗ್ರಹಿಸಲೆಂದು ರೈಲ್ವೆ, ಬಸ್, ಕಲ್ಲಿದ್ದಲು ಅಲ್ಯುಮಿನಿಯಂ, ರಾಸಾಯನಿಕ ಗೊಬ್ಬರ, ನೀರಾವರಿ, ಆಹಾರಧಾನ್ಯ, ಅಂಚೆ, ತಂತಿ ಮುಂತಾದ ವಸ್ತು ಮತ್ತು ಸೇವೆಗಳ ದರಗಳನ್ನು ಏರಿಸಲು ತೀರ್ಮಾನಿಸಲಾಗಿದೆ ಹಾಗೂ ಈಗಾಗಲೇ ಸಾಕಷ್ಟು ಏರಿಸಲಾಗಿದೆ. ಈ ದರಗಳ ಏರಿಕೆ ತಿರುಗಿ ಇತರೆ ವಸ್ತುಗಳ ಮೇಲೂ ಪರಿಣಾಮ ಬೀರುತ್ತದೆ. ಅಲ್ಲದೆ ವಿವಿಧ ಖಾಸಗಿ ಬಂಡವಾಳಶಾಹಿಗಳು ಕಾರ್ಖಾನೆ ಸರಕುಗಳ ಬೆಲೆ ಏರಿಸದಂತೆ ಯಾವಕ್ರಮ ಕೈಗೊಳ್ಳುವುದನ್ನೂ ಯೋಜನೆಯಲ್ಲಿ ಯೋಚಿಸಲಾಗಿಲ್ಲ. ಆಹಾರ ಪದಾರ್ಥಗಳ ಸಟ್ಟಾ ವ್ಯಾಪಾರವನ್ನು ಸರಕಾರವೇ ವಹಿಸಿಕೊಂಡು ಸಾರ್ವಜನಿಕರಿಗೆ ವಿತರಣೆ ಮಾಡುವುದರ ಮೂಲಕ ವ್ಯಾಪಾರಿ ಬಂಡವಾಳಶಾಹಿಯ ಕೈವಾಡವನ್ನು ಇಲ್ಲವಾಗಿಸುವಂತಹ ಯೋಜನೆಯನ್ನು ತಿರಸ್ಕರಿಸಲಾಗಿದೆ. ಸರಕಾರದ ಹಣ ಮತ್ತು ಸಾಲದ ನೀತಿಯಲ್ಲಿಯೂ ಯಾವ ಬದಲಾವಣೆಯಾಗಿಲ್ಲ. ಆದ್ದರಿಂದ ಆರನೇ ಯೋಜನೆಯಲ್ಲಿಯೂ ಬೆಲೆ ಏರಿಕೆಯು ಭೂತ ಜನಸಾಮಾನ್ಯರನ್ನು ಕಾಡುವುದು, ಹಾಗೂ ಬೆಲೆ ಏರಿಕೆಯಿಂದ ಯೋಜನೆಯ ಅಂದಾಜುಗಳೆಲ್ಲಾ ವ್ಯತ್ಯಾಸಗೊಳ್ಳುವುದು, ಕಾರ್ಯಕ್ರಮಗಳು ಅಸ್ತವ್ಯಸ್ತಗೊಳ್ಳುವುದು ಅನಿವಾರ್ಯ.

ಒಟ್ಟಿನಲ್ಲಿ ಯೋಜನೆಯು ಭಾರತದ ಬಂಡವಾಳಶಾಹಿಯ ಆರನೇ ಯೋಜನೆಯಾಗಿದ್ದು, ಹಿಂದಿನ ಯೋಜನೆಗಳಿಗಿಂತ ಯಾವ ರೀತಿಯಲ್ಲಿಯೂ ಭಿನ್ನವಾಗಿಲ್ಲ. ಹಳ್ಳಿಯ ಹಿಂದುಳಿದಿರುವಿಕೆ, ಪ್ರಾದೇಶಿಕ ಅಸಮಾನತೆ, ಬಡತನ, ನಿರುದ್ಯೋಗ, ಬೆಲೆಏರಿಕೆಗಳನ್ನು ನಿರ್ಮೂಲನ ಮಾಡುವುದಿರಲಿ ಕಡಿಮೆಗೊಳಿಸುವುದೂ ಇಲ್ಲ. ನಮ್ಮ ವಿದೇಶಿ ವ್ಯಾಪಾರ ವ್ಯವಹಾರದಲ್ಲಿ ಯಾವುದೇ ಸುಧಾರಣೆಯನ್ನೂ ಸಾಧಿಸದೆ ಸ್ವಾವಲಂಬನೆಯ ದಾರಿಯಲ್ಲಿ ಏನನ್ನೂ ಸಾಧಿಸದು. ಈ ಯಾವುದೇ ಸಾಧನೆಗಳು ಬಂಡವಾಳಶಾಹಿ ಬೆಳವಣಿಗೆಯ ದಾರಿಗೇ ತದ್ವಿರುದ್ಧವಾಗಿವೆ. ಭಾರದ ಈ ಸಮಸ್ಯೆಗಳು ಬಗೆಹರಿಯಬೇಕಾದಲ್ಲಿ ಈಗಾಗಲೇ ಯಾರೋ ಹೇಳಿರುವಂತೆ ತತ್ತಿ ಒಡೆಯದೆ ಆಮ್ಲೆಟ್ ಮಾಡಲು ಸಾಧ್ಯವಿಲ್ಲ.

o

ಕೊಡಗಿನ ಕಾಫಿ ತೋಟದ ಕೂಲಿಗಾರರ ಸ್ಥಿತಿ

[illegible] ಕೂಡ ದುಡಿಸಿಕೊಳ್ಳುತ್ತಿವೆ.

ಕಾಫಿ ತೋಟದ ಕೂಲಿಗಾರರ ಸಂಘಟನೆ

ಕೊಡಗು ಜಿಲ್ಲೆಯ ಕಾಫಿತೋಟದ ಕೂಲಿಕಾರರ ನಿಖರ ಸಂಖ್ಯೆ ಎಷ್ಟು ಎನ್ನುವುದು ಗೊತ್ತಿಲ್ಲ. ಕಾಫಿ ಬೋರ್ಡಿನ ಪ್ರಕಾರ ಕರ್ನಾಟಕದ ಕಾಫಿ ತೋಟದ ಕೂಲಿಕಾರರ ಸಂಖ್ಯೆ 1974-75 ರಲ್ಲಿ 1, 62, 176. ಈ ಸಂಖ್ಯೆಯನ್ನು ಕೂಡ ಪೂರ್ಣವಾಗಿ ನಂಬುವಂತಿಲ್ಲ ಯಾಕೆಂದರೆ ಇದು ಬೆಂಗೂಲಿಗಳೆಂದು ಕರೆಯಲ್ಪಡುವ ಹಂಗಾಮಿ ಕೂಲಿಗಳನ್ನು ಮತ್ತು ವರ್ಷದ ಕೆಲವು ತಿಂಗಳುಗಳಲ್ಲಿ ಕೃಷಿ ಕೆಲಸ ಮಾಡುವ ಕೂಲಿಗಳ ಸಂಖ್ಯೆಯನ್ನು ಒಳಗೊಂಡಿಲ್ಲ. ಕೊಡಗು ಜಿಲ್ಲೆಯ ಕಾಫಿ ತೋಟದ ಕೂಲಿಗಾರರ ಸಂಖ್ಯೆ ಅಂದಾಜು 75,000 ರಿಂದ ಒಂದು ಲಕ್ಷದವರೆಗೆ ಇರಬಹುದು. ಈ ಜಿಲ್ಲೆಯ ಮುಖ್ಯ ಎಡಪಂಥೀಯ ಟ್ರೇಡ್‌ಯೂನಿಯನ್ನಾದ ಸಿ.ಐ.ಟಿಯು.ಗೆ ಸೇರಿದ ಜನರಲ್ ವರ್ಕರ್ಸ್ ಯೂನಿಯನ್ನಿನ ಸದಸ್ಯ ಸಂಖ್ಯೆ ಮೂರು ಸಾವಿರ ಈ ಯೂನಿಯನ್ನಿನಲ್ಲಿ ಕಾಫಿ ತೋಟದ ಕೂಲಿಕಾರಲ್ಲದೆ ಇನ್ನಿತರ ಕೂಲಿಕಾರರೂ ಸದಸ್ಯರಾಗಿದ್ದಾರೆ ಎನ್ನುವುದನ್ನು ಗಮನಿಸಬೇಕು. ಇನ್ನು ಕಾಂಗ್ರೆಸಿನ ಪ್ರಧಾರಿಗಳ ಮರಿ ಪುಡಾರಿಗಳ ಕೇವಲ ಸಂಬಳ ಅಥವಾ ಇನ್ನಿತರ ತಾತ್ಕಾಲಿಕ ಬೇಡಿಕೆಗಳಿಗೆ ಚೌಕಾಶಿ ಮಾಡುವ ಪಲ್ಲುಗಿಂಜುವ ಬಾಲಂಗೋಚಿ ಟ್ರೇಡ್‌ಯೂನಿಯನ್‌ಗಳ ಸದಸ್ಯತ್ವದ ಸಂಖ್ಯೆ ಹತ್ತರಿಂದ ಹದಿನೈದು ಸಹಸ್ರದ ತನಕ ಇರಬಹುದು. ಈ ಟ್ರೇಡ್‌ಯೂನಿಯನ್ ಚಟುವಟಿಕೆಗಳು ಕೂಡ ದೊಡ್ಡ ದೊಡ್ಡ ಎಸ್ಟೇಟುಗಳಲ್ಲಿ ಹಬ್ಬಿಕೊಂಡಿದೆ. ಕಾನೂನಿನನ್ವಯ ಸಿಗಬೇಕಾದ ಸೌಲಭ್ಯಗಳನ್ನು ಪಡೆಯಲು ಲೇಬರ್ ಕೇಸುಗಳನ್ನು ದಾಖಲು ಮಾಡುವುದು ಈ ಟ್ರೇಡ್‌ಯೂನಿಯನ್‌ಗಳ ಮುಖ್ಯ ಚಟುವಟಿಕೆ. ಪ್ಲಾಂಟೇಷನ್ ಕಾನೂನುಗಳು ಎಲ್ಲ ತೋಟಗಳಿಗೂ ಅನ್ವಯಿಸುವುದಿಲ್ಲ ಕಾನೂನು ಅನ್ವಯಿಸಬೇಕಾದರೆ ಕಾಫಿ ತೋಟದ ವಿಸ್ತೀರ್ಣ 25 ಎಕ್ರೆ ಮೇಲ್ಪಟ್ಟು ಇರುವುದು ಮತ್ತು ದುಡಿಯುವ ಆಳುಗಳ ಸಂಖ್ಯೆ 30ಕ್ಕಿಂತ ಹೆಚ್ಚು ಇರಬೇಕು. 1969 ರಲ್ಲಿ ಮೈಸೂರು ರಾಜ್ಯದಲ್ಲಿ 17,000 ಕಾಫಿ ತೋಟಗಳ ಪೈಕಿ ಕಾನೂನು ಅನ್ವಯಿಸುವ ತೋಟಗಳ ಸಂಖ್ಯೆ 700. (ಎಚ್. ಎಸ್. ನಾಗೇಗೌಡ) ಈ ಜಿಲ್ಲೆಯ ಕಾಫಿ ತೋಟಗಳ ಕೂಲಿಕಾರರಲ್ಲಿ ಟ್ರೇಡ್‌ಯೂನಿಯನ್ ಚಟುವಟಿಕೆಯ ವ್ಯಾಪ್ತಿಯಲ್ಲಿ ಬರುವ ಕೂಲಿಕಾರರ ಸಂಖ್ಯೆ ಸರಿಸುಮಾರು ಇಪ್ಪತ್ತು ಸಾವಿರಕ್ಕೆ ಏರಿಲ್ಲ.

ಈ ಜಿಲ್ಲೆಯಲ್ಲಿ ಕಾಫಿ ತೋಟಗಳ ಕೂಲಿಕಾರರ ಹೇಳಿಕೊಳ್ಳುವಂತಹ ಹೋರಾಟಗಳನ್ನು ನಡೆಸಲು. ಇನ್ನೂ ಎಡಪಂಥೀಯ ಟ್ರೇಡ್‌ಯೂನಿಯನ್‌ಗಳಿಗೆ ಸಾಧ್ಯವಾಗಿಲ್ಲ. ಒಡೆದು ಆಳುವ ತೋಟದ ಒಡೆಯರ ಕುತಂತ್ರ, ರಾಜಿಮಾಡಿಕೊಳ್ಳುವ ಇನ್ನಿತರ ಟ್ರೇಡ್‌ಯೂನಿಯನ್‌ಗಳ ದ್ರೋಹ, ಪೋಲೀಸರ ದೌರ್ಜನ್ಯ ಮತ್ತು ಸುಳ್ಳು ಮೊಕದ್ದಮೆಗಳ ಕಿರುಕುಳ ಇವುಗಳನ್ನೆಲ್ಲ ಎದುರಿಸಿ ಸಿ. ಐ. ಟಿ. ಯು. ಮುನ್ನಡೆಯಬೇಕಾಗಿದೆ. ಸಂಘಟನೆಯ ವ್ಯಾಪ್ತಿಯಿಂದ ಹೊರಗೆ ಉಳಿದಿರುವ ಕೆಳಜಾತಿಗಳನ್ನ ಸಂಘಟಿಸಿ ಹೋರಾಟ ನಡೆಸುವುದು, ಮೂಲಭೂತ ರಾಜಕೀಯ ಸಮಸ್ಯೆಗಳ ಅರಿವು ಮೂಡಿಸುವುದು ಸಿ. ಐ. ಟಿ.ಯು. ವಿನ ಕರ್ತವ್ಯ. ಈ ರೀತಿಯ ಹೋರಾಟಗಳನ್ನು ರೂಪಿಸುವಾಗ ಚಳುವಳಿಗಳನ್ನು ನಡೆಸುವಾಗ ಸಣ್ಣ ತೋಟಗಳ ಮಾಲಿಕರ ಮತ್ತು ಸಣ್ಣ ಮಧ್ಯಮ ರೈತರ ಹಿತಾಶಕ್ತಿಗಳಿಗೆ ವಿರೋಧವಾಗದ ರೀತಿಯಲ್ಲಿ ತಂತ್ರಗಳನ್ನು ರೂಪಿಸುವ ಕೌಶಲವೂ ಅಗತ್ಯ. ಸಧ್ಯಕ್ಕೆ ಅಖಿಲ ಕರ್ನಾಟಕ ರೀತಿಯಲ್ಲಿಯೇ ಈ ಜಿಲ್ಲೆಯ ಎಡಪಂಥೀಯ ಟ್ರೇಡ್‌ಯೂನಿಯನ್ ಚಳುವಳಿ ದುರ್ಬಲವಾಗಿದೆ.

ಕೇರಳ ರಾಜ್ಯದಲ್ಲಿ ಕಾಫಿ ತೋಟದ ಕೂಲಿಕಾರರ ದಿನ ಕೂಲಿ ರೂ.9-97, ತಮಿಳುನಾಡಿನಲ್ಲಿ ರೂ. 8-52, ಕರ್ನಾಟಕದಲ್ಲಿ ಈ ಕೂಲಿ ರೂ. 7-25. ಕಾಫಿಯ ಬೆಲೆಯನ್ನು ಕೇಂದ್ರೀಕೃತ ಕಾಫಿ ಮಂಡಲಿ ನಿಶ್ಚಯಿಸುತ್ತದೆ ಮತ್ತು ಈ ಎಲ್ಲ ರಾಜ್ಯಗಳಲ್ಲಿ ಕಾಫಿ ಬೆಳೆಗಾರರಿಗೆ ಸಿಗುವ ಬೆಲೆ ಒಂದೇ ಎನ್ನುವುದನ್ನು ಗಮನಿಸಿದಾಗ ನಮ್ಮ ರಾಜ್ಯದ ಕಾರ್ಮಿಕ ಚಳುವಳಿಯ ದೌರ್ಬಲ್ಯ ಎದ್ದು ಕಾಣುತ್ತದೆ.

ಕಾಫಿ ತೋಟಗಳ ಕೂಲಿಕಾರರ ಕೂಲಿ ನಿಶ್ಚಯಿಸಲ್ಪಡುವುದು ಸರಕಾರ, ತೋಟ ಒಡೆಯರ ಸಂಘಟನೆಗಳು ಮತ್ತು ಕಾರ್ಮಿಕ ಸಂಘಗಳ ಸಮಕ್ಷಮದಲ್ಲಿ ನಡೆಯುವ ತ್ರಿಪಕ್ಷೀಯ ಒಪ್ಪಂದಗಳ ಮೂಲಕ ಆದರೆ ವಾಸ್ತವವಾಗಿ ಒಪ್ಪಂದವನ್ನು ಕೂಲಿಗಾರರ ಮೇಲೆ ಏಕಪಕ್ಷೀಯವಾಗಿ ಹೇರಲ್ಪಡುತ್ತದೆ ಸರ್ಕಾರ, ತೋಟದ ಒಡೆಯರು ಮತ್ತು ಒಡೆಯರ ಏಜೆಂಟರಂತೆ ವರ್ತಿಸುವ ಕೆಲವು ಕಾರ್ಮಿಕ ಸಂಘಗಳು, ಒಪ್ಪಂದದ ನಾಟಕವಾಡಿ ಕೂಲಿಕಾರರ ಕೂಲಿಯಲ್ಲಿ ಅಲ್ಪ ಸ್ವಲ್ಪ ಹೆಚ್ಚಳವನ್ನು ಮಾಡುತ್ತದೆ. ಎಡಪಂಥೀಯ ಕಾರ್ಮಿಕ ಸಂಘಗಳ ಪ್ರತಿಭಟನೆ ಸೊರಗುತ್ತದೆ. ಈ ರೀತಿಯ ಅಲ್ಪ ಹೆಚ್ಚಳಕ್ಕೆ ಭಾರೀ ಪ್ರಚಾರ ಕೊಡುವ ನಮ್ಮ ಪತ್ರಿಕೆಗಳು ಸಂಘಟಿತ ಕಾರ್ಮಿಕ ವರ್ಗ ಒಡೆಯರಿಂದ ಕಿತ್ತುಕೊಳ್ಳುವಷ್ಟು ಸಮರ್ಥವಾಗಿವೆ ಎನ್ನುವ ದುರುದ್ದೇಶ ಪೂರಿತ ಭ್ರಮೆ ಹುಟ್ಟಿಸುತ್ತದೆ.

ಆದರೆ ಕಾಫಿ ಪ್ಲಾಂಟರು ಎಂದಾಕ್ಷಣ ದುಂದುಗಾರ ಶ್ರೀಮಂತ ಎನ್ನುವ ಪೂರ್ವಗ್ರಹಪೀಡಿತ ಚಿತ್ರಣ ಕೂಡ ತಪ್ಪು. ನಮ್ಮ ಭೂಮಿ ವ್ಯವಸ್ಥೆಯ ಆರ್ಥಿಕ ಸಂಬಂಧಗಳಲ್ಲಿ ಹೇಗೋ ಹಾಗೆ ಇಲ್ಲಿ ಕೂಡ ಮಧ್ಯಮ ಮತ್ತು ಸಣ್ಣ ತೋಟಗಳ ಮಾಲಿಕರಿದ್ದಾರೆ. ಬಂಡವಾಳಶಾಹಿಯ ಬಿಕ್ಕಟ್ಟಿನ ಬಿಸಿ ಇವರನ್ನು ತಟ್ಟುತ್ತಿದೆ. ಕೃಷಿ ಉಪಕರಣ, ರಾಸಾಯನಿಕ ಗೊಬ್ಬರ ಮತ್ತು ಇನ್ನಿತರ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ ಇವರು ತತ್ತರಿಸುತ್ತಿದ್ದಾರೆ. ಕಾಫಿಯ ಬೆಳೆಯಲ್ಲಿ ಗಿಟ್ಟುವ ಲಾಭ ಕೈಯಿಂದ ಬಾಯಿಗೆ ದಕ್ಕುವಷ್ಟಾಗಿವೆ.

ಇತ್ತೀಚಿನ ವರ್ಷಗಳಲ್ಲಿ ಬ್ರಜಿಲ್‌ನಲ್ಲಿ ಕಾಫಿಯ ಉತ್ಪಾದನೆ ಕುಸಿದ ಕಾರಣ ಇಂಡಿಯಾದ ಕಾಫಿಗೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಏರಿ ಕಾಫಿಯ ಉದ್ಯಮ ಲಾಭದಾಯಕ ಉದ್ಯಮಗಳಲ್ಲಿ ಒಂದಾಗಿದೆ. ಈವಿದ್ಯಮಾನ ಕೊಡಗು ಜಿಲ್ಲೆಯ ಅರ್ಥ ವ್ಯವಸ್ಥೆಯ ಮೇಲೂ ಪ್ರಭಾವ ಬೀರಿದೆ.

ಕೊಡಗು ಜಿಲ್ಲೆಯಲ್ಲಿ ಕಾಫಿಯ ಉತ್ಪಾದನೆ

ವರ್ಷ	ಉತ್ತರ ಕೊಡಗು (ಟನ್ನುಗಳಲ್ಲಿ)	ದಕ್ಷಿಣ ಕೊಡಗು (ಟನ್ನುಗಳಲ್ಲಿ)
1974-75	14,043	15,098
1975-76	15,100	17,096
1976-77	14,829	18,045
1977-78	18,045	27,330
1978-79	18,360	16,990
1979-80	23,790	26,440

(ಆಧಾರ : ಇಂಡಿಯನ್ ಕಾಫಿ ಆಗಸ್ಟ್–ಸೆಪ್ಟೆಂಬರ್ 1980)

ಕೊಡಗು ಜಿಲ್ಲೆಯಲ್ಲಿ ಕಾಫಿಯ ಉತ್ಪಾದನೆ 1974-1975ರಲ್ಲಿ 29,141 ಟನ್ನುಗಳಿಂದ 1979-80 50,230 ಟನ್ನುಗಳಿಗೆ ಏರಿತು. ಕಾಫಿ ತೋಟದ ವಿಸ್ತೀರ್ಣ 1976-77ರಲ್ಲಿ 44,444ಹೆಕ್ಟೇರುಗಳಿಂದ 1977-78ಕ್ಕೆ 44,480 ಹೆಕ್ಟೇರುಗಳಿಗೆ ಏರಿತು. ಆದರೆ ಕಾಫಿತೋಟದ ಕಾರ್ಮಿಕರ ಕೂಲಿ 1970ರಲ್ಲಿ ರೂ. 5.50, 1977ರಲ್ಲಿ ರೂ. 7.00 1979ರಲ್ಲಿ 705 ಮತ್ತು 1980ರಲ್ಲಿ ರೂ. 7.25 ಆಯಿತು. 1974ರಿಂದ 1980ಕ್ಕೆ ಕೂಲಿಯ ಹೆಚ್ಚಳ ರೂ. 1.75. ಆದರೆ ಬೆಲೆಗಳ ವಿಪರೀತ ಏರಿಕೆಯಿಂದ ನಿಜವೇತನ ಕುಸಿದಿದೆ ಎನ್ನುವುದು ಸರ್ವವಿದಿತ. ಆಹಾರ ಪದಾರ್ಥಗಳ ಬೆಲೆ 1974ರಲ್ಲಿ 165.3 ಇದ್ದರೆ 1979ರಲ್ಲಿ 184.4ಕ್ಕೆಏರಿದೆ.ಇದುಸಗಟುಬೆಲೆಯಸೂಚ್ಯಂಕ(ಮೂಲ1970-71= 100 ಇಂಡಿಯನ್ ಕಾಫಿ ಫೆಬ್ರವರಿ-ಮಾರ್ಚ್ 1981) ಕಾಫಿಯ ಸಗಟು ಬೆಲೆ 1974ರಲ್ಲಿ 102.7 ಇದ್ದದ್ದು 1979ಕ್ಕೆ 127.1ಕ್ಕೆ ಏರಿದೆ. (ಮೂಲ 1970-71= 100)ಕಾಫಿಯ ಉತ್ಪಾದನೆ ಹೆಚ್ಚಿ ಅದರ ಬೆಲೆಏರಿಕೆಯ ಲಾಭವೆಲ್ಲ ಕಾಫಿತೋಟದ ಒಡೆಯನಿಗೆ ಸಿಕ್ಕಿದೆ. ಹೀಗೆ ಗಮನಾರ್ಹವಾಗಿ ಹೆಚ್ಚಿದ ಉತ್ಪಾದನೆ ಮತ್ತು ಲಾಭದಲ್ಲಿ ಕೂಲಿಕಾರನಿಗೆ ಪಾಲು ಸಿಕ್ಕುವ ಮಾತಿರಲಿ ಹಳೆಯ ಕೂಲಿಯನ್ನು ಉಳಿಸಿಕೊಳ್ಳಲುಕೂಡ ಸಾಧ್ಯವಾಗಿಲ್ಲ. ಹೀಗೆ ಕಾರ್ಮಿಕನ ದುಡಿಮೆಯನ್ನು ಶೋಷಿಸುವ ಅರ್ಥವ್ಯವಸ್ಥೆ ಮತ್ತು ಈ ವ್ಯವಸ್ಥೆಯನ್ನು ಪೋಷಿಸುವ ಸರ್ಕಾರ ಯಾರ ಪರವಾಗಿದೆ ಎನ್ನುವುದಕ್ಕೆ ಪ್ರತ್ಯೇಕ ವಿವರಣೆ ಬೇಕಿಲ್ಲ.

ಕೊಡಗಿನಲ್ಲಿ ಕಾಫಿತೋಟಗಳ ವಿಸ್ತೀರ್ಣ

ವರ್ಷ	ಉತ್ತರ ಕೊಡಗು (ಹೆಕ್ಟೇರುಗಳಲ್ಲಿ)	ದಕ್ಷಿಣ ಕೊಡಗು (ಹೆಕ್ಟೇರುಗಳಲ್ಲಿ)
1976-77	17,443	27,001
1977-78	17,274	27,206

ಆಧಾರ : ಇಂಡಿಯನ್ ಕಾಫಿ ಡಿಸೆಂಬರ್ 1979–ಜನವರಿ 1980

ಜಾಸ್ತಿ ದುಡಿಮೆ ಕಡಿಮೆ ಮಾತು ಎನ್ನುವ ಘೋಷಣೆಗಳನ್ನು ಉಡಾಯಿಸುವ ನಮ್ಮ ರಾಜಕಾರಣಿಗಳ ಕಪಟವನ್ನು ಈ ಅಂಕಿಅಂಶಗಳು ಎತ್ತಿ ತೋರಿಸುತ್ತದೆ. ಉತ್ಪಾದನೆ ಜಾಸ್ತಿಯಾದರೆ ಮಾತ್ರ ಕೂಲಿಕಾರರ ಉದ್ಧಾರ ಸಾಧ್ಯ ಎನ್ನುವ ನಮ್ಮ ಅರ್ಥಶಾಸ್ತ್ರ, ಪಂಡಿತರ ವಂಚಕ ಸಿದ್ಧಾಂತಗಳನ್ನು ಬಹಳ ಸರಳವಾಗಿ ಸುಳ್ಳಾಗಿಸುತ್ತದೆ.

ಈ ಜಿಲ್ಲೆಯಲ್ಲಿ ಎದ್ದು ಕಾಣುವ ಕೂಲಿಕಾರ–ಯಜಮಾನ ನಡುವಿನ ಅಂತರವನ್ನು ಗುರುತಿಸಲು ಈ ಅಂಕಿ ಅಂಶಗಳ ಸಹಾಯಬೇಕಾಗಿಲ್ಲ. ಈಗ್ಗೆ ಐದು ವರ್ಷಗಳಿಂದ ನಮ್ಮ ಜಿಲ್ಲೆಯ ರಸ್ತೆಗಳಲ್ಲಿ ಹೆಚ್ಚುತ್ತಿರುವ ಕಾರುಗಳ ಸಂಖ್ಯೆ ನೋಡಿದರೇ ಗೊತ್ತಾಗುತ್ತದೆ. ಹಸಿರಿನ ಸಮೃದ್ಧಿಯ ನಡುವೆಯೇ ಒತ್ತೊತ್ತಿನ ಲೈನು ಮನೆಗಳಲ್ಲಿ ವಾಸಿಸುವ ಕಾಫಿತೋಟದ ಕೂಲಿಕಾರರ ದಾರಿದ್ರ್ಯ ಕಣ್ಣು ಕುಕ್ಕುವಂತಿದೆ, ಕಾಫಿ ಪ್ಲಾಂಟರುಗಳು ಮೈಸೂರು ಬೆಂಗಳೂರಿನ ಪಂಚತಾರೆ ಹೋಟೆಲುಗಳಲ್ಲಿ, ರೇಸ್‌ಕೋರ್ಸಿನಲ್ಲಿ ನಡೆಸುವ ವಿಲಾಸದ ಹಿಂದೆ ಬಲಪಂಥೀಯ ರಾಜಕಾರಣದ ಅಬ್ಬರದ ಹಿಂದೆ ಆಳುವ ಪಕ್ಷದ ಚುನಾವಣೆ ಮತ್ತು ಸನ್ಮಾನಗಳಿಗೆ ಸುರಿಯುವ ಹಣದ ಹಿಂದೆ ಕೂಲಿಕಾರರ ದುಡಿತದಿಂದ ದೋಚಿದ ಹಣ ಇದೆ. ಹೀಗೆ ಲೂಟಮಾಡುವ ಹಣವನ್ನು ಯಜಮಾನರುಗಳು ತಮ್ಮ ಸ್ವಂತ ಮೋಜಿಗಷ್ಟೇ ಚೆಲ್ಲುವುದು ಮಾತ್ರವಲ್ಲ. ಆದಾಯ ತೆರಿಗೆಯಿಂದ ತಪ್ಪಿಸಿಕೊಳ್ಳುವ ಉದ್ದೇಶವೂ ಒಂದಾಗಿರುವಂತೆ ಶಾಲೆಗಳಿಗೆ, ದೊಡ್ಡ ಕಾಲೇಜುಗಳಿಗೆ, ದೇವಸ್ಥಾನಗಳಿಗೆ ಸಾಹಿತ್ಯ ಸಮ್ಮೇಳನಗಳಿಗೆ ದಾನಮಾಡಿ ತಮ್ಮ ಹೆಸರನ್ನು ಅಮೃತಶಿಲೆಯ ಫಲಕಗಳಲ್ಲಿ ಶಾಶ್ವತಗೊಳಿಸಲು ಪ್ರಯತ್ನಿಸುತ್ತಾರೆ. ಆದರೆ ತಮ್ಮ ದುಡಿತದಿಂದ ಹುಟ್ಟಿಕೊಳ್ಳುವ ಈ ಭವ್ಯ ಶಾಲೆ-ಕಾಲೇಜುಗಳಿಂದ ಕೂಲಿಕಾರರ ಮಕ್ಕಳು ಹೊರಗಡೆಯೇ ಉಳಿಯುವುದು ಮತ್ತು ಜೀವಮಾನವಿಡೀ ನಿರಕ್ಷರಸ್ಥರಾಗಿ ದೈಹಿಕ ದುಡಿಮೆಯನ್ನೇ ಮಾಡಬೇಕಾಗಿರುವುದು ವರ್ತಮಾನದ ಕ್ರೌರ್ಯಗಳಲ್ಲೊಂದು ಕಾಫಿ ತೋಟಗಳ ಕೂಲಿಕಾರರ ಯಾತನೆ ನೋವು ಮತ್ತು ಉಲ್ಲಾಸಗಳು ಅಕ್ಷರಗಳಾಗಿ ಮೂಡುವುದೇ ಇಲ್ಲ. ಅಕ್ಷರ ಬಲ್ಲ ಬುದ್ಧಿವಂತರು ಮಾತ್ರ ಈ ವಾಸ್ತವವನ್ನು ಮರೆಮಾಚಿ ಪ್ರಕೃತಿ ಸೌಂದರ್ಯದಲ್ಲಿ ತನ್ಮಯರಾಗಿ ಸಾಹಿತ್ಯ ಸೃಷ್ಟಿಸುತ್ತಾರೆ. ಈ ಜೀವವಿರೋಧಿ ಮನೋಭಾವ ಬೋಳೆತನ ಎಂದು ಕರೆಯಲಾಗದ ಧೂರ್ತತನ.

ಕಾಫಿ ಬೆಳೆಗಾರನಿಗೆ ಪಾಯಿಂಟಿಗೆ ಪಾವತಿಯಾದ ಹಣ

ವರ್ಷ	ಪಾಯಿಂಟೊಂದಕ್ಕೆ ರೂ.
1973-74	5,53700
1974-75	5,33275
1975-76	8,39920
1976-77	12,10000
1977-78	7,50000

ಆಧಾರ : ಇಂಡಿಯನ್ ಕಾಫಿ ಫೆಬ್ರವರಿ–ಮಾರ್ಚ್ 1980

ಸರ್ಕಾರದ ಸುಳ್ಳು ಪ್ರಚಾರಗಳು

ಕೊಡಗು ಗೆಜೆಟ್ಟಿನ ಪ್ರಕಾರ ಲೇಬರ್ ಇಲಾಖೆಯ ಅಧಿಕಾರಿಗಳು ಕಾಫಿ ತೋಟಗಳ ಕಾರ್ಮಿಕರ ಲೈನಿಗೆ ಪದೇ ಪದೇ ಭೇಟಿಯಿತ್ತು ಅವರ ಕಷ್ಟಗಳನ್ನು ನಿವಾರಿಸಲು ಪ್ರಯತ್ನಿಸುತ್ತಾರೆ. ಕಾನೂನಿನ ಸೌಲಭ್ಯಗಳನ್ನು ಉಪಯೋಗಿಸಲು ಕೂಲಿಕಾರರಿಗೆ ತಿಳುವಳಿಕೆ ಕೊಡಲಾಗುತ್ತದೆ ಮತ್ತು ಕೂಲಿ ಕೊಡದಿರುವಿಕೆ, ಕಿರುಕುಳ ಇನ್ನಿತರ ಪುಕಾರುಗಳ ಬಗ್ಗೆ ಇತ್ಯರ್ಥ ಮಾಡಲಾಗುತ್ತದೆ. ಕೂಲಿಕಾರರ

(24ನೇ ಪುಟ ನೋಡಿ)

ರಕ್ತದಿಂದ ತೊಯ್ದ
ಮೇ ದಿನದ ಬಾವುಟಕ್ಕೆ
ಕ್ರಾಂತಿಕಾರಿ ಶುಭಾಶಯಗಳು

ಮೇ 1, 1886. ಅಮೇರಿಕಾದ ಚಿಕಾಗೋ ನಗರದಲ್ಲಿ 8 ಗಂಟೆ-ದಿನದ ಒಂದು ಬೇಡಿಕೆಗಾಗಿ, ಸಂಘಟಿತ ಕಾರ್ಮಿಕರ ಚಳುವಳಿಯು ಆಳುವವರ ನಿರ್ದಯ ದಾಳಿಯಿಂದ ರಕ್ತ ಧಾರೆಯಾಗಿ ಚಿಮ್ಮಿದ್ದನ್ನು ಮತ್ತು ಬಹಳಷ್ಟು ಸಾವು ಸಂಭವಿಸಿದ್ದನ್ನು ಕಂಡಿತು.

ಅಂದಿನಿಂದ, ಈ ಗೌರವಯುತ ಮೇ 1 ಅಂತಾರಾಷ್ಟ್ರೀಯ ಕಾರ್ಮಿಕರ ದಿನವಾಗಿ, ಎಲ್ಲಾ ವರ್ಗ ವ್ಯತ್ಯಾಸಗಳನ್ನು ಒಂದು ಸಾಮಾಜಿಕ ಕ್ರಾಂತಿಯ ಮೂಲಕ ಕೊನೆಗೊಳಿಸುವ ಗಂಭೀರ ಸಂಕಲ್ಪದ ದಿನವಾಗಿ ಪರಿವರ್ತನೆಗೊಂಡಿತು.

ಈ ದೇಶದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು, ಇಂದು, ಕ್ರಾಂತಿಕಾರಿ ಪ್ರೇರಣೆಯ ಜೀವಸೆಲೆಯಾದ ಈ ಗೌರವಯುತ ಬಾವುಟವನ್ನು ಕೆಳಗೆಳೆದುಹಾಕಬಯಸುತ್ತಿದ್ದಾರೆ. ಕೋಮುವಾದಿ ಶಕ್ತಿಗಳು ವಿಘಟನೆಯ ಸಂಚುಹೂಡಿ ಶ್ರಮಿಕ ಜನತೆಯ ಒಗ್ಗಟ್ಟನ್ನು ಜಜ್ಜಿಬಿಡುವ ಹಟತೊಟ್ಟಿವೆ ಹಾಗೂ ಶ್ರಮಿಕರ ಆದಮ್ಯ ಶಕ್ತಿಗಳ ವಿರುದ್ಧ ತಮ್ಮ ಆಯುಧಗಳನ್ನು ನಾಚಿಕೆಯಿಲ್ಲದೆ ಹರಿತಗೊಳಿಸುತ್ತಿವೆ. ಎಡರಂಗ ಸರ್ಕಾರ ಪಶ್ಚಿಮ ಬಂಗಾಲವನ್ನು ಸಂಘಟಿತ ಕಾರ್ಮಿಕರ ಅಜೇಯ ಕೋಟೆಯನ್ನಾಗಿಸುವ ಎಲ್ಲಾ ಅವರ ಆರ್ಥಿಕ ಹಕ್ಕುಗಳನ್ನು ಸ್ಥಾಪಿಸುವ ಹಾಗೂ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಅವರು ನಡೆಸುವ ಹೋರಾಟವನ್ನು ಸೇರುವ ಸಂಕಲ್ಪಮಾಡಿದೆ.

ರಕ್ತದಿಂದ ತೊಯ್ದ ಮೇ ದಿನದ ಬಾವುಟಕ್ಕೆ ನಮ್ಮ ಕ್ರಾಂತಿಕಾರೀ ಶುಭಾಶಯಗಳು.

ಪಶ್ಚಿಮ ಬಂಗಾಲ ಸರ್ಕಾರ

ಸಮಾಜವಾದದ ಬದಲಾವಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

(೨ನೇ ಪುಟದಿಂದ)

ನೈತಿಕ ಶ್ರಮವನ್ನು ಮಾರಿಯೇ ಬದುಕಬೇಕಾದವರ ಪಾಡು ಮತ್ತಷ್ಟು ಭೀಕರ-ನಮ್ಮ ದೇಶದಲ್ಲಿ ಇಂದು ಸರಕಾರದ ಅಂಕಿ-ಅಂಶದ ಪ್ರಕಾರವೇ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ದಾಖಲಾಗಿರುವ 1.4 ಕೋಟಿ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆ. ಇನ್ನು ದಾಖಲಾಗದವರ ಸಂಖ್ಯೆಯೂ ಗಣನೀಯವಾಗಿದೆ. ವಿದ್ಯಾವಂತ ನಿರುದ್ಯೋಗಿಗಳ ಒಟ್ಟು ಸಂಖ್ಯೆ 9 ಕೋಟಿಗೂ ಮೀರಿದೆ. ಹಳ್ಳಿಗಾಡಿನ ಭೂಹೀನ ಕೃಷಿಕೂಲಿಗಾರರು ಅರೆ ಉದ್ಯೋಗಿಗಳು. ಇವರ ಸಂಖ್ಯೆಯು ಗ್ರಾಮೀಣ ಜನಸಂಖ್ಯೆಯು ಶೇ. 40 ರಷ್ಟಿದೆ. ಈ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ ನಿರುದ್ಯೋಗ ಸಮಸ್ಯೆಯ ಭೀಕರತೆ ಸ್ವಲ್ಪವಾದರೂ ತಿಳಿಯುತ್ತದೆ.

ಆರ್ಥಿಕ ಬಿಕ್ಕಟ್ಟಿನಿಂದಾಗಿ ಬೆಲೆ ಏರಿಕೆ, ನಿರುದ್ಯೋಗ, ಬಡತನ ಸಮಸ್ಯೆ ತೀವ್ರವಾಗುತ್ತಿದೆ. ಒಂದೆಡೆ ಕೆಲವೇ ಗುತ್ತೆದಾರಿ ಮನೆತನಗಳು ಇಡೀ ದೇಶದ ಸಂಪತ್ತಿನ ಹೆಚ್ಚಿನ ಪಾಲನ್ನು ತೇಖರಿಸಿಕೊಂಡಿವೆ. ಅತ್ಯಂತ ಕೆಳಮಟ್ಟದಲ್ಲಿರುವ ಶೇ. 50ರಷ್ಟು ಮಂದಿ 1968ರಲ್ಲಿ ರಾಷ್ಟ್ರೀಯ ಸಂಪತ್ತಿನ ಶೇ. 19ರಷ್ಟು ಪಾಲನ್ನು ಪಡೆದಿದ್ದರೆ 1976ರಲ್ಲಿ ಇದು ಶೇ. 7ರಷ್ಟಕ್ಕೆ ಇಳಿದಿದೆ. ವಿಶಾಲ ಜನಸಮುದಾಯದ ಜೀವನ ಮಟ್ಟ ಕುಸಿಯುತ್ತಿದೆ. ಬಡ ರೈತರುಭೂಮಿ ಕಳೆದುಕೊಳ್ಳುತ್ತಿದ್ದಾರೆ ಕೃಷಿ ಉತ್ಪನ್ನಗಳಿಗೆ ನ್ಯಾಯಬೆಲೆದೊರಕದೆ ಶೇ. 80ರಷ್ಟಿರುವ ರೈತ ಸಮುದಾಯದ ಆದಾಯ ಮತ್ತು ಕೊಳ್ಳುವ ಶಕ್ತಿ ಕಡಿಮೆಯಾಗುತ್ತಿದೆ. ಪೇಟೆ ಪಟ್ಟಣಗಳ ಕಾರ್ಮಿಕರ, ನೌಕರರ "ನಿಜ ಆದಾಯ"ವೂ ಕುಸಿಯುತ್ತಿದೆ. ಒಂದು ರೂಪಾಯಿಯ ಮೌಲ್ಯ ಇಂದು 18 ಪೈಸೆಗಿಳಿದಿದೆ. ಹಣದುಬ್ಬರ ನಾಗಾಲೋಟದಲ್ಲಿದೆ. ಇದರಿಂದಾಗಿ ಕೈಗಾರಿಕಾ ಪ್ರಗತಿಯಲ್ಲಿ ಹಿಂಜರಿತ ಉಂಟಾಗಿದೆ ಅಥವಾ ಸ್ಥಗಿತವಾಗಿದೆ. ಉದ್ಯೋಗದೊರಕಿಸುವುದಿರಲಿ ಉದ್ಯೋಗದಲ್ಲಿರುವವರೂ ನಿರುದ್ಯೋಗಿಗಳಾಗುತ್ತಿದ್ದಾರೆ.

ಇಪ್ಪತ್ತನೆಯ ಶತಮಾನದ ಅಂಚಿನಲ್ಲಿ ಇಡೀ ಬಂಡವಾಳಶಾಹಿ ಜಗತ್ತು ಆಳವಾದ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಸಾಮ್ರಾಜ್ಯಶಾಹಿ ದೇಶಗಳು ಈ ಬಿಕ್ಕಟ್ಟಿನ ಹೊರೆಯನ್ನು ಹಿಂದುಳಿದ ರಾಷ್ಟ್ರಗಳ ಮೇಲೂ ಮತ್ತು ಸ್ವಲ್ಪ ಭಾಗವನ್ನು ತನ್ನ ದೇಶದ ಕಾರ್ಮಿಕರ ಮೇಲೂ ಹೇರಲು ಪ್ರಯತ್ನಿಸುತ್ತಿವೆ. ಭಾರತದಲ್ಲಿ ಈ ಹೊರೆಯನ್ನು ದುಡಿಯುವ ಜನತೆಯ ಮೇಲೆ ಹೇರಲಾಗುತ್ತಿದೆ. ದುಡಿಯುವ ಜನತೆ ಇದರ ವಿರುದ್ಧ ಸಿಡಿದೆದ್ದಿದೆ. ರೈತರು, ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಅಭೂತಪೂರ್ವ ಹೋರಾಟವನ್ನು ಮಾಡುತ್ತಿದ್ದಾರೆ. ವಿದ್ಯಾರ್ಥಿ-ಯುವಜನವಿಭಾಗವು ಶೈಕ್ಷಣಿಕ ಬೇಡಿಕೆಗಳಿಗಾಗಿ ಮತ್ತು ಉದ್ಯೋಗದ ಬೇಡಿಕೆಗಳಿಗಾಗಿ ತನ್ನ ಕೂಗನ್ನ ಎತ್ತಿದೆ. ಈ ಸಂದರ್ಭದಲ್ಲಿ ಆಳುವ ಸರ್ಕಾರವು ಜನತೆಯ ಚಳುವಳಿಯನ್ನು ದಬ್ಬಾಳಿಕೆಯಿಂದ ದಮನ ಮಾಡಲು ಪ್ರಯತ್ನಿಸುತ್ತಿದೆ. ಸರ್ವಾಧಿಕಾರಿ ಕ್ರಮಗಳನ್ನು ಅನುಸರಿಸುತ್ತಿರುವುದು ಅಲ್ಲದೆ ಜಾತಿ, ಭಾಷೆ, ಪ್ರದೇಶಗಳ ಹೆಸರಿನಲ್ಲಿ ಉನ್ಮತ್ತ ಭಾವನೆಯನ್ನ ಕೆರಳಿಸಿ ಜನತೆಯ ಐಕ್ಯತೆಯನ್ನ ಮುರಿಯಲು ಸಂಚು ನಡೆಸುತ್ತಿದೆ. ಇಡೀ ಜನತೆಯ ಹಕ್ಕುಗಳಿಗೆ ಗಂಡಾಂತರ ಒದಗಿಬಂದಿದೆ. ವಿದ್ಯಾರ್ಥಿ ಸಮುದಾಯವು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ಇತರೆ ಜನವಿಭಾಗದೊಂದಿಗೆ ಸೇರಿ ಹೋರಾಡುವುದರ ಮೂಲಕ ತನ್ನ ಚಾರಿತ್ರಿಕ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ವಿದ್ಯಾರ್ಥಿ-ಯುವಜನರು ಪ್ರತಿಗಾಮಿ ಶಕ್ತಿಗಳ ಕುತಂತ್ರಗಳಿಗೆ ಬಲಿಯಾಗದಂತಿರಲು ಜಾತೀಯತೆ, ಭಾಷಾಂಧತೆ ಇತ್ಯಾದಿ ಸಂಕುಚಿತ ಭಾವನೆಗಳ ವಿರುದ್ಧ ವಿದ್ಯಾರ್ಥಿ ಸಂಘಟನೆಗಳು ಪ್ರಚಾರ ನಡೆಸಬೇಕು. ಅಂಧಶ್ರದ್ಧೆ, ಮೂಢನಂಬಿಕೆಗಳ ವಿರುದ್ಧ ವೈಚಾರಿಕ ಆಂದೋಲನ ಸಾರಬೇಕು.

ವಿದ್ಯಾರ್ಥಿ ಸಂಘಟನೆಗಳು ದಿನನಿತ್ಯದ ಬೇಡಿಕೆಗಳಿಗಾಗಿ ಹೋರಾಡುವುದರೊಂದಿಗೆ ವಿದ್ಯಾರ್ಥಿ ಯುವಜನ ಸಮುದಾಯದ ಮೂಲಭೂತ ಪ್ರಶ್ನೆಗಳಾದ 'ಶಿಕ್ಷಣ' ಮತ್ತು 'ಉದ್ಯೋಗ'ದ ಸಮಸ್ಯೆಗಳ ಬಗ್ಗೆ ಸರಿಯಾದ ತಿಳುವಳಿಕೆ ನೀಡಬೇಕು. ವೈಜ್ಞಾನಿಕವಾಗಿ ವಿಶ್ಲೇಶಿಸಿದರೆ ಈ ಸಮಸ್ಯೆಗಳು ದೇಶದ ಆರ್ಥಿಕ ಸಾಮಾಜಿಕ ವ್ಯವಸ್ಥೆಯ ಪ್ರತಿಫಲವೆಂದು ತಿಳಿಯುತ್ತದೆ, ಆದ್ದರಿಂದ ಸಮಾಜ ವ್ಯವಸ್ಥೆಯ ಮೂಲಭೂತ ಬದಲಾವಣೆಯಿಂದ ಮಾತ್ರ ಈ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಸಾಧ್ಯವೆಂಬ ಚಾರಿತ್ರಿಕ ಸತ್ಯವನ್ನು ತಿಳಿಯಪಡಿಸಬೇಕಾಗಿದೆ. ಶೋಷಣೆ-ಸುಲಿಗೆಇಲ್ಲದ ಹಸಿವು-ಬಡತನಗಳಿಲ್ಲದ ನವ ಸಮಾಜದ ನಿರ್ಮಾಣಕ್ಕಾಗಿ ದುಡಿಯುವ ಜನತೆಯು ನಡೆಸುವ ವರ್ಗ ಹೋರಾಟದ ಒಂದು ಅಂಗವಾಗಿ ವಿದ್ಯಾರ್ಥಿ ಚಳುವಳಿಯು ಬೆಳೆದು ಬರಬೇಕಾಗಿದೆ. ಆಹಾರ, ಬಟ್ಟೆ, ವಸತಿ, ಉದ್ಯೋಗ ಶಿಕ್ಷಣದ ಸಮಸ್ಯೆಗಳಿಲ್ಲದ ಸಮಾಜವಾದಿ ಸಮಾಜ ನಿರ್ಮಾಣಕ್ಕಾಗಿ ಎಲ್ಲ ವಿಭಾಗದೊಂದಿಗೆ ವಿದ್ಯಾರ್ಥಿ-ಯುವಜನತೆಯು ಕಂಕಣತೊಟ್ಟು ಹೋರಾಡಬೇಕಾಗಿದೆ. ಈ ಮೂಲಕ ಸಮಾಜದ ಬದಲಾವಣೆಯಲ್ಲಿ ತಮ್ಮ ಚಾರಿತ್ರಿಕ ಪಾತ್ರವನ್ನು ನಿರ್ವಹಿಸಬೇಕಾಗಿದೆ.

–ಎಸ್. ಆರ್. ಆರಾಧ್ಯ

ಕೊಡಗಿನ ಕಾಫಿ ತೋಟದ ಕೂಲಿಗಾರರ ಸ್ಥಿತಿ

(22ನೇ ಪುಟದಿಂದ)

ರ್‍ಯಾಲಿಗಳನ್ನು ಏರ್ಪಡಿಸಿ ಅವರಲ್ಲಿ ಮಾಲಕರೂ ಭಾಗವಹಿಸುವುದರಿಂದ ಪರಸ್ಪರ ಸೌಹಾರ್ದ ಭಾವನೆ ಮೂಡುತ್ತದೆ.

ಭ್ರಷ್ಟಾಚಾರ ಮತ್ತು ಜಡತ್ವದಿಂದ ನರಳುತ್ತಿರುವ ನಮ್ಮ ನೌಕರಶಾಹಿಯ ಅಂಗವಾಗಿರುವ ಲೇಬರ್ ಇಲಾಖೆ ಲಂಚ ರುಷುವತ್ತಿನಿಂದ ಮುಕ್ತವಾಗಿ ಕೂಲಿಕಾರರ ಪರವಾಗಿ ಕಾರ್ಯವೆಸಗುತ್ತಿದೆ ಎನ್ನುವ ಗೆಜೆಟ್ಟಿನ ಪಂಡಿತರ ವರ್ಣನೆಯನ್ನು ಎಂಥ ಪೆದ್ದ ಕೂಡ ನಂಬಲಾರ. ವಸ್ತು ಸ್ಥಿತಿ ತಿಳಿದ ಯಾರು ಕೂಡ ಜಿಗುಪ್ಸೆ ಪಡುವಷ್ಟು ಸುಳ್ಳು ವಿವರಣೆ. ಇದು ಕಾಫಿ ತೋಟದ ಕೂಲಿಕಾರರು ಕನಿಷ್ಟ ಕೂಲಿ ಮತ್ತು ಕಾನೂನಿನ ಕೆಲವು ಸೌಲಭ್ಯಗಳನ್ನು ಪಡೆದಿದ್ದರೆ ಅದಕ್ಕೆ ಕಾರಣ ಎಡಪಂಥೀಯ ಟ್ರೇಡ್ ಯೂನಿಯನ್‌ಗಳ ಹೋರಾಟ.

ಸರ್ಕಾರದ ಬೇಜವಾಬ್ದಾರಿತನ ಮತ್ತು ಲೇಬರ ಇಲಾಖೆಯ ಜಡತ್ವದಿಂದ ಕೂಲಿಕಾರರ ನೂರಾರು ಕೇಸುಗಳು ಇತ್ಯಾರ್ಥವಾಗದೆ ಧೂಳು ತಿನ್ನುತ್ತ ಬಿದ್ದಿವೆ. ಕಾರ್ಮಿಕರ ಹೋರಾಟಗಳನ್ನು ಬಗ್ಗುಬಡೆಯಲು ಲೇಬರ ಅಧಿಕಾರಿಗಳು ಮಾಲಿಕರೊಂದಿಗೆ ಶಾಮಿಲಾಗುತ್ತಾರೆ.

ಪೋಲಿಸರು ತೋಟದ ಯಜಮಾನರ ಪರವಾಗಿ ಹಸ್ತಕ್ಷೇಪ ಮಾಡಿ ಕಾರ್ಮಿಕರ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ದಾಖಲು ಮಾಡುತ್ತಾರೆ. ವಿರಾಜಪೇಟೆ ತಾಲ್ಲೂಕಿನ ಕುಟ್ಟ ಗ್ರಾಮದಲ್ಲಿ ಕಾಫಿ ತೋಟದ ಕೂಲಿಕಾರರು ಹೋರಾಟ ನಡೆಸಿದಾಗ ಅವರನ್ನು ಕೆಲಸದಿಂದ ವಜಾಗೊಳಿಸಿದ್ದು ಮಾತ್ರವಲ್ಲ ಕ್ರಿಮಿನಲ್ ಅಪಾದನೆಗಳ ಮೇಲೆ ಮೂವತ್ತಕ್ಕೂ ಹೆಚ್ಚು ಕಾರ್ಮಿಕರ ಮೇಲೆ ಕೇಸುಗಳನ್ನು ಹೂಡಲಾಗಿದೆ. ಆದರೆ ಕಾನೂನು ಬಾಹಿರವಾಗಿ ದಬ್ಬಾಳಿಕೆ ನಡೆಸುವ ಕಾಫಿ ತೋಟದ ಯಜಮಾನರುಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳಲಾಗುವುದಿಲ್ಲ. ತಮ್ಮ ಬದುಕಿನ ಹಕ್ಕುಗಳಿಗಾಗಿ ಹೋರಾಟ ನಡೆಸುವ ಕೂಲಿಕಾರರನ್ನು ಆರೋಪಿಗಳೆಂದು ಜೈಲಿನಲ್ಲಿಡುವ, ಕೋರ್ಟಿನ ಕಟಕಟೆ ಹತ್ತಿಸುವ ನಮ್ಮ ಪೋಲೀಸು ಮತ್ತು ನ್ಯಾಯಾಂಗ ವ್ಯವಸ್ಥೆಯ ನಿರ್ದಯೆ, ದೇಶದ ವರ್ಗ ಸ್ವರೂಪವನ್ನು ಸ್ಪಷ್ಟಗೊಳಿಸುತ್ತದೆ.

ಬಂದೆವೋ ನಾವು

ಬಂದೆವೋ ನಾವು ಕೆಂಪು ಬಾವುಟ ಹಿಡಿದು
ಈ ನೆಲದ ಕೂಲಿಗಳು ಒಂದಾಗಿ ನಡೆದು॥

ಗಣಿಯ ಗುಣಿಗಳಲಿ ಮುಂದುರಿ ಮಣ್ಣಾಗಿ ಮುಳುಗಿ
ಕಾರ್ಖಾನೆ ಚಿಮಣಿಯಲಿ ಸುಟ್ಟು ಸುರಳಿಯಾಗಿ ॥ಬಂ॥

ಕುದಿವ ಕುಲಿಮೆಗಳಲ್ಲಿ ಕಬ್ಬಿಣದ ರಸದಲ್ಲಿ
ಮುಖ ತೊಳೆದು ಬೆಂದು ಬೆಳಗಿದವರು ॥ಬಂ॥

ಉತ್ತು ಬಿತ್ತುವ ನೆಲ ನೆಲ ತಾಯ ಮಕ್ಕಳ
ಬರಿ ಹೊಟ್ಟೆಗಳ ಬಸಿರ ಬೆಂಕಿಯಾಗಿ ॥ಬಂ॥

ನೆಲ ಬಗೆದ ಜಲ ತೆಗೆದು ನೆಲನಗಿಸಿ
ಕಾಡುನಾಡಾಗಿಸಿದ ನಾಡಾಡಿಗಳು ॥ಬಂ॥

ದುಡಿವನೆಲ ಹಿಡಿದಿಟ್ಟ ದಣಿದುಡಿಗೆ
ಈ ತಾಯಿಗಂಡರ ಹಿಂಡಿಗೆ ಮಿಂಡರಾಗುತ ॥ಬಂ॥

ಮೂಟೆ ಹೊರುವವರ ರಾಟೆಹಿಡಿದವರ
ಕನಸುಗಳ ಕಣಸು ಹೊತ್ತವರು ॥ಬಂ॥

ತುಳಿತುಳಿದು ನೆಲಕಚ್ಚಿ ಮಲಗಿರುವ
ತೊಗಲ ಸಂತೆಯ ಹೆಣ್ಣ ಕಣ್ಣೀರ ಹೊಳೆಯಾಗಿ ॥ಬಂ॥

ಉಳುವ ನೆಲದೊಳಗಿಂತ ಬಡಿವ ಕುಲುಮೆಗಳಿಂದ
ಬೆಸುಗೆಗೊಂಡು ಬೆಳೆದುಬಂದ ಕುಡಿಗಳಾಗಿ ॥ಬಂ॥

ಅಡಿಸಡಿಗೆ ಬಿಡುಗಡೆಯ ಹಾಡುಕಟ್ಟಿ
ಅಡತಡೆಯ ಬಂದ ಸಂಕೋಲೆ ಕಳಚಿ ॥ಬಂ॥

-ಸಿ. ವೀರಣ್ಣ

(8ನೇ ಪುಟದಿಂದ)

ಸ್ವಾತಂತ್ರ್ಯ ಹೋರಾಟ - ಕಾರ್ಮಿಕ ವರ್ಗದ ಪಾತ್ರ

ರಿಂದ ಮುಂಬಯಿಯ ಶ್ರಮಜೀವಿಗಳು ಅದರ ವಿರುದ್ಧ ಪ್ರಥಮ ರಾಜಕೀಯ ಮುಷ್ಕರ ಪ್ರಾರಂಭಿಸಿದರು. ಒಂದುಲಕ್ಷ ಕೆಲಸಗಾರರು ಅಂದಿನ ರಾಜಕೀಯ ಮುಷ್ಕರದಲ್ಲಿ ಪಾಲ್ಗೊಂಡರು. ಸಾರ್ವಜನಿಕರು ಹರತಾಳ ಆಚರಿಸಿದರು. ನಗರದ ಬಹುಸಂಖ್ಯೆ ಜನರು ಕಾರ್ಮಿಕರ ಈ ರಾಜಕೀಯ ಹೋರಾಟದಲ್ಲಿ ಭುಜಕ್ಕೆ ಭುಜ ಸೇರಿಸಿದರು.

ಜುಲೈ 24ರಿಂದ ಸಶಸ್ತ್ರ ಪೋಲೀಸರನ್ನೂ ಸೈನಿಕರನ್ನೂ ಜನತೆ ಎದುರಿಸಿದರು, ರಸ್ತೆ ಮೇಲೆ ಯುದ್ಧ ನಡೆಯಿತು. ಆಳುವ ಬ್ರಿಟಿಷರು ಸಿಟ್ಟಿನಿಂದ, ದ್ವೇಷದಿಂದ ಜನರ ಮೇಲೆ ಬಿದ್ದರು ಆದರೆ ಅಂಜದ ಜನತೆ ಧೈರ್ಯದಿಂದ ಅದನ್ನೆದುರಿಸಿದರು. ಹೀಗಾಗಿ ಇಡೀ ಮುಂಬಯಿ ನಗರ ಧೀರತನದಿಂದ ಸಾವಿರಾರು ದುಡಿಯುವ ಜನತೆಯು ನಡೆಸುತ್ತಿರುವ ಕೂಟ ಯುದ್ಧದಿಂದ ಪ್ರತಿಧ್ವನಿಸಿತು. ಹೀಗಾಗಿ ಭಾರತದ ಶ್ರಮಜೀವಿವರ್ಗ "ರಸ್ತೆ ಹೋರಾಟದ" ಪ್ರಥಮ ಪಾಠವನ್ನು ಮುಂಬಯಿಯ ರಸ್ತೆಯಲ್ಲಿ ಕಲಿತರು. ಕಾರ್ಮಿಕ ವರ್ಗದ ಕ್ರಾಂತಿಕಾರೀ ಹೋರಾಟದಲ್ಲಿ ಹೊಸ ಅಧ್ಯಾಯವನ್ನು ಬರೆದಂಥಾ ಅತಿ ಮಹತ್ವದ ಘಟನೆಯಿದು.

ಬ್ರಿಟಿಷ ಅಧಿಕಾರಿಗಳ ನೇತೃತ್ವದಲ್ಲಿ ಸೈನಿಕರ ದೊಡ್ಡ ಗುಂಪೊಂದು ಕಾರ್ಮಿಕರೆಲ್ಲ ಚದುರಬೇಕೆಂದು ಆಜ್ಞೆ ಮಾಡಿತು. ತಮ್ಮ ಸ್ವಂತ ಶಕ್ತಿ ಮತ್ತು ತಮ್ಮ ವರ್ಗದ ಅಭಿಮಾನವನ್ನು ಸಾಕಷ್ಟು ಕಂಡುಕೊಂಡಂತಾ ಕಾರ್ಮಿಕವರ್ಗವನ್ನು ಎದುರಿಸುತ್ತಿದ್ದೇವೆಂಬುದನ್ನು ಸಶಸ್ತ್ರ ಸೈನಿಕರು ತಿಳಿದಿರಲಿಲ್ಲ. ಜನಸಮೂಹ ಈ ಆಜ್ಞೆಯನ್ನು ಧಿಕ್ಕರಿಸಿತು. ಸಿಟ್ಟುಗೊಂಡ ಅಧಿಕಾರಿಗಳು ಜನರ ಮೇಲೆ ಗೋಲೀಬಾರು ಮಾಡಿದರು. ಪೋಲೀಸರ ಹೀನ ದಬ್ಬಾಳಿಕೆಗೆ ಪ್ರಾರಂಭದಲ್ಲಿ ಹಿಂದೇಟುಹಾಕಿದ ಜನಸಮೂಹ, ತುಸು ಸಮಯದಲ್ಲೇ ಎರಡು ಗುಂಪುಗಳಾಗಿ ಒಟ್ಟಿಗೆ ಸೇರಿದರು. ಈ ಸಲ ಮಾತ್ರ ಅವರು ತಮ್ಮ ಶಾಂತ ವರ್ತನೆಯನ್ನು ಬಿಟ್ಟು ಪ್ರತಿಕ್ರಿಯೆಗೆ ಅಣಿಯಾಗಿ, ಸಿಕ್ಕಿದ್ದನ್ನು ಕೈಯಲ್ಲಿ ಹಿಡಿದು ಹೋರಾಡಿದರು. ದಿಟ್ಟತನದ ಧೈರ್ಯ ಮತ್ತು ಪರಾಕ್ರಮದಿಂದ ಮುಂಬಯಿಯ ಕೆಲಸಗಾರರು ಬರೇ ಇಟ್ಟಂಗಿ-ಕಲ್ಲುಗಳಿಂದ ಸಶಸ್ತ್ರ ಸೈನಿಕರ ವಿರುದ್ಧ ಹೋರಾಡಿದರು. ಆದರೆ ಈ ಅಸಮಾನ ಯುದ್ಧ ಬಹಳ ಹೊತ್ತು ನಡೆಯಲಾರದಾಯಿತು. ಹಲವಾರು ಕಾರ್ಮಿಕರು ಧೀರ ಮೃತ್ಯುವನ್ನಪ್ಪಿದರು. ನೂರಾರು ಜನ ಜಖಂಆದರು ಮೃತ್ಯುವನ್ನಪ್ಪಿದ ಧೀರರಲ್ಲಿ ಗಣಪತ ಗೋವಿಂದ ಎಂಬವ ಕೊನೆಯುಸಿರೆಳೆಯುವತನಕ ಧೈರ್ಯದಿಂದ ಹೋರಾಡುವಂತೆ ಜನತೆಯನ್ನು ಹುರಿದುಂಬಿಸಿ ಮಾರ್ಗದರ್ಶನ ಮಾಡುತ್ತಿದ್ದರು.

ತಿಲಕ ಅವರಿಗೆ ಶಿಕ್ಷೆಯಾಗಿರುವುದರಿಂದ ಭಾರತದ ಪೋಲೀಸ ಜನರಲ್ಲಿ ಅಸಮಾಧಾನ ತುಂಬಿದೆಂದು ತಿಳಿದ ಬ್ರಿಟಿಷ ಸರಕಾರ ಆ ದಿವಸ ಭಾರತದ ಪೋಲೀಸರನ್ನು ಈ ರಸ್ತೆ ಯುದ್ಧದಲ್ಲಿ ಉಪಯೋಗಿಸಲಿಲ್ಲ. ಪೋಲೀಸರನ್ನೊಳಗೊಂಡು ಎಲ್ಲ ವರ್ಗದ ಜನರಲ್ಲೂ ಸಾಮ್ರಾಜ್ಯಶಾಹಿ ವಿರೋಧಿ ಭಾವನೆ ಬೆಳೆಯುತ್ತಿದೆಂಬುದನ್ನು ತೋರಿಸಿಕೊಡುವ ಈ ಸಂಗತಿ ಮಹತ್ವಪೂರ್ಣವಾಗಿದೆ.

ಈ ಹೋರಾಟದಲ್ಲಿ ಮತ್ತೊಂದು ವಿಷಯ ಬೆಳಕಿಗೆ ಬಂದಿದೆ. ಕಾರ್ಮಿಕರ ಸಾರ್ವತ್ರಿಕ ರಾಜಕೀಯ ಮುಷ್ಕರಕ್ಕೂ ಮುಂಬಯಿಯ ಇತರ ಜನರ ಹರತಾಳಕ್ಕೂ ಇದ್ದ ನಿಕಟ ಸಂಬಂಧ. ವ್ಯಾಪಾರಸ್ಥರು ಕೆಲಸಗಾರರಿಗೆ ಅಗ್ಗದರದಿಂದ ಅಕ್ಕಿ ಮಾರಾಟಮಾಡಿದ್ದು ಅಂಥ ಘಟನೆಗಳಲ್ಲೊಂದು. ಸಾಮ್ರಾಜ್ಯಶಾಹಿ ವಿರೋಧಿ ಕ್ರಾಂತಿಕಾರಿ ಹೋರಾಟ ನಡೆಯುತ್ತಿರುವಾಗ ಶ್ರಮಜೀವಿವರ್ಗ ಮತ್ತು ಮಧ್ಯಮ ವರ್ಗದೊಳಗೆ ಬೆಳೆದುಬರುತ್ತಿರುವ ಐಕ್ಯಾನುಬಂಧ.

ಈ ಸಂದರ್ಭದಲ್ಲಿ ದೊಡ್ಡ ರಾಷ್ಟ್ರೀಯ ಬಂಡವಾಳಶಾಹಿವರ್ಗ ಬ್ರಿಟಿಷರಿಗೆ ಸಹಾಯಮಾಡುತ್ತಿದ್ದಾಗ, ಸಣ್ಣ ವ್ಯಾಪಾರಿವರ್ಗ ಹೋರಾಟ ಮಾಡುತ್ತಿರುವ ಶ್ರಮಜೀವಿವರ್ಗದ ಜೊತೆ ಮೈತ್ರಿಯಲ್ಲಿತ್ತು.

ಈ ಹೋರಾಟದ ಕುರಿತು ಎ. ಐ. ಚಿಚೆರೋವ ಈ ರೀತಿ ಬರೆಯುತ್ತಾರೆ: "ಮುಂಬಯಿಯ ಕಾರ್ಮಿಕವರ್ಗದ ಜಿಗುಟುತನ, ಹೋರಾಟವನ್ನು ಉತ್ತಮ ರೀತಿಯಲ್ಲಿ ಪರಿಣಾಮಕಾರಿಯಾಗಿ ನಡೆಸಲು ಅನುಸರಿಸುತ್ತಿದ್ದ ಪದ್ಧತಿ, ಸುಸಂಘಟಿತವಾಗಿ ನಡೆಸುತ್ತಿದ್ದ ಕಾರ್ಯಗಳು ಪ್ರಶಂಸನೀಯವಾಗಿವೆ. ಸಾಮ್ರಾಜ್ಯಶಾಹಿ ವಿರೋಧವಾದ ತಮ್ಮ ಪ್ರಥಮ ಹೋರಾಟದಲ್ಲಿ ಯುವಕಾರ್ಮಿಕರ ನೈತಿಕಮಟ್ಟ ಉಚ್ಚಮಟ್ಟದಲ್ಲಿತ್ತೆಂಬುದನ್ನು ತೋರ್ಪಡಿಸುತ್ತದೆ".

ಜುಲೈ 27ರಂದು ಹೊಸ ಶಕ್ತಿಗಳು ರಣರಂಗದಲ್ಲಿಳಿದವು. ಇಷ್ಟು ದಿವಸ ಕಾರ್ಮಿಕವರ್ಗಕ್ಕೆ ಬೆಂಬಲ ಕೊಡುತ್ತಿದ್ದ ಮಧ್ಯಮವರ್ಗ ರಸ್ತೆ ಯುದ್ಧದಲ್ಲಿ ಸೇರಿಕೊಂಡಿತು. ಹಾಗೆಯೇ ಕಾರ್ಖಾನೆಗಳಲ್ಲಿ ದುಡಿಯದಿರುವ ಕೆಲಸಗಾರರೂ ಸೇರ್ಪಡೆಯಾದರು. ಚಿಕ್ಕ-ಪುಟ್ಟ ವ್ಯಾಪಾರಸ್ಥರೂ ಸಕ್ರಿಯ ಭಾಗವಹಿಸಲು ಮುಂದಾದರು. ಇದನ್ನೆಲ್ಲ ಸಹಿಸಲಾರದೆ ಸತತ ಗೋಲೀಬಾರು ನಡೆಸಲಾಯಿತು. ಗಲ್ಲಿಗಲ್ಲಿಗಳಲ್ಲಿ ಹೋರಾಟ ನಡೆಯಿತು. ನೂರಾರು ಜನ ಅಸುನೀಗಿದರು.

ಜುಲೈ 28ರಂದು ಬೇರೆಯವರ ಮನೆಗಳಲ್ಲಿ ಕೆಲಸಮಾಡುತ್ತಿರುವ ಕೆಲಸಗಾರರೂ ಇದರಲ್ಲಿ ಸೇರಿದರು. ತಾವು ಕೆಲಸಮಾಡುತ್ತಿರುವ ಮನೆಗಳ ಮಹಡಿಯಿಂದ ಸೈನಿಕರ ಮೇಲೆ ಕಲ್ಲಿನ ಮಳೆಗರೆದರು.

ಜುಲೈ 23ರಂದು ಪ್ರಾರಂಭವಾದ ರಾಜಕೀಯ ಸಾರ್ವತ್ರಿಕ ಮುಷ್ಕರ ಜುಲೈ 28ರಂದು ಕೊನೆಗೊಂಡಿತು. ತಿಲಕರವರಿಗೆ 6 ವರ್ಷ ಶಿಕ್ಷೆಯಾಗಿದ್ದು, ಅವರ ಪ್ರತಿ ಒಂದು ವರ್ಷದ ಶಿಕ್ಷೆಗೆ ಒಂದು ದಿವಸದ ಮುಷ್ಕರ ಹೂಡುವುದೆಂದು ನಿರ್ಧರಿಸಲಾಯಿತು. ಆದರೆ ಈ ಹೋರಾಟ ಬಹಳಷ್ಟು ಜೀವ ಹಾನಿಗೆ ಮೂಲವಾಯಿತು. 200 ಜನರಿಗಿಂತಲೂ ಹೆಚ್ಚುಜನ ಮೃತಪಟ್ಟರು, ಸಾವಿರಾರು ಜನರಿಗೆ ಜಖಂ ಆಯಿತು, ನೂರಾರು ಜನ ಜೈಲು ಸೇರಿದರು.

ಕಲಿಯತಕ್ಕ ಪಾಠ

ಮುಂಬಯಿ ಕೆಲಸಗಾರರ ಅತಿ ನಿಕೃಷ್ಟ ಆರ್ಥಿಕ ಪರಿಸ್ಥಿತಿ ಈ ರಾಜಕೀಯ ಸಾರ್ವತ್ರಿಕ ಮುಷ್ಕರದ ಹಿನ್ನೆಲೆಯಾಗಿದೆ. ಬ್ರಿಟಿಷ್ ಮತ್ತು ಸ್ಥಾನಿಕ ಬಂಡವಾಳದಾರರ ಅತಿ ಹೆಚ್ಚಿನ ಸುಲಿಗೆಯ ವಿರುದ್ಧ ಹೋರಾಡುತ್ತಿರುವಾಗ ಬ್ರಿಟಿಷರ ವಸಾಹತುಆಳ್ವಿಕೆಯೇ ಸುಲಿಗೆಗೆ ಮುಖ್ಯ ಕಾರಣವೆಂಬುದನ್ನು, ವಸಾಹತು ದೇಶದ ಕಾರ್ಮಿಕರಾಗಿ ಅವರು ತಿಳಿದುಕೊಳ್ಳಹತ್ತಿರುವುದು, ಅವರಲ್ಲಿ ಬಂದಂಥಾ ಈ ತಿಳುವಳಿಕೆಯೇ ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸುವಂತೆ ಅವರಿಗೆ ಪ್ರಚೋದನೆ ಮಾಡಿತು. ತಮ್ಮ ನಲ್ಮೆಯ ಮುಖಂಡ ತಿಲಕ ಅವರ ಬಂಧನ ಮತ್ತು ಅವರಿಗಿತ್ತ ಶಿಕ್ಷೆ ಸಾಮ್ರಾಜ್ಯಶಾಹಿಯ ದಮನ ನೀತಿಯನ್ನು ತೋರ್ಪಡಿಸಿತು. ಅವರು ಇದನ್ನೆದುರಿಸಲು ಎದ್ದುನಿಂತರು.

ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡಲು ಮುಂಬಯಿ ಕಾರ್ಮಿಕರು ಅನುಸರಿಸಿದ ಕ್ರಮಯಾವುದೆಂದರೆ ಚಾರಿತ್ರಿಕವಾಗಿ ಅನುಭವ ಕಂಡ ಕಾರ್ಮಿಕ ವರ್ಗದ ಪದ್ಧತಿ, ಅದು ಯಾವುದೆಂದರೆ ರಾಜಕೀಯ ಸಾರ್ವತ್ರಿಕ ಮುಷ್ಕರ ಮತ್ತು ನಮ್ಮನ್ನ ದಮನ ಮಾಡುವ ಸಶಸ್ತ್ರ ಪೋಲೀಸರೊಡನೆ ಪ್ರತ್ಯಕ್ಷ ಹೋರಾಟ.

ಪ್ಯಾರಿಸ್ಸಿನ ಕಾರ್ಮಿಕರು ಸಶಸ್ತ್ರ ಎದುರಾಳಿತನದಿಂದಲೇ 1871ರಲ್ಲಿ ಪ್ಯಾರಿಸ್ ಕಮ್ಯೂನ್ ಸ್ಥಾಪಿಸಿದರು. ಅದರಂತೆಯೇ 1905ರಲ್ಲಿ ರಷ್ಯದ ಕಾರ್ಮಿಕರ ಮುನ್ನಡೆಯಾಯಿತು. ಈ ರೀತಿ ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಕ್ರಾಂತಿಕಾರಿ ಪರಂಪರೆಯನ್ನು ಅನುಸರಿಸಿಕೊಂಡು ಮುಂಬಯಿಯ ಶ್ರಮಜೀವಿಗಳು ಕೂಡ 1908ರ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಲ್ಲಿ ರಾಜಕೀಯ ಸಾರ್ವತ್ರಿಕ ಮುಷ್ಕರ ಮತ್ತು ಬಹಿರಂಗ ವಿರೋಧ ಮಾಡುವ ಮಾರ್ಗವನ್ನೇ ಅನುಸರಿಸಿದರು.

ಆ ಸಮಯದಲ್ಲಿ ಭಾರತದಲ್ಲಿ ಕಾರ್ಮಿಕ ವರ್ಗದ ರಾಜಕೀಯ ಪಾರ್ಟಿ ಜನ್ಮ ತಾಳಿದ್ದಿಲ್ಲ. ವರ್ಗ ಸಿದ್ಧಾಂತದ ದೃಷ್ಟಿಯಲ್ಲಿ ಕಾರ್ಮಿಕ ವರ್ಗಕ್ಕೆ ಯಾವುದೇ ರೀತಿಯ ರಾಜಕೀಯ ಮಾರ್ಗದರ್ಶನ ಸಿಗಲಿಲ್ಲ. ಈ ರೀತಿಯ ನಕಾರಾತ್ಮಕ ಪರಿಸ್ಥಿತಿಯಲ್ಲಿ ಕೂಡ ಅವರು ತಮ್ಮದೆ ಆದ ಕ್ರಾಂತಿಕಾರಿ ಮಾರ್ಗ ಅನುಸರಿಸಲು ಹಿಂದೆ ಬಿದ್ದಿಲ್ಲ. ಮುಂಬಯಿ ಕಾರ್ಮಿಕ ಹೋರಾಟದ ಚರಿತ್ರಾರ್ಹ ಗುಣವನ್ನು ಇದು ತೋರಿಸುತ್ತದೆ.

ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಪಥ ಅಂಜುಬುರುಕತನ ಮತ್ತು ಸಮಯಬಂದಾಗ ಸಾಮ್ರಾಜ್ಯಶಾಹಿ ಜೊತೆ ಒಪ್ಪಂದ ಮಾಡಿಕೊಳ್ಳುವಂಥದ್ದು. ಆದರೆ ಕಾರ್ಮಿಕ ವರ್ಗ ತೋರಿಸಿದ ಪಥ ಬಂಡವಾಳಶಾಹಿ ಮುಖಂಡತ್ವದ ಕಾಂಗ್ರೆಸ್ಸಿನ ದಾರಿಯ ಸಂವಿರೋಧವಾಗಿದೆ. ಆದ್ದರಿಂದಲೇ ಬಂಡವಾಳಶಾಹಿಗಳು ಮುಂಬಯಿ ಕಾರ್ಮಿಕ ವರ್ಗದ ಒಪ್ಪಂದವಾಗದಂಥ ಈ ಹೋರಾಟವನ್ನು ಒಪ್ಪುವುದಿಲ್ಲ.

ರಾಜಕೀಯ ಪರಿಜ್ಞಾನವಿಲ್ಲದಿದ್ದರೂ ಬೆಳೆಯುತ್ತಿರುವ, ರಾಜಕೀಯ ಸಿದ್ಧಾಂತವಿಲ್ಲದೆಯೂ, ತಮ್ಮದೇ ಆದ ರಾಜಕೀಯ ಪಾರ್ಟಿ ಇಲ್ಲದೆಯೂ ನಡೆಸಲ್ಪಡುತ್ತಿರು ಮುಂಬಯಿ ಕಾರ್ಮಿಕ ವರ್ಗದ ಈ ಹೋರಾಟ ಭಾರತ ದೇಶದ ಜನರಿಗೆ ಸಾಮ್ರಾಜ್ಯಶಾಹಿ ವಿರೋಧಿ ಜನತಾ ಚಳುವಳಿ ಸರಿಯಾದ ಮಾರ್ಗ ತೋರಿಸಿಕೊಟ್ಟಿದೆ. ಭಾರತದ ರಾಜಕೀಯ ಚರಿತ್ರೆಯಲ್ಲಿ ಇದರ ಮಹತ್ವವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

ಸಾಮ್ರಾಜ್ಯಶಾಹಿಗಳೂ ಬಂಡವಾಳಶಾಹಿ ಚರಿತ್ರಾಗಾರರೂ ಈ ಹೋರಾಟವನ್ನು ಮುಚ್ಚಿಡಲು ಪ್ರಯತ್ನ ಮಾಡಿದರೂ ಕೂಡ, [illegible]ನ್ನರ ದೃಷ್ಟಿಯಿಂದ ಅದನ್ನ ತಪ್ಪಿಸಲು ಸಾಧ್ಯವಾಗಲಿಲ್ಲ. ಈ ಹೋರಾಟವನ್ನು ನೋಡಿ ಲೆನಿನ್ನರು 1908ರಲ್ಲೇ ಈ ಪ್ರತಿಕ್ರಿಯೆ ವ್ಯಕ್ತ ಮಾಡಿದ್ದಾರೆ. "ಭಾರತದಲ್ಲಿ ಕೂಡ ಶ್ರಮಜೀವಿ ವರ್ಗ ರಾಜಕೀಯ ಸಾಮೂಹಿಕ ಚಳುವಳಿ ನಡೆಸಲು ತಿಳುವಳಿಕೆಯನ್ನು ಬೆಳೆಸಿಕೊಂಡಿದೆ. ಇಂಥ ಬೆಳವಣಿಗೆಯಾಗಿರುವುದರಿಂದ ರಷ್ಯದ ಪದ್ಧತಿಯ ಬ್ರಿಟಿಷ ಆಡಳಿತ ಭಾರತ ದೇಶದಲ್ಲಿ ಕೊನೆಗೊಂಡಂತೆಯೇ ಸರಿ"

ಭಾರತ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕ ವರ್ಗ ಪ್ರಾರಂಭದಿಂದ ಕೊನೆಯವರೆಗೂ ಮಹತ್ತರವಾದ ಪಾತ್ರವಹಿಸಿದೆ. ನಾವಿಕರ ಬಂಡಾಯ ಮಾಡಿ ಬ್ರಿಟಿಷರು ಕೊನೆಯುಸಿರೆಳೆಯುವವರೆಗೂ ಕಾರ್ಮಿಕ ತನ್ನ ದೇಶ ಪ್ರೇಮವನ್ನು ಪ್ರದರ್ಶಿಸಿದ, ಸಾಮ್ರಾಜ್ಯಶಾಹಿ ವಿರೋಧಿ ಧೋರಣೆಯನ್ನು ನಿಷ್ಠೆಯಿಂದ ಮುಂದುವರಿಸಿದ.

ಕಾರ್ಮಿಕ ವರ್ಗದ ಮಹಾನ್ ಪಾತ್ರದಲ್ಲಿ ಒಂದಂಶವನ್ನಷ್ಟೆ ಓದುಗರ ಮುಂದಿಟ್ಟಿದ್ದೇನೆ. ಇದು ನೂರಲ್ಲಿ ಒಂದು ಭಾಗ. ಇನ್ನೂ 99 ಭಾಗ ಉಳಿದಿದೆ. ಅವಕಾಶ ಬಂದಾಗಲೆಲ್ಲ ಓದುಗರ ಮುಂದೆ ಅವುಗಳನ್ನು ಮಂಡಿಸಲು ಪ್ರಯತ್ನ ಮಾಡಲಾಗುವುದು.

-ಎನ್. ಕೆ. ಉಪಾಧ್ಯಾಯ

(ಮಾನವ ಜೀವನಕ್ಕೆ ಬೇಕಾದ ವಸ್ತುಗಳ) ಉತ್ಪಾದನೆ ಮತ್ತು ಉತ್ಪಾದನೆಯ ನಂತರದ ಕಾರ್ಯವಾದ, ಉತ್ಪನ್ನಗಳ ವಿನಿಮಯ-ಇವೇ ಎಲ್ಲ ಸಾಮಾಜಿಕ ರಚನೆಯ ಆಧಾರವಾಗಿರುತ್ತದೆ ಎಂಬ ತಿಳುವಳಿಕೆಯಿಂದ, ಚರಿತ್ರೆಯ ಭೌತವಾದಿ ಪರಿಕಲ್ಪನೆ ಆರಂಭವಾಗುತ್ತದೆ. ಚರಿತ್ರೆಯಲ್ಲಿ ಕಾಣಿಸಿಕೊಂಡ ಪ್ರತಿಯೊಂದು ಸಮಾಜದಲ್ಲಿಯೂ, ಏನು ಉತ್ಪಾದನೆಯಾಯಿತು, ಅದು ಹೇಗೆ ಉತ್ಪಾದನೆಯಾಯಿತು. ಮತ್ತು ಉತ್ಪನ್ನಗಳು ಹೇಗೆ ವಿನಿಮಯಗೊಂಡವು ಎಂಬುದರ ಮೇಲೆಯೇ ಸಂಪತ್ತು ವಿತರಣೆಯಾದ ವಿಧಾನ ಮತ್ತು ಸಮಾಜವರ್ಗಗಳು ಅಥವಾ ಮಟ್ಟಗಳಾಗಿ ವಿಭಜನೆಯಾದ ವಿಧಾನ ಅವಲಂಬಿತವಾಗಿವೆ. ಈ ದೃಷ್ಟಿಕೋನದಿಂದ ಎಲ್ಲ ಸಾಮಾಜಿಕ ಬದಲಾವಣೆಗಳು ಮತ್ತು ರಾಜಕೀಯ ಕ್ರಾಂತಿಗಳ ಅಂತಿಮ ಕಾರಣಗಳನ್ನು ಮನುಷ್ಯರ ಮಿದುಳುಗಳಲ್ಲಿ, ನಿರಂತರ ಸತ್ಯ ಮತ್ತು ನ್ಯಾಯದ ಬಗ್ಗೆ ಮನುಷ್ಯನಿಗಿರುವ ಉತ್ತಮ ಅಂತರ್ದರ್ಶನದಲ್ಲಿ ಹುಡುಕಬೇಕಾಗಿಲ್ಲ. ಆದರ ಬದಲು ಉತ್ಪಾದನೆ ಮತ್ತು ವಿನಿಮಯದ ವಿಧಾನಗಳಲ್ಲಿ ಆದ ಬದಲಾವಣೆಗಳಲ್ಲಿ ಹುಡುಕಬೇಕು. ಅವುಗಳನ್ನು ಪ್ರತಿ ಯುಗದ ತತ್ವಶಾಸ್ತ್ರದಲ್ಲಿ ಹುಡುಕಬಾರದು, ಅರ್ಥಶಾಸ್ತ್ರದಲ್ಲಿ ಹುಡುಕಬೇಕು.

ಫ್ರೆಡರಿಕ್ ಎಂಗೆಲ್ಸ್

ಮಾವೋ ಸೂಕ್ತಿಗಳು

1. ಸಾವಿರಾರು ಮಂದಿಯ ಮೇಲೆ, ಸಾವಿರಾರು ಮಂದಿ ಧರ್ಮಬಲಿಗಳು, ತಮ್ಮ ಜೀವಗಳನ್ನು ಧೀರತನದಿಂದ ಜನರಿಗಾಗಿ ಅರ್ಪಿಸಿದ್ದಾರೆ; ನಾವು ಅವರ ಪತಾಕೆಯನ್ನು ಮೇಲೆ ಎತ್ತಿಹಿಡಿಯೋಣ ಮತ್ತು ಅವರ ನೆತ್ತರಿಂದ ಕಡುಗೆಂಪಾಗಿರುವ ಪಥದಲ್ಲಿಯೇ ಮುನ್ನಡೆಯೋಣ.

ಮಾವೋ-ಡಿಸೆಂಬರ್ 28, 1947

2. ಜನತೆಯಿಂದ ಮತ್ತು ಜನತೆಯು ಸಕ್ರಿಯ ಪಾತ್ರವಹಿಸುವುದರಿಂದ ಮಾತ್ರವೇ ಚರಿತ್ರೆಯ ನಿರ್ಮಾಣ ಸಾಧ್ಯ.

ಮಾವೋ-24 ಏಪ್ರಿಲ್, 1945

ಮಾರ್ಕ್ಸ್‌ವಾದ : ಒಂದು ಪಕ್ಷಿನೋಟ

ಮಾರ್ಕ್ಸ್‌ವಾದವೆಂದರೇನು? ಎಂಬ ಪ್ರಶ್ನೆ ಜಗತ್ತಿನ ಎಲ್ಲೆಡೆಗಳಲ್ಲೂ ಕೇಳಿಬರುತ್ತಿದೆ. ಬಂಡವಾಳಶಾಹಿ ಪದ್ಧತಿಯು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದಾಗಲೆಲ್ಲಾ ಈ ಪ್ರಶ್ನೆಯು ಎಲ್ಲೆಡೆಗಳಲ್ಲಿ ಕೇಳಿಬರುತ್ತಿದೆ, ಮಾತ್ರವಲ್ಲ ಅದರ ಕುರಿತು ಅಭ್ಯಾಸಮಾಡಿದ ಲೇಖನಗಳು ಹೆಚ್ಚುಹೆಚ್ಚಾಗಿ ಬರೆಯಲ್ಪಡುತ್ತವೆ.

ಭಾರತದಲ್ಲಿ ಇದೀಗ 34 ವರ್ಷಗಳ ಕಾಂಗ್ರೆಸ್ ಆಡಳಿತೆಯ ನಂತರ ದೇಶದ ಯಾವುದೇ ಸಮಸ್ಯೆಗಳು–ಭೂಸಮಸ್ಯೆ, ನಿರುದ್ಯೋಗಸಮಸ್ಯೆ, ಬೆಲೆಯೇರಿಕೆ ಸಮಸ್ಯೆ, ಅನಕ್ಷರತೆಯ ಸಮಸ್ಯೆ ಇತ್ಯಾದಿ-ಯಾವುದೇ ತರದ ಪರಿಹಾರಗಳನ್ನು ಕಾಣದಿರುವಾಗ ಮಾರ್ಕ್ಸ್‌ವಾದ, ಮಾರ್ಕ್ಸ್‌ವಾದೀ ಪಕ್ಷ ಇತ್ಯಾದಿ ಕುರಿತು ಎಲ್ಲಾ ವರ್ತುಲಗಳಲ್ಲಿ ಪ್ರಶ್ನೆಗಳು ಏಳುತ್ತಿವೆ. ಇವುಗಳ ಕುರಿತು ಅಲ್ಪಸ್ವಲ್ಪವಾದರೂ ತಿಳಿದುಕೊಳ್ಳಲು ಪ್ರಯತ್ನ ನಡೆಯುತ್ತಿದೆ.

ಕೆಲವೇಕೆಲವು ಪುಟಗಳ ಒಂದು ಲೇಖನದಲ್ಲಿ ಮಾರ್ಕ್ಸ್‌ವಾದದ ಕುರಿತು ವಿವರಣೆ ನೀಡುವುದು ಅಸಾಧ್ಯವಾದರೂ ಅದರ ಒಂದು ಪಕ್ಷಿನೋಟ ಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಸಮಾಜದಲ್ಲಿ ಕೃಷಿಯೇ ಪ್ರಧಾನವಾಗಿತ್ತು. ಭೂಮಿಯೇ ಕೃಷಿಗೆ ಸಾಧನ ಆಧಾರವಾದುದರಿಂದ ಭೂಮಾಲಕನೇ ಸಮಾಜದಲ್ಲಿ ಶ್ರೇಷ್ಠನಾಗಿದ್ದ. ಭೂ ಮಾಲಕರಲ್ಲಿ ದೊಡ್ಡವ ಬಲಿಷ್ಟರಾಜನಾಗಿದ್ದ. ಸಮಾಜದಲ್ಲಿ ಅಲ್ಪಸ್ವಲ್ಪ ಭೂಮಿಯಿದ್ದ ಅಥವಾ ಏನೂ ಭೂಮಿಯಿಲ್ಲದೆ ಕೃಷಿಯ ಎಲ್ಲಾ ಕೆಲಸದಲ್ಲಿ ಭಾಗವಹಿಸುತ್ತಿದ್ದವರು ಅಧಿಕ ಮಂದಿ. ಅವರೇ ಭೂದಾಸರು. ತೀರಾ ಬಡವರು. ಭೂಮಾಲಕರ ಎಲ್ಲಾ ಬಿಟ್ಟಿ ಬೇಗಾರಿ ಮಾಡಲು ಇವರು ಒದ್ದರು. ಭೂಮಾಲಕರ ರಕ್ಷಣೆಗೆ ನಿಂತು ಹೋರಾಡಬೇಕಾದವರು ಇವರು. ಇವರ ಪೈಕಿ ಎಲ್ಲರೂ ಬಿಡುಕಾಲದಲ್ಲಿ ಅಥವಾ ಕೆಲ ವಿಭಾಗಗಳು ಪೂರ್ತಿಕಾಲದಲ್ಲಿ ಕೈಕಸಬುಗಳಲ್ಲಿ ನಿರತರಾಗಿದ್ದು, ಸಮಯಕ್ಕೆ ಬೇಕಾದ ವಸ್ತು ಉಪಕರಣ ಆಯುಧಗಳನ್ನು, ಪಾತ್ರೆಗಳನ್ನು ಬಟ್ಟೆಬರೆಗಳನ್ನು, ಶೃಂಗಾರ ಸಾಧನಗಳನ್ನು ಇತ್ಯಾದಿ ತಯಾರಿಸುತ್ತಿದ್ದರು.

ಹೀಗಿದ್ದ ಸಮಾಜದಲ್ಲಿ ವಸ್ತುಗಳ ವಿನಿಮಯ ಜಾಸ್ತಿಯಾಗುತ್ತ ವಿನಿಮಯಕ್ಕೆ ಹಣ ಉಪಯೋಗಿಸಲ್ಪಡುತ್ತಾ ವ್ಯಾಪಾರಿ ಮಧ್ಯಮವರ್ಗ ಬೆಳೆಯುತ್ತಾ ಬರುತ್ತದೆ. ಈ ವ್ಯಾಪಾರಿಗಳ ಸ್ಥಾನಮಾನ, ಆರಂಭದಲ್ಲಿ ಇತರ ಕಸಬುದಾರರಷ್ಟೆ ಕೆಳಗಿದ್ದರೂ, ಕ್ರಮೇಣ ಅವರ ಸ್ಥಾನಮಾನವು ಜಾಸ್ತಿಯಾಗುತ್ತಾ ಹೋದಂತೆ ಅವರ ಕೈಯಲ್ಲಿ ಹಣದ ಚಲಾವಣೆ ಅಧಿಕಗೊಂಡಿತು. ಸಮಾಜದಲ್ಲಿ ಅವರ ಸ್ಥಾನ ಮೇಲಕ್ಕೇರಿತು.

ಕೃಷಿ ಪ್ರಧಾನವಾಗಿದ್ದು, ಕೈಕಸಬು ಗುಡಿಕೈಗಾರಿಕೆಗಳು ಸಮೃದ್ಧವಾಗಿದ್ದ ಕಾಲವನ್ನು ಶ್ರಮಪ್ರಧಾನ ಆರ್ಥಿಕತೆಯೆಂದು ಕರೆಯಬಹುದು. ಗ್ರಾಮವೇ ಪಾಳೆಯಗಾರಿ ಸಮಾಜದ ಆಧಾರ.

ಈ ಪಾಳೆಯಗಾರ ಸಮಾಜ ವ್ಯವಸ್ಥೆಯ ಗರ್ಭದಲ್ಲಿ ಬಂದ ವ್ಯಾಪಾರಸ್ಥ ಮಧ್ಯಮವರ್ಗ ಒಂದು ಹೊಸ ಸಮಾಜ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಅದೇ ಬಂಡವಾಳಶಾಹಿ ಸಮಾಜವಷ್ಟೆ.

ವಸ್ತುಗಳೆಲ್ಲವೂ (ಅಥವಾ ಅಧಿಕ ವಸ್ತುಗಳು) ಮಾರುಕಟ್ಟೆ (ಮಾರಾಟ) ಗಾಗಿ ತಯಾರಾಗುವುದು ಗ್ರಾಮಾಂತರ ಪ್ರದೇಶಗಳಿಂದ ಭೂದಾಸರು, ಕೈಕಸಬುದಾರರು, ಭೂಮಿ ಕಳೆದುಕೊಂಡು ಕೈಕಸಬು ಕಳೆದುಕೊಂಡು "ಕೆಲಸ ಕೆಲಸ" ಎಂದು ಕೆಲಸ ಹುಡುಕುತ್ತಾ ಪೇಟೆ ಪಟ್ಟಣಗಳಿಗೆ ಅಲೆಯುವುದು ಬಂಡವಾಳಶಾಹಿ ಸಮಾಜ ವ್ಯವಸ್ಥೆಗೊಳ್ಳುವುದಕ್ಕೆ ಅತ್ಯವಶ್ಯಕವಾದ ಸ್ಥಿತಿಗತಿಗಳು.

ಎಲ್ಲ ವಸ್ತುಗಳನ್ನು ಕಡಿಮೆ ಕ್ರಯಕ್ಕೆ ದೊಡ್ಡ ಪ್ರಮಾಣದಲ್ಲಿ ಕೊಂಡುಕೊಂಡು ಅವುಗಳನ್ನು ಮಾರುಕಟ್ಟೆಗಳಿಗೆ, ಸರಾಗವಾಗಿ ಚಿಲ್ಲರೆ ಅಥವಾ ರಖಂ ಆಗಿ ಅಧಿಕ ಕ್ರಯಕ್ಕೆ ಮಾರಾಟ ಮಾಡಿ ಲಾಭಗಳಿಸುವವರೇ ವ್ಯಾಪಾರಸ್ಥರು. ಇವರೇ ಮುಂದೆ ಕೃಷಿವಸ್ತುಗಳ ಮೇಲೆ ಹಿಡಿತ ಪಡೆಯುವರು. ಮಾತ್ರವಲ್ಲ, ಕೈಗಾರಿಕಾ ಸಾಮಾಗ್ರಿಗಳನ್ನು ಸ್ವತಃ ತಯಾರಿಸುವವರೂ ಆಗುತ್ತಾರೆ. ಹೀಗೆ ಕೈಗಾರಿಕಾಬಂಡವಾಳ ಬೆಳೆಯುತ್ತದೆ. ಕ್ರಮೇಣ ಕೈಗಾರಿಕಾ ಉತ್ಪತ್ತಿಯೇ ಪ್ರಧಾನ ಉತ್ಪತ್ತಿಯಾಗುತ್ತದೆ. ಸಾಮಾಜಿಕ ಆರ್ಥಿಕ ವ್ಯವಸ್ಥೆಯಲ್ಲಿ ಕೈಗಾರಿಕಾ ಬಂಡವಾಳಗಾರರೇ ಮುಖ್ಯಸ್ಥರಾಗುತ್ತಾರೆ.

ಸ್ವಾಭಾವಿಕವಾಗಿ ಈ ವ್ಯಾಪಾರಸ್ಥರು-ಬಂಡವಾಳಗಾರರು ರಾಜಕೀಯ ಹಕ್ಕುಗಳಿಗಾಗಿ ಹೋರಾಡಲು ಅಧಿಕಾರಗಳಿಗಾಗಿ ರಾಜ್ಯಾಡಳಿತೆಯ ಪಾಲುಗಾರಿಕೆಗಾಗಿಯೂ ಹೋರಾಡಲು ನಿರ್ಬಂಧಿತರಾಗುತ್ತಾರೆ. ಹಳೆಯ ಪದ್ಧತಿಗಳ ವಿರುದ್ಧ ಸಂಪ್ರದಾಯಗಳ ವಿರುದ್ಧ ಸಂಬಂಧಗಳ ವಿರುದ್ಧ ತೀವ್ರ ರಾಜಕೀಯ-ಸಾಮಾಜಿಕ ಹೋರಾಟಗಳು, ಅವುಗಳಿಗೆ ಸಂಬಂಧಿಸಿದ ತತ್ವಗಳು, ಪ್ರಣಾಳಿಕೆಗಳು ಬೆಳೆಯುತ್ತವೆ. ಒಟ್ಟಿನಲ್ಲಿ ಚಾರಿತ್ರಿಕವಾಗಿ ಈ ಚಳುವಳಿಗಳನ್ನೇ "ಪ್ರಜಾಸತ್ತಾತ್ಮಕ ಚಳುವಳಿ" ಎಂದು ಕರೆಯಲಾಗಿದೆ. ಹೀಗೆ ರಾಜಶಾಹಿಯ ವಿರುದ್ಧ, ಸಂಪ್ರದಾಯದ ವಿರುದ್ಧ, ಹಳೆಯ ಕಂದಾಚಾರಗಳ ವಿರುದ್ಧ, "ಪ್ರಜಾಪ್ರಭುತ್ವ"ದ ಬಾವುಟ ಎತ್ತಿ ಹಿಡಿಯಲ್ಪಡುತ್ತದೆ. ಕೈಗಾರಿಕೆಯ ಬೆಳವಣಿಗೆಗೆ ವಿದ್ಯಾಭ್ಯಾಸ ಹೇಗೆ ಸಹಾಯಕವಾಗುತ್ತದೋ ಅದೇ ರೀತಿ ಈ ಚಳುವಳಿಗೂ "ವಿಜ್ಞಾನ" ಮತ್ತು ವೈಜ್ಞಾನಿಕ ದೃಷ್ಟಿಕೋನವು ಸಹಾಯಕವಾಗುತ್ತದೆ.

ಪ್ರಜಾಪ್ರಭುತ್ವ ಕ್ರಾಂತಿ ನಡೆದು ರಾಜಪದ್ಧತಿಹೋಗಿ ಬಂಡವಾಳಶಾಹಿ ಸಮಾಜವ್ಯವಸ್ಥೆಯು ಅಧಿಕಾರಾರೂಢವಾದಾಗಲೇ ಕೈಗಾರಿಕೆಯಲ್ಲಿ ಅತಿ ಮುಖ್ಯ ಪಾತ್ರವಹಿಸುವ ಮತ್ತು ಸಂಖ್ಯೆಯಲ್ಲಿ ಅಧಿಕವಾಗಿರುವ ಕಾರ್ಮಿಕರು ಬೆಳೆದುಬರುತ್ತಾರೆ. ಈ ಕಾರ್ಮಿಕರಿಗೂ ಬಂಡವಾಳಗಾರರಿಗೂ ತಿಕ್ಕಾಟ ಘರ್ಷಣೆ ಹೆಚ್ಚು ಬೆಳೆಯುತ್ತದೆ. ಕಾರ್ಮಿಕರ ಹೋರಾಟಗಳು ಬೆಳೆಯುತ್ತದೆ. ದಂಗೆಗಳಾಗುತ್ತದೆ. ಅವರು ಶೋಷಣೆಯ ವಿರುದ್ಧ, ಬಡತನದ ವಿರುದ್ಧ ನಿರುದ್ಯೋಗದ ವಿರುದ್ಧ ತೀವ್ರ ಹೋರಾಟಗಳನ್ನು ಮಾಡುತ್ತಾರೆ. ರಾಜಕೀಯಕ್ಕೆ ಇಳಿಯುತ್ತಾರೆ. ಅವರನ್ನು ತೀವ್ರ ದಬ್ಬಾಳಿಕೆಗೆ ಗುರಿಪಡಿಸಿ ಅವರು ಮೇಲೇಳದಂತೆ ಬಂಡವಾಳಶಾಹಿಗಳು ಅವರ ರಾಜಕೀಯ ಶಕ್ತಿ ಮತ್ತು ರಾಜಕೀಯ ತತ್ವಗಳು ಪ್ರಯತ್ನಿಸುತ್ತವೆ.

ಈ ಕಾರ್ಮಿಕರ ಹೋರಾಟಗಳು ಅಂತರಾಷ್ಟ್ರೀಯವಾಗಿ ಬೆಳೆದುಬಂದು, ಕಾರ್ಮಿಕರ ಅನುಭವವು ನಿರಂತರವಾಗಿ ಬೆಳೆದುಬಂದಾಗ "ಈ ಚಾರಿತ್ರಿಕ ಅನುಭವ"ಕ್ಕೆ ಸೈದ್ಧಾಂತಿಕ ರೂಪ ಕೊಟ್ಟು ಕಾರ್ಮಿಕವರ್ಗದ ಲೋಕ ತತ್ವವನ್ನು ರೂಪಿಸಿದವರೇ ಮಾರ್ಕ್ಸ್ ಮತ್ತು ಎಂಗೆಲ್ಸ್‌ರು.

ಈ ಮೇಧಾವಿಗಳು ಪ್ರತಿಪಾದಿಸಿದ ಕಾರ್ಮಿಕವರ್ಗದ ತತ್ವ ಸಿದ್ಧಾಂತಗಳನ್ನೇ ಒಟ್ಟಿನಲ್ಲಿ "ಮಾರ್ಕ್ಸ್‌ವಾದ" ಎನ್ನುವುದು.

ಈ ತತ್ವವು ಕಾರ್ಮಿಕರ ಎಲ್ಲಾ ಹೋರಾಟಗಳಿಗೂ ಮಾರ್ಗದರ್ಶನ ಮಾಡುತ್ತದೆ. ಕಾರ್ಮಿಕವರ್ಗದ ರಾಜಕೀಯ ತತ್ವವನ್ನು ಬೆಳಗಿಸಿ ನಿರ್ಧರಿಸುತ್ತದೆ. ಕಾರ್ಮಿಕವರ್ಗದ "ಸಮಾಜವಾದಿ ಕ್ರಾಂತಿ"ಗೆ ನಿರ್ದೇಶಕ ಕ್ರಾಂತಿಕಾರೀ ತತ್ವವೇ "ಮಾರ್ಕ್ಸ್‌ವಾದ".

ಮಾರ್ಕ್ಸ್‌ವಾದವು ಕಾರ್ಮಿಕವರ್ಗದ ಮುನ್ನಡೆಗೆ ಬಾಧಕವಾದ ಎಲ್ಲಾ ಪರಕೀಯ ತತ್ವಗಳ ವಿರುದ್ಧ ಹೋರಾಡುತ್ತಾ ಬೆಳೆದುಬಂತು. ಸ್ವತಃ ತಾವು ಯಾವ ತತ್ವಗಳಿಗನುಸಾರವಾಗಿ ಚಿಂತನೆಮಾಡಬೇಕು, ಕಾರ್ಯವೆಸಗಬೇಕು ಎಂಬುದನ್ನು ಕಾರ್ಮಿಕ ವರ್ಗಕ್ಕೆ ತೋರಿಸುತ್ತಾ ಬಂತು.

ಮಾರ್ಕ್ಸ್‌ವಾದವು ಅತ್ಯಂತ ಕ್ರಾಂತಿಕಾರೀ ತತ್ವ–ಈ ತತ್ವದ ಆಧಾರದಲ್ಲಿ ಕಾರ್ಯಾಚರಣೆ ಮಾಡಿದರೆ ಕಾರ್ಮಿಕವರ್ಗದ ಅಧಿಕಾರ ಸ್ಥಾಪಿಸಿ, ಸಮಾಜದಲ್ಲಿ ವರ್ಗರಹಿತ, ಎಲ್ಲರೂ ದುಡಿಯುವುದು, ಎಲ್ಲರೂ ಸುಖಸಮೃದ್ಧಿಯ ಜೀವನ ನಡೆಸುವುದು, ಬಡವಶ್ರೀಮಂತ ವರ್ಗಭೇದಗಳಿಲ್ಲದ ಸಮಾಜದ ರಚನೆ ಮಾಡುವುದು ಸಾಧ್ಯವೆಂದು ರಷ್ಯನ್ ಕ್ರಾಂತಿ ಸಾಧಿಸಿದೆ. ಚೈನಾದ ಕ್ರಾಂತಿ ತೋರಿಸಿಕೊಟ್ಟಿದೆ.

"ಲೆನಿನ್", 'ಮಾವೊ' ಮಾರ್ಕ್ಸ್‌ವಾದಿಗಳಾದುದರಿಂದಲೇ, ಈ ವೈಜ್ಞಾನಿಕವಾದ ಸಾಮಾಜಿಕ ಶಾಸ್ತ್ರವನ್ನು ತಮ್ಮ ತಮ್ಮ ದೇಶದಲ್ಲಿರುವ ಸ್ಥಿತಿಗತಿಗಳಿಗೆ ಅನ್ವಯಿಸಿದುದರಿಂದಲೇ ಅಲ್ಲಿ ಅವರು ಯಶಸ್ವಿ ಕ್ರಾಂತಿಗಳನ್ನು ಸಾಧಿಸಲು ಸಾಧ್ಯವಾಯಿತು.

ಅದೇ ಮಾರ್ಕ್ಸ್‌ವಾದದ ಸಹಾಯದಿಂದಲೇ ವಿಯೆಟ್ನಾಂನಂತಹ ಸಣ್ಣ ರಾಜ್ಯವು ಅಮೇರಿಕಾದಂತಹ ಬೃಹತ್ ಮಿಲಿಟರಿ ಶಕ್ತಿಯನ್ನು ಸೋಲಿಸಿ ತನ್ನ ಕ್ರಾಂತಿಯನ್ನು ಯಶಸ್ವಿಗೊಳಿಸಿತು. ಹೋಚಿಮಿನ್‌ರೇ ಈ ಸಾಧನೆಯನ್ನು ಮಾಡಿದ ಮಹಾವ್ಯಕ್ತಿ.

ಜಗತ್ತಿನಾದ್ಯಂತ ಇಂದು ಈ ಮಾರ್ಕ್ಸ್‌ವಾದಕ್ಕೂ ಬಂಡವಾಳಶಾಹಿ ತತ್ವಕ್ಕೂ ಎಲ್ಲಾ ಕ್ಷೇತ್ರಗಳಲ್ಲಿ-ರಾಜಕೀಯ ಮತ್ತು ಸೈದ್ಧಾಂತಿಕ ಘರ್ಷಣೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ನಡೆಯುತ್ತಲೇ ಇದೆ.

ಒಟ್ಟಿನಲ್ಲಿ ಮಾರ್ಕ್ಸ್‌ವಾದವೆಂದರೆ :–

1. ಕಾರ್ಮಿಕವರ್ಗದ ಚಾರಿತ್ರಿಕ ಜಾಗತಿಕ ದೃಷ್ಟಿಕೋನ.

2. ಕಾರ್ಮಿಕವರ್ಗದ ಚಿಂತನಾ ವಿಧಾನ ಮತ್ತು ಆ ಚಿಂತನಾ ವಿಧಾನದ ಮೂಲಕ ಬೆಳೆಸಿಕೊಂಡು ಬರುತ್ತಿರುವ ಸಿದ್ಧಾಂತಗಳ ರೂಪರೇಷೆಗಳು.

3. ಕಾಲಾಂತರದಲ್ಲಿ ಸಮಾಜ ವ್ಯವಸ್ಥೆಯು ಯಾವ ಸಾಮಾಜಿಕ ನಿಯಮಗಳಿಗನುಸಾರವಾಗಿ ಸ್ಥಿತ್ಯಂತರವಾಯಿತು ಎಂಬುದನ್ನು ಸೂಚಿಸುವ ನಿಯಮಾವಳಿಗಳು.

ವರ್ಗಹೋರಾಟವೇ ಚರಿತ್ರೆಯ ಚಾಲಕಶಕ್ತಿ. ಶೋಷಣೆಗೊಳಗಾದ ವರ್ಗಗಳ ಜನ, ಹೋರಾಟ, ದಂಗೆ ಕ್ರಾಂತಿನಡೆಸಿ ಕಾಲಗರ್ಭದಲ್ಲಿ ಬೆಳೆಯುವ ಉತ್ಪಾದನಾಶಕ್ತಿಗಳಿಗನುಸಾರವಾಗಿ ಉತ್ಪಾದನಾ ಸಂಬಂಧಗಳನ್ನು ಏರ್ಪಡಿಸುತ್ತಾರೆ.

ಲಾಭ-ಯಾವುದೇ ಲಾಭವಾಗಿರಲಿ, ವ್ಯಾಪಾರ, ವ್ಯಾಪಾರಿಯ ಲಾಭ ಬಂಡವಾಳಗಾರನ ಲಾಭ, ಮಧ್ಯವರ್ತಿಗಳ ಕಮಿಷನ್ ಇತ್ಯಾದಿ ಕಾರ್ಮಿಕನ ಕೂಲಿಕೊಡದ ಶ್ರಮ ವಿಭಾಗವೇ ಆಗಿದೆ.

ಹಳೆಯದು ಹೋಗಿ ಹೊಸದು ಬೆಳೆದುಬರುವುದು ಪ್ರಕೃತಿಯಲ್ಲಿ ಎಷ್ಟು ಸಹಜವೊ ಅಷ್ಟೇ ಸಹಜ, ಆಧುನಿಕ ಜಗತ್ತಿನಲ್ಲಿ ಕಾರ್ಮಿಕ ಶಕ್ತಿ ರಾಜಕೀಯ ಶಕ್ತಿಯಾಗಿ ಬೆಳೆಯುವುದು.

ಮೂಲಭೂತ ಕ್ರಾಂತಿ ಸಾಧಿಸುವ ಮುಖಾಂತರ ವರ್ಗರಹಿತವಾದ ಸಮಾಜವಾದೀ ವ್ಯವಸ್ಥೆಯನ್ನು ಕಾರ್ಮಿಕ ವರ್ಗವು ಸಾಧಿಸುವುದು. ಆ ಮೂಲಕ ಅತ್ಯಂತ ಅಧಿಕ ಉತ್ಪಾದನೆಗೆ ಎಲ್ಲರೂ ಸುಖದಿಂದ ಬಾಳುವ ಸಮಾಜ ವ್ಯವಸ್ಥೆಗೆ ಮುಂದಕ್ಕೆಡೆಯಾಗುವುದು.

ಒಟ್ಟಿನಲ್ಲಿ, ಮಾರ್ಕ್ಸ್‌ವಾದವು ಲೋಕದ ಕಾರ್ಮಿಕವರ್ಗಕ್ಕೆ ಇಂದಿನ ಜಾಗತಿಕ ಪರಿಸ್ಥಿತಿಯನ್ನು ಗುರುತಿಸಿ, ತಮ್ಮ ದೇಶದ ಪರಿಸ್ಥಿತಿಯನ್ನು ಕಂಡುಕೊಂಡು, ತಮ್ಮ ದೇಶದ ಪರಂಪರೆಯಲ್ಲಿ ಉತ್ತಮವಾದುದನ್ನೇ ಬೆಳೆಸಿ ಆಯಾಯ ದೇಶದಲ್ಲೆ, ಕಾರ್ಮಿಕವರ್ಗದ ನೇತೃತ್ವದಲ್ಲಿ ರಾಜಕೀಯ ಅಧಿಕಾರ ಸ್ಥಾಪನೆಗೆ ಮತ್ತು ಸಮಾಜದ ಬದಲಾವಣೆಗೆ ಮಾರ್ಗದರ್ಶನ ಮಾಡುವ ಶಾಸ್ತ್ರೀಯ ಸಿದ್ಧಾಂತ–ಪ್ರಾಕೃತಿಕ ವಿಜ್ಞಾನದಷ್ಟೆ, ಮಾರ್ಗದರ್ಶನ ಶಕ್ತಿಯುಳ್ಳದ್ದು-ಕಾರ್ಮಿಕವರ್ಗದ ಕಾರ್ಯಾಚರಣೆಗೆ ಈ ಮಾರ್ಕ್ಸ್‌ವಾದವು!

●

ಪಿ. ರಾಮಚಂದ್ರರಾವ್

ವರ್ಗ ಹೋರಾಟ–ಆಸ್ತಿಯುಳ್ಳ ಎಲ್ಲ ಥರದ ವರ್ಗಗಳು ಮತ್ತು ಆಸ್ತಿಯಿಲ್ಲದ ಜನತೆಯ ನಡುವಿನ ಹೋರಾಟ. ಎಲ್ಲ ಆಸ್ತಿಯಿಲ್ಲದ ಜನತೆಯ ಮೊದಲಿಗರಾಗಿ ಕಾರ್ಮಿಕ ವರ್ಗ ಇದೆ.

ವಿ. ಐ. ಲೆನಿನ್

ಇಬ್ಬರು ಗುಂಡರು

(6ನೇ ಪುಟದಿಂದ)

ಪೋಲೀಸ್‌ವ್ಯಾನಿನ ಬಳಿಗೆ ತಂದಾಗ ನಡೆದದ್ದು ಎಲ್ಲರಿಗೂ ತಿಳಿಯಿತು.

ಹೊರಹಾಕಿದರಂತೆ. ಹದ್ದುಪಾರು ಆಜ್ಞೆಯಂತೆ. ಗಡೀಪಾರಂತೆ. ಆ ಮುದುಕರನ್ನು !ಜಿಲ್ಲೆಯಿಂದಹೊರಗೆ! ಓ ದೇವರೇ!

ಉದ್ರೇಕಗೊಂಡ ರೈತ ಸಮುದಾಯ ಕಪ್ಪುವ್ಯಾನನ್ನು ಮುತ್ತಿತು.

ರೈತರು ಗರ್ಜಿಸಿದರು.

"ನಮ್ಮ ಮುಖಂಡರನ್ನು ಬಿಟ್ಟು ಬಿಡಿ!"

ಆ ಗರ್ಜನೆಗೆ ಉತ್ತರ, ಬಲವಾದ ಲಾಠೀಚಾರ್ಜು; ಜನಚೆದರಲೆಂದು ಆಕಾಶದತ್ತ ಹಾರಿಸಿದ ಎರಡುಗುಂಡು.

ವ್ಯಾನು ಬಲು ಪ್ರಯಾಸದಿಂದ ಹೊರಟುಹೋಯಿತು. ಪೋಲೀಸರು ಶಾಂತಿಪಾಲನೆಯ ಕರ್ತವ್ಯ ನೆರವೇರಿಸಿದರು.

ಮಧ್ಯಾಹ್ನದ ಊಟಕ್ಕೆಂದು ಹೊರಬಂದ ಶಾಲೆಯ ಹುಡುಗರು ಮುಖ ಕಿರಿದುಮಾಡಿ ನಿಂತರು. ಮಧ್ಯಮ ವರ್ಗದ ಜನ ಮುಖದ ಮೇಲಿನ ಬೆವರೊರೆಸಿಕೊಂಡರು.

ವಾತಾವರಣ ಕೆಂಧೂಳಿಯಿಂದ ತುಂಬಿತು. ಮರದೆಲೆಗಳು ಬಾಡಿದುವು. ಕಡುಬಿಸಿಲಲ್ಲಿ ಭಣಗುಡುವ ಮೌನ ಹರಡಿತು.

ಬಂದ ಮೆರವಣಿಗೆ ಗಾಯಗೊಂಡು ತಲೆಬಗ್ಗಿಸಿ ಭಾರವಾದ ಹೃದಯದಿಂದ ಹಿಂತಿರುಗುವ ಹೊತ್ತು.

...ಪೋಲೀಸ್‌ವ್ಯಾನು ಸಂಜೆ ಆರು ಗಂಟೆಗೆ ಜಿಲ್ಲೆಯ ಗಡಿಯನ್ನು ತಲುಪಿತು. ಅಲ್ಲಿ ಆ ಮುದುಕರನ್ನು ಇಳಿಸಿದರು.

ಅವರಿನ್ನು ಮುದುಕರಲ್ಲ, ಗುಂಡರು.

ಮತೀಯ ಗಲಭೆಯಾದಾಗ, ಹಿಂದೂ-ಮುಸಲ್ಮಾನ ಕಲಹವಾದಾಗ, ಪುಂಡರನ್ನು ಬಂಧಿಸಿ ಆ ಪ್ರದೇಶದಿಂದ ಗಡೀಪಾರು ಮಾಡಲೆಂದು ಪೋಲೀಸ್ ಶಾಸನಕ್ಕೆ ಹೊಸ ಕಲಮ್ಮನ್ನು ಜೋಡಿಸಲಾಗಿತ್ತು.

ಈಗ ರೈತಚಳುವಳಿಯ ಇಬ್ಬರು ಮುಖಂಡರ ಮೇಲೆ ಆ ಕಲಮಿನ ಪ್ರಯೋಗ. ಒಬ್ಬ ಹಿಂದೂ, ಇನ್ನೊಬ್ಬ ಮುಸಲ್ಮಾನ! 'ಗುಂಡ'ರೆಂದು ಅವರಿಗೆ ಹೊಸ ನಾಮಕರಣ.

ಆ ಎತ್ತರದಿಂದ ಪಶ್ಚಿಮದತ್ತ ನೋಡುತ್ತ, ತಮ್ಮ ನಾಡನ್ನು ಈಕ್ಷಿಸುತ್ತ, ಆ ಇಬ್ಬರು ಗುಂಡರು ನಿಂತರು. ಮುಳುಗುವ ಸೂರ್ಯನ ಹೊಂಬಣ್ಣ ಅವರ ಮುಖದ ಮೇಲೆ ಬೆಳಕು ಚೆಲ್ಲಿತ್ತು. ನೇಮನಾಯ್ಕರ ಮೀಸೆ, ಮನದ ದುಗುಡವನ್ನು ಪ್ರತಿಬಿಂಬಿಸುತ್ತ, ಕುಣಿಯುತ್ತಿತ್ತು. ಅಲೀಖಾನರ ಬೋಳು ತಲೆ ಚಕಚಕಿಸುತ್ತಿತ್ತು, ಬಿಳಿಯ ನೀಳಗಡ್ಡ ಹಾರಾಡುತ್ತಿತ್ತು.

ಕೆಳಗೆ ಕಾಣಿಸುತ್ತಿತ್ತು ಅವರು ಮೈಮುರಿದು ದುಡಿದಿದ್ದ ಭೂಮಿ. ಅಲ್ಲೇ ಅವರು ಹುಟ್ಟಿದ್ದು, ಬೆಳೆದದ್ದು. ಕರಾವಳಿಯ ಹಿತಕರ ಹವೆ, ಶೋಷಕ ಜಮೀನ್ದಾರರ ಕ್ರೂರಿ ಆಳುಗಳು, ಆ ಹೊಳೆ, ಕೆರೆ, ಅಲ್ಲಿನ ಕಳ್ಳಸಂತೆಯ ವ್ಯಾಪಾರಿಗಳು, ತಮ್ಮ ಪ್ರೀತಿಯ ಸಂಘಟನೆ-ಜನ-ಕಚೇರಿ-ಬಾವುಟ, ಎಲ್ಲವನ್ನೂ ಬಿಟ್ಟು ಅವರು ಬಂದಿದ್ದರು.

ನಾಯ್ಕರ ಹಿರಿಯ ಮಗನ ಲಗ್ನ, ತಂದೆ ಇಲ್ಲದೆಯೇ ನಡೆಯಬೇಕು. ತಮ್ಮ ಸೊಸೆಯ ಹೆರಿಗೆಯ ಕಾಲದಲ್ಲಿ ಮುದುಕ ಅಲೀಖಾನರು ಹತ್ತಿರ ಇರಲಾರರು.

ತುಂಬಿಬರುತ್ತಿದ್ದ ಕಣ್ಣುಗಳನ್ನು ಒರೆಸುತ್ತ ಅಲೀಖಾನರೆಂದರು:

"ಆ ಭೂಮಿಗೆ ನಾವು ಮತ್ತೆ ಹೋಗಿಯೇ ಹೋಗ್ತೇವೆ, ನೇಮು... ನಾವು ಸಾಯುವುದಕ್ಕೆ ಮುಂಚೆಯೇ ದುಡಿಯುವವರ ರಾಜ್ಯದ ಸ್ಥಾಪನೆ ಖಂಡಿತ ಆಗ್ತದೆ..."

ನೇಮನಾಯ್ಕ ಮರುಧ್ವನಿ ಕೊಟ್ಟರು:

"ಹೌದು ಅಲೀ. ನಮ್ಮ ಪ್ರೀತಿಯ ಭೂಮಿಗೆ ಮತ್ತೆ ಹೋಗಿಯೇ ಹೋಗ್ತೇವೆ".

...ಮುಖಂಡರನ್ನು ಕಳೆದುಕೊಂಡ ರೈತರು ಮೌನವಾಗಿ ಹಳ್ಳಿಗಳನ್ನು ಸೇರಿದರು. ಬಳಲಿದವರಿಗೆ ನಿದ್ದೆ ರಕ್ಷಣೆ ನೀಡಿತು. ತನಗೂ ದಣಿವು ಎನ್ನುವಂತೆ ಸಂಘದ ಕಚೇರಿಯ ದೊಡ್ಡ ಬಾವುಟ ಸುರುಳಿಸುತ್ತಿಕೊಂಡು ಸುಮ್ಮನಿತ್ತು.

ತಂಗಾಳಿ ಸದ್ದಿಲ್ಲದೆ ಬಂದು, ಮಲಗಿದ್ದವರ ದೇಹಗಳಲ್ಲಿ ಹೊಸ ಚೇತನ ತುಂಬಿತು.

...ಕೋಳಿಕೂಗಿತು. ಬೆಳ್ಳುಬೆಳಗು. ಸಂಘದ ಹಾಡನ್ನು ಯಾರೋ ಏರುಧ್ವನಿಯಲ್ಲಿ ಹಾಡುತ್ತಿದ್ದರು. ರೈತ ಸ್ತ್ರೀಪುರುಷರು ಎಚ್ಚತ್ತು, ಕಣ್ಣೊರೆಸಿಕೊಂಡು, ನೋಡಿದರು. ಅವರ ಸಂಘದ ಕೆಂಪುಬಾವುಟ ಎತ್ತರದಲ್ಲಿ, ತನಗೆ ಸೋಲಿಲ್ಲ—ಸೋಲು ಇಲ್ಲ ಎನ್ನುವಂತೆ, ಪಟಪಟನೆ ಹಾರಾಡುತ್ತಿತ್ತು.

ಈ ಕಥೆ ಮೊದಲಬಾರಿ ಪ್ರಕಟವಾದದ್ದು ಅವಿಭಾಜ್ಯ ಕಮ್ಯೂನಿಸ್ಟ್ ಪಕ್ಷದ ಕನ್ನಡ ಮುಖಪತ್ರವಾಗಿದ್ದ 'ಜನಶಕ್ತಿ'ಯಲ್ಲಿ—11 ಮೇ 1947ರ ಸಂಚಿಕೆಯಲ್ಲಿ.

ಕರ್ನಾಟಕದಲ್ಲಿ ರೈತಚಳುವಳಿಯ ತುತೂರಿಯೂದಿದವರು ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ವೀರರೈತರು. ಅವರ ಸಂಘಟನೆಗಾಗಿ ಆಗ ದುಡಿದವರು: ಎನ್. ಎಲ್. ಉಪಾಧ್ಯಾಯ, ಡಿ. ವಿ. ಸಿಂಗ್, ಬಿ. ಎನ್. ಧಾರವಾಡಕರ್, ಹಳದೀಪುರ್ ಮ್ಹಾಳ್ಸೇಕರ್, ಗಣೂಮಹಾಬಲ ನಾಯ್ಕ, ರಾಮ್‌ಕಲಗುಟ್ಕರ್, ಚುಡೋ, ಕೈತಾನ್ ಮತ್ತಿತರರು. (ಈ ಕಥೆಯ ಲೇಖಕನೂ ಆ ಹಳ್ಳಿಗಳಿಗೆ ಆಗೊಮ್ಮೆಈಗೊಮ್ಮೆ ಭೇಟಿನೀಡುತ್ತಿದ್ದ.) ಮುಖಂಡರಲ್ಲಿ ಗೌರವಾನ್ವಿತ ಸ್ಥಾನವಿದ್ದುದು ಇಬ್ಬರು ವೃದ್ಧರಿಗೆ-ಹೈದರ್ ಸಾಹೆಬ್ ಮತ್ತು ಜೋಗು ಪುರುಷೋತ್ತಮ ನಾಯ್ಕ. ಅವರಿಬ್ಬರನ್ನು, ಸ್ವಾತಂತ್ರ್ಯ ಪ್ರಾಪ್ತಿಗೆ ಮುನ್ನ ಆಡಳಿತ ನಡೆಸುತ್ತಿದ್ದ ನಡುಗಾಲ ಕಾಂಗ್ರೆಸ್ ಸರಕಾರ ಉತ್ತರ ಕನ್ನಡ ಜಿಲ್ಲೆಯಿಂದ 'ಗೂಂಡಾ' ಕಾನೂನಿನ ಅನ್ವಯ ಹೊರಹಾಕಿತು. ಇಬ್ಬರೂ ಹುಬ್ಬಳ್ಳಿಗೆ ಬಂದರು. ಹೈದರ್ ಸಾಹೇಬರ ವಾಸ ಹುಬ್ಬಳ್ಳಿಯ ಮಸೀದಿಯಲ್ಲಿ. ದಿನವೂ ಜನಶಕ್ತಿ ಕಾರ್ಯಾಲಯಕ್ಕೂ ಪಕ್ಷದ ಕಚೇರಿಗೂ ಭೇಟಿ. ಜೋಗುಪುರುಷೋತ್ತಮನಾಯ್ಕರ ಬಿಡಾರ ಜನಶಕ್ತಿ ಕಾರ್ಯಾಲಯದಲ್ಲೇ. ಆ ಇಬ್ಬರು ಗುಂಡರೇ ಈ ಕಥೆಯ ಪ್ರಮುಖ ಪಾತ್ರಗಳು.

ಗಣೂಮಹಾಬಲನಾಯ್ಕ ಬಂಧಿತರಾಗಿ ನಾಸಿಕ ಸೆರೆಮನೆಯಲ್ಲಿದ್ದಾಗ, 1950ರ ಫೆಬ್ರವರಿಯಲ್ಲಿ ಕೈದಿಗಳ ಮೇಲೆ ಹಾರಿಸಲಾದ ಗುಂಡುತಗಲಿ ಹುತಾತ್ಮರಾದರು.

ಬಂಧನ ಸೆರೆಮನೆ ಗಡೀಪಾರು, ಭೂಗತ ಬದುಕು—ಈ ರೀತಿಯ ಉಡುಗೊರೆಗಳನ್ನು ಬೇರೆ ಮುಖಂಡರಿಗೂ ಸ್ವತಂತ್ರ ಸರಕಾರ ನೀಡಿತು.

ನನ್ನ ಕಥಾನಾಯಕರು ಹೈದರ್‌ಸಾಹೆಬ್ ಮತ್ತು ಜೋಗುಪುರುಷೋತ್ತಮನಾಯ್ಕ ಈಗ ಇಲ್ಲ. ನೆನಪಿನ ಮಸುಕು ನಕಾಶೆಯ ಮೇಲೆ ಹೆಜ್ಜೆಗುರುತು ಉಳಿಸಿ ಅಗಲಿ ಹೋಗಿದ್ದಾರೆ.

—ನಿರಂಜನ

ಸಮತಾವಾದ ಒಂದು ತತ್ವ ಅಲ್ಲ, ಅದೊಂದು ಚಳುವಳಿ. ಅದು ನಿಯಮಗಳನ್ನು ಆಧರಿಸಿಲ್ಲ. ವಾಸ್ತವ ಸತ್ಯಗಳನ್ನು ಆಧರಿಸಿದೆ.

ಫ್ರೆಡರಿಕ್ ಎಂಗೆಲ್ಸ್

ಈಶಾನ್ಯದ ರೈಲು

ಅವನು ಅನೇಕ ದಿನಗಳಿಂದ ಕಾಯುತ್ತಿದ್ದ—ರೈಲೊಂದರ ಆಗಮನಕ್ಕಾಗಿ! ಅವನ ಮುಂದೆ ಹಳಿಗಳು (ಕಂಬಿಗಳು) ಅನಾಥವಾಗಿ ಬಿದ್ದಿದ್ದವು.

ಗ್ರಾಮಸ್ಥರು ಅವನನ್ನು ಕೇಳಿದರು;

'ಎಲ್ಲಿಗೆ ಹೋಗಬೇಕು' ?

'ಪಶ್ಚಿಮಕ್ಕೆ'

'ಎಷ್ಟು ದೂರ' ?

ಅಸಂಖ್ಯ ಕೆಂಪುಧ್ವಜಗಳನ್ನು ಎತ್ತಿ ಹಿಡಿದಂತೆ ತೋರುತ್ತಿದ್ದ ದೂರದ ದಿಗಂತದತ್ತ ಬೊಟ್ಟುಮಾಡಿ ಅವನು ಹೇಳಿದ;

'ರಕ್ತವರ್ಣದ ಆ ದಿಗಂತದ ಅಂಚಿನವರೆಗೆ'

ಅವನ ಮುಂದೆ ಕೆಲವು ರೈಲುಗಳು ಹಾದುಹೋದವು. ಅವನು ಮಾತ್ರ ಅಲ್ಲೇ ನಿಂತಿದ್ದ. ಮಳೆಗಾಲ, ಚಳಿಗಾಲ, ಬೇಸಿಗೆ ಹೀಗೆ ಋತುಗಳು ಅವನನ್ನು ದಾಟುತ್ತಿದ್ದವು. ಜನರು ಕೇಳಿದರು;

'ನೀನು ಹೋಗಲಿಲ್ಲವೇ ?

'ಇಲ್ಲ'

'ಸ್ವಲ್ಪ ಹೊತ್ತಿಗೆಮುಂಚೆ ಹಸಿರು, ಬಿಳಿ, ಕೇಸರಿಬಣ್ಣದ ಒಂದು ರೈಲು ಹೋಯಿತಲ್ಲಾ ಅದರಲ್ಲಿ ಹೋಗಲಿಲ್ಲವೇ ನೀನು ?

'ಅದು ಹೋಗುವುದಿಲ್ಲ'

'ಏಕೆ' ?

ಅವನು ತೋರಿಸಿದ ದಿಕ್ಕಿನೆಡೆ ಜನ ನೋಡಿದರು. ದೊಡ್ಡದೊಂದು ಕಾರ್ಖಾನೆ. ಅದರ ಸಮೀಪದಲ್ಲಿ ದೊಡ್ಡದೊಂದು ಬಂಗಲೆ. ಅದರ ಸುತ್ತ ಸುಂದರವಾದ ತೋಟ. ಬಂಗಲೆಯ ಮುಂದೆ ಮೂರು ಬಣ್ಣಗಳ ಆ ರೈಲುಗಾಡಿ ನಿಂತಿದ್ದುದು ಜನರಿಗೆ ಕಂಡಿತು.

'ಆ ರೈಲಿನ ನಂತರ ಮತ್ತೊಂದು ರೈಲು ಹೋಯಿತಲ್ಲಾ ಅದರಲ್ಲೇಕೆ ಹೋಗಲಿಲ್ಲ'?

'ಯಾವುದನ್ನು ಹೇಳುತ್ತಿದ್ದೀರಿ'?

'ಅದೇ ಆ ಕೆಂಪು ರೈಲು'

'ಇಲ್ಲ ಅದೂ ಸಹ ಹೋಗುವುದಿಲ್ಲ'

ಉದಯ್

ಅವನು ಕೈ ತೋರಿಸಿದ ದಿಕ್ಕಿಗೆ ಜನರೆಲ್ಲಾ ತಿರುಗಿದರು. ಕೆಂಪು ರೈಲಿನ ಕೆಲವು ಪೆಟ್ಟಿಗೆಗಳು ಮುಗುಚಿಕೊಂಡು ಬಿದ್ದಿದ್ದವು. ಕೆಲವು ಬೋಗಿಗಳು ತುಕ್ಕು ಹಿಡಿದು ವಿರೂಪಗೊಂಡಿದ್ದವು. ಇನ್ನು ಕೆಲವು ಬೋಗಿಗಳು ಜಮೀನ್ದಾರನ ಮನೆಯೊಳಗೆ ನಿಂತಿದ್ದವು. ಮತ್ತೆ ಕೆಲವು ಬೋಗಿಗಳು ಮಿಲ್ ಮಾಲೀಕನೊಬ್ಬನ ಮನೆಯ ಮುಂದೆ ಶೋಭಿಸುತ್ತಿತ್ತು. ಅವನು ಹೇಳಿದ;

'ಅದು ಹೋಗಲಾರದು ಕೇವಲ ಅದರ ಬಣ್ಣವಷ್ಟೇ ಕೆಂಪು' ಜನರು ಅವನನ್ನು ಕೇಳಿದರು. 'ಈಗೇನು ಮಾಡುವುದು ನಾವೂ ಸಹ ಹೋಗಬೇಕಾಗಿದೆಯಲ್ಲಾ'?

'ಮತ್ತೊಂದು ರೈಲು ಬರುತ್ತದೆ' ಅವನು ನಿರ್ಲಿಪ್ತವಾಗಿ ಹೇಳಿದನು.

'ಅದು ಹೇಗಿರುತ್ತದೆ'?

'ಬೆಂಕಿಯಂತೆ ಶುದ್ಧವಾಗಿರುತ್ತದೆ. ನಮ್ಮ ಮನೆ ಬಾಗಿಲುಗಳ ಮಾರ್ಗವಾಗಿಯೇ ಅದು ಬರುತ್ತದೆ'.

'ಅದರಲ್ಲಿ ಯಾರುಯಾರಿರುತ್ತಾರೆ'?

'ನೀವೂ ನಾನೂ! ರೈತರು, ಕಾರ್ಮಿಕರು ಎಲ್ಲರೂ'

'ಅದನ್ನು ಯಾರು ನಡೆಸಿಕೊಂಡು ಬರುತ್ತಾರೆ? ನಿನಗೆ ಗೊತ್ತೇ'?

'ಶಸ್ತ್ರ ಹಿಡಿದ ವೀರರು'

'ಎಲ್ಲಿಂದ ಅದು ಹೊರಡುತ್ತದೆ?'

'ಈಶಾನ್ಯದ ಮೂಲೆಯಿಂದ ಪಶ್ಚಿಮದ ಮೂಲಕ ಅದು ಬರುತ್ತದೆ. ಎಲ್ಲಾ ಪ್ರದೇಶಗಳನ್ನೂ ಅದು ಗೆಲ್ಲುತ್ತಾ ಬರುತ್ತದೆ.

ಮಾತನಾಡುತ್ತಿದ್ದಂತೆಯೇ ದೀರ್ಘವಾದ ಸಿಳ್ಳೆಯ ಶಬ್ದ ಕೇಳಿಸಿತು. ಎಲ್ಲಾ ದಿಕ್ಕುಗಳನ್ನೂ ಪೂರ್ವವನ್ನಾಗಿ ಪರಿವರ್ತಿಸುತ್ತಾ ರೈಲು ಬರುತ್ತಿತ್ತು.

ರೈತರು, ಕಾರ್ಮಿಕರು, ಮಕ್ಕಳುಗಳನ್ನು ತುಂಬಿಕೊಂಡು ಕಿಕ್ಕಿರಿದು ಆಯಾಸವಿಲ್ಲದೆ, ನಲಿಯುತ್ತಾ ರೈಲು ಗ್ರಾಮಸ್ಥರ ಬಳಿ ಬಂದು ನಿಂತಿತು. ರೈಲಿನಿಂದ ಜಿಗಿದು ಬಂದ ಉಲ್ಲಾಸಪೂರ್ಣ ವೀರರು ರೈತರನ್ನು ಆತ್ಮೀಯವಾಗಿ ಆಲಂಗಿಸಿಕೊಂಡರು.

ಜನರು ಹೇಳಿದರು,

'ನಾವು ಹೋಗಬೇಕಾಗಿದ್ದ ರೈಲು ಇದೇ'.

ಅನುವಾದಿತ ಕಥೆ

"ಪರ್ಯಾಯ ಒದಗಿಸುವ ಸಾಧ್ಯತೆ"

(3ನೇ ಪುಟದಿಂದ)

ಗಳಲ್ಲಿ ಬದಲಾವಣೆ ಇಲ್ಲದೆ ಸರಕಾರಗಳು ಬದಲಾದರೆ ಜನತೆಯ ಸಂಕಷ್ಟಗಳಿಗೆ ಕೊನೆ ಇಲ್ಲ. ಈ ರೀತಿಯ ಬದಲಿಯನ್ನು ನಿಜವಾದ ಬದಲಿ ಎನ್ನುವುದು ಸರಿ ಇಲ್ಲ. ಆದುದರಿಂದಲೇ ಬಾ. ಜ. ಪ., ಜನತಾಪಕ್ಷ ಅಥವಾ ಆಳುವವರ್ಗಗಳಿಗೆ ಸೇರಿದ ಪಕ್ಷಗಳು ನಿಜವಾದ ಪರ್ಯಾಯ ಒದಗಿಸುವುದು ಸಾಧ್ಯವಿಲ್ಲ.

ದೇಶದ ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ಒಂದು ಎಡಪಕ್ಷ ರಾಷ್ಟ್ರ ಮಟ್ಟದಲ್ಲಿ ಬದಲಿಯನ್ನು ಒದಗಿಸುವಷ್ಟು ಬೆಳೆದಿಲ್ಲವಾದರೂ, ಎಡಪಕ್ಷಗಳು ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದುಸೇರಿ ಕಾರ್ಯಕ್ರಮ ಮತ್ತು ಧೋರಣೆಗಳ ಆಧಾರದಲ್ಲಿ, ಜನತೆಯ ಹೋರಾಟಗಳ ಮೂಲಕ ಒಂದು ಎಡ ಪ್ರಜಾಪ್ರಭುತ್ವ ಬದಲಿಯನ್ನು ಬೆಳೆಸುವುದು ಸಾಧ್ಯವಿದೆ. ಸರ್ವಾಧಿಕಾರದ ಅಪಾಯ ಹೆಚ್ಚುತ್ತಿರುವ ಇಂದಿನ ಸನ್ನಿವೇಶದಲ್ಲಿ, ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಲು ಮತ್ತು ಜನಪರ ಚಳುವಳಿಗಳನ್ನು ನಡೆಸಲು ಪ್ರಜಾಪ್ರಭುತ್ವ ಶಕ್ತಿಗಳು ಮುಂದೆಬರುತ್ತಿರುವಾಗ ಎಡ ಪ್ರಜಾಪ್ರಭುತ್ವ ಶಕ್ತಿಗಳು ಸಮೀಪ ಬರುವುದು ಹೆಚ್ಚು ಸುಲಭ ಸಾಧ್ಯ. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳ ಬೆಳವಣಿಗೆಗಳು ಮತ್ತು ಅನುಭವಗಳು ಈ ದಿಸೆಯಲ್ಲಿ ಮುನ್ನಡೆಯಲು ಸಹಾಯಕವಾಗಿವೆ. ಬಂಡವಾಳಶಾಹಿ ವೃತ್ತಪತ್ರಿಕೆಗಳು ಮತ್ತು ಮಾಧ್ಯಮಗಳು ಈ ಸಾಧ್ಯತೆಯನ್ನು ತಳ್ಳಿಹಾಕುವತ್ತ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಪ್ರಚಾರ ನಡೆಸುತ್ತಲಿವೆ. ಆದರೆ ಈ ಸಾಧ್ಯತೆಯನ್ನು ವಾಸ್ತವಿಕವನ್ನಾಗಿಸುವತ್ತ ಎಡಪಕ್ಷಗಳ ಪ್ರಯತ್ನ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳ ನೇತೃತ್ವದಲ್ಲಿ ಬೆಳೆಯುತ್ತಿರುವ ಜನತೆಯ ಹೋರಾಟ ಹಾಗೂ ಸರ್ವಾಧಿಕಾರದ ವಿರೋಧವಾಗಿ ಕಂಡುಬರುತ್ತಿರುವ ವಿಶಾಲ ತಳಹದಿಯ ಒಗ್ಗಟ್ಟು ಮತ್ತು ಪ್ರತಿಭಟನೆ-ಇವೆಲ್ಲಾ ಆಶಾದಾಯಕವಾಗಿವೆ. ಬದಲೀ ಧೋರಣೆಗಳ ಆಧಾರದಲ್ಲಿ ರಾಷ್ಟ್ರಕ್ಕೊಂದು ಪರ್ಯಾಯ ರಾಜಕೀಯ ವ್ಯವಸ್ಥೆಯನ್ನು ಒದಗಿಸುವ ಸಾಧ್ಯತೆಯನ್ನು ವಾಸ್ತವಿಕವಾಗಿಸಲು ಇನ್ನೂ ಹೆಚ್ಚಿನ ಪ್ರಯತ್ನಗಳು ನಡೆಯಬೇಕಾಗಿದೆ. ಇದರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಪ್ರಮುಖ ಪಾತ್ರವಿದೆ.

●

ಓದುಗರಿಗೆ
ಮೇ ದಿನದ
ಕ್ರಾಂತಿಕಾರಿ
ಶುಭಾಶಯಗಳು

ಅಂತರ್ರಾಷ್ಟ್ರೀಯ ದುಡಿಯುವ ಜನರ ಸೌಹಾರ್ದತೆಯ ಮೇ ದಿನದ ಮಹತ್ವ

(5ನೇ ಪುಟದಿಂದ)

ಇತ್ಯಾದಿ ಹಲವು ನಾಮಧಾರೀ ಸಮಾಜವಾದಿಗಳು ಇಂತಹ ಪ್ರವೃತ್ತಿ ಪ್ರದರ್ಶಿಸಿದ್ದಾರೆ. ಸ್ವತಂತ್ರ, ಬಿ.ಎಲ್.ಡಿ., ಆರ್.ಎಸ್.ಎಸ್. ಕೂಡಾ ಸೇರಿದಂತೆ ಬಲಪಂಥೀಯರದ್ದೂ ಇದೇ ಕಥೆ.

ಸಾಮಾಜಿಕ ಸಂಕುಚಿತವಾದ ಭಾರತದ ಜನತೆಯ ಶತ್ರು

ಸಿ.ಪಿ.ಐ.(ಎಂ) ಬಿಟ್ಟು ಉಳಿದೆಲ್ಲಾ ರಾಜಕೀಯ ಗುಂಪುಗಳು ಸಾಮಾಜಿಕ ಸಂಕುಚಿತವಾದೀ ಪ್ರವೃತ್ತಿ ಪ್ರದರ್ಶಿಸಿವೆ ಎಂದು ಇತ್ತೀಚಿನ ಚರಿತ್ರೆಯಿಂದ ತಿಳಿಯುತ್ತದೆ. ಇದೇ ಸಮಯದಲ್ಲಿ ಇವೆಲ್ಲಾ ಗುಂಪುಗಳು ಬೇರೆ ದೇಶಗಳ ರಾಷ್ಟ್ರೀಯ ಹಿತಾಸಕ್ತಿಗಳ ಸಮರ್ಥಕದಾಗಿವೆ. ಬಲಪಂಥೀಯ ಪಕ್ಷಗಳು ತಮ್ಮ ಸಾಮ್ರಾಜ್ಯಶಾಹೀ ಪರ ಬಲವನ್ನು ತೋರ್ಪಡಿಸಿದ್ದರೆ, 'ಸಮಾಜವಾದಿ' ಗಳು ಪಶ್ಚಿಮ ಯೂರೋಪಿನ ಸಾಮಾಜಿಕ ಜನತಂತ್ರವಾದದ ಸಮರ್ಥಕರಾಗಿದ್ದಾರೆ. ಕಮ್ಯುನಿಸ್ಟರ ಬಲಪಂಥೀಯರು ಕುರುಡಾಗಿ ಸೋವಿಯೆತ್ ಯೂನಿಯನ್‌ನ ಕಮ್ಯುನಿಸ್ಟ್ ಪಕ್ಷವನ್ನು ಅನುಸರಿಸಿದರೆ ಎಡ ತೀವ್ರಗಾಮಿಗಳು ಚೀನೀ ಕಮ್ಯುನಿಸ್ಟ್ ಪಕ್ಷವನ್ನು ಅನುಸರಿಸಿದರು. ಒಂದಲ್ಲ ಒಂದು ದೇಶದೊಡನೆ ಸಖ್ಯತೆ ಬೆಳೆಸುವ ಹೆಸರಲ್ಲಿ ಸಿ.ಪಿ.ಐ.(ಎಂ) ಭಾರತದ ಜನತೆಯ ಹಿತಾಸಕ್ತಿಗಳಿಗೆ ವಿಶ್ವಾಸದ್ರೋಹ ಬಗೆಯಲ್ಲಿಲ್ಲ. ಇದೇ ಸಮಯದಲ್ಲಿ ಬೂರ್ಜ್ವಾ ರಾಷ್ಟ್ರೀಯವಾದದ ಪ್ರಲೋಭನೆಗೆ ಬಲಿಯಾಗದಂತೆ ಸಿ.ಪಿ.ಐ.(ಎಂ) ಶ್ರದ್ಧೆಯಿಂದ ದೂರ ನಿಂತಿತು.

ಶೋಷಣಾವಿರೋಧೀ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಹಿತಾಸಕ್ತಿಗಳರಕ್ಷಣೆ ಜನತಾ ಪ್ರಜಾಪ್ರಭುತ್ವದಿಂದ ಮಾತ್ರ

ಸಾಮ್ರಾಜ್ಯಶಾಹಿಗಳು ಭಾರತದ ಆರ್ಥಿಕವ್ಯವಸ್ಥೆಯನ್ನು 'ಅಸ್ಥಿರಗೊಳಿಸು'ವುದರ ವಿರುದ್ಧ ಹೋರಾಟದ ಹೆಸರಿನಲ್ಲಿ ಡಾಂಗೆಯವರು ತಮ್ಮ ಸಿದ್ಧಾಂತಗಳನ್ನು ಮಂಡಿಸಿದ್ದರು. ತೋರಿಕೆಗೆ ಮಾತ್ರ ಸಾಮ್ರಾಜ್ಯಶಾಹೀ ವಿರೋಧಿಯೆನಿಸುವ ಈ ಹೋರಾಟದಲ್ಲಿ ಅವರು ಭಾರತದ ಕಾರ್ಮಿಕವರ್ಗದ ಹಿತಾಸಕ್ತಿಗಳನ್ನು ಇತರ ಹಿತಾಸಕ್ತಿಗಳ ಅಧೀನಗೊಳಿಸಿದರು. ಈ ಸಾಮಾಜಿಕ ಸಂಕುಚಿತವಾದ ಭಾರತದಲ್ಲಿ ಸಮಾಜವಾದೀ ಶಕ್ತಿಗಳಿಗೂ ಸಹಾಯಕವಾಗಲಿಲ್ಲ ಮತ್ತು ಅದು ನಿಜವಾಗಿ ಸಾಮ್ರಾಜ್ಯಶಾಹೀ ವಿರೋಧಿಯೂ ಆಗಿರಲಿಲ್ಲ ಎಂಬುದನ್ನು ನಾವು ನೋಡಿದ್ದೇವೆ. ನಮ್ಮ ದೇಶದ ಬೂರ್ಜ್ವಾ ವರ್ಗವನ್ನು ಬೆಂಬಲಿಸುವುದರಿಂದ ಸಾಮ್ರಾಜ್ಯಶಾಹಿಯೊಡನೆ ಹೋರಾಡುವುದು ಸಾಧ್ಯವಿಲ್ಲ. ಇಲ್ಲಿ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳ ವಿರುದ್ಧ ಹೋರಾಡಬೇಕಿದ್ದರೆ ನಮ್ಮ ದೇಶದಲ್ಲಿನ ಶೋಷಣೆಯ ವಿರುದ್ಧವೇ ಹೋರಾಡಬೇಕಾಗುತ್ತದೆ. ಕಾರ್ಮಿಕ ವರ್ಗದ ನೇತೃತ್ವದಲ್ಲಿ ಎಲ್ಲಾ ಸಾಮ್ರಾಜ್ಯಶಾಹೀ ವಿರೋಧೀ ಶಕ್ತಿಗಳ, ಸಂಘಟಿತ ಹಾಗೂ ರಾಜಕೀಯ ಪ್ರಜ್ಞೆ ಹೊಂದಿದ ಶ್ರಮಿಕ ಜನಗಳ, ಎಲ್ಲಾ ದೇಶಪ್ರೇಮಿಗಳ, ನಮ್ಮ ದೇಶದ ಪ್ರಜಾಪ್ರಭುತ್ವವಾದೀ ಸಾಮ್ರಾಜ್ಯಶಾಹೀ ವಿರೋಧೀ ಹಾಗೂ ವಿದೇಶೀ ಪ್ರಭಾವವಿಲ್ಲದೆ ನಮ್ಮ ದೇಶವನ್ನು ಅಭಿವೃದ್ಧಿಗೊಳಿಸುವುದರಲ್ಲಿ ನಿಜವಾಗಿಯೂ ಆಸಕ್ತಿಹೊಂದಿದ ಬೂರ್ಜ್ವಾಗಳ ಸಖ್ಯತೆ ಮಾತ್ರ ಶೋಷಣಾ ವಿರೋಧೀ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡಲು ಮತ್ತು ಜಾಗತಿಕ ಮಟ್ಟದಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ಅಂದರೆ ಶೋಷಣಾವಿರೋಧೀಅಂತರಾಷ್ಟ್ರೀಯ ಹಿತಾಸಕ್ತಿಗಳನ್ನು ಪ್ರತಿಪಾದಿಸಲು ಸಾಧ್ಯ.

ಎಡಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕ್ರೋಢೀಕರಣ ಅಗತ್ಯ

ಭಾರತದಲ್ಲೀಗ ಮೂಡಿಬರುತ್ತಿರುವ ಎಡಶಕ್ತಿಗಳ ಐಕ್ಯತೆ ಮತ್ತಷ್ಟು ಶಕ್ತಿಶಾಲಿಯಾಗಬೇಕು. ಸತತವಾದ ಸಂಯುಕ್ತ ಕ್ರಿಯಾಚರಣೆಗಳು ಮತ್ತು ಸೈದ್ಧಾಂತಿಕ ಹೋರಾಟಗಳ ಫಲವಾಗಿ ಕಾರ್ಮಿಕವರ್ಗಕ್ಕೆ ಪರಕೀಯವಾದ ಸೈದ್ಧಾಂತಿಕ ನಿಲುವುಗಳನ್ನು ಸೋಲಿಸುವುದರ ಮೂಲಕ ಮಾತ್ರ ಇದು ಸಾಧ್ಯ. ಬೆಂಗಳೂರಿನಲ್ಲಿ ಸಂಯುಕ್ತವಾಗಿ 1981ರ ಮೇ ದಿನವನ್ನು ಆಚರಿಸಿರುವುದು ಈ ದಿಕ್ಕಿನಲ್ಲಿ ಇಟ್ಟ ಒಂದು ಹೆಜ್ಜೆ. ವಿವಿಧ ಅಂತರಾಷ್ಟ್ರೀಯ ವಿದ್ಯಾರ್ಥಿ ಗುಂಪುಗಳು ಭಾಗವಹಿಸಿದ್ದು, ಅಂತರಾಷ್ಟ್ರೀಯ ಕಾರ್ಮಿಕ ಗೀತೆಯನ್ನು ಹಾಡಿದ್ದು, ಶೋಷಣೆಯ ವಿರುದ್ಧದ ಹಾಡುಗಳಿಗೆ ಕಂಡುಬಂದ ಉತ್ತಮ ಪ್ರತಿಕ್ರಿಯೆ ಇವೆಲ್ಲಾ ಮೂಡಿಬರುತ್ತಿರುವ ಕ್ರೋಢೀಕರಣದ ಸ್ಪಷ್ಟ ಚಿಹ್ನೆಗಳು. ಸೈದ್ಧಾಂತಿಕ ಕ್ರೋಢೀಕರಣದ ಪಾತಳಿಯಲ್ಲೂ ಈ ಪ್ರಯತ್ನಗಳನ್ನು ಮುಂದುವರಿಸಬೇಕು. ಕಾರ್ಮಿಕ ವರ್ಗಕ್ಕೆ ಪರಕೀಯವಾದ ತಮ್ಮ ಹಳೆಯ ಸೈದ್ಧಾಂತಿಕ ನಿಲುವುಗಳನ್ನು ಇತರ ಗುಂಪುಗಳು ಕೈಬಿಡಬೇಕು. ಹಾಗಾದಲ್ಲಿ ಮಾತ್ರ ಮೇ ದಿನದ ಅಂದರೆ ಅಂತರಾಷ್ಟ್ರೀಯ ದುಡಿಯುವ ಜನರ ಸೌಹಾರ್ದ ದಿನದ ಮಹತ್ವವನ್ನು ನಿಜವಾಗಿಯೂ ಸ್ಥಾಪಿಸಬಹುದು.

o

ಮಾರ್ಕ್ಸ್ ಮತ್ತು ಎಂಗೆಲ್ಸರು ದುಡಿಯುವ ವರ್ಗಕ್ಕೆ ಮಾಡಿದ ಸೇವೆಯನ್ನು ಕೆಲವೇ ಮಾತುಗಳಲ್ಲಿ ಹೀಗೆ ವಿವರಿಸಬಹುದು: ತಮ್ಮನ್ನು ತಾವು ಅರಿತುಕೊಳ್ಳಲು ಮತ್ತು ತಮ್ಮ ಬಗ್ಗೆ ತಾವು ಪ್ರಜ್ಞಾಪೂರ್ವಕವಾಗಿರಲು, ದುಡಿಯುವ ವರ್ಗಕ್ಕೆ ಅವರು ಹೇಳಿಕೊಟ್ಟರು, ಮತ್ತು ಕನಸುಗಳ ಜಾಗದಲ್ಲಿ ವಿಜ್ಞಾನವನ್ನು ತಂದಿಟ್ಟರು.

ವಿ. ಐ. ಲೆನಿನ್

ಐಕ್ಯರಂಗ ಓದಿ : ನಿಮ್ಮ ಸ್ನೇಹಿತರಿಗೂ ಓದಿಸಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT